24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 11 | ನವದೆಹಲಿ | ಬೆಲೆ ₹10 | ಜುಲೈ 7 2026, ಮಂಗಳವಾರ

|| ಓಂ ಶ್ರೀ ಗುರುಬಸವಲಿಂಗಾಯ ನಮಃ ||





## ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

ಕೇಂದ್ರ ಕಾರ್ಯಾಲಯ, ಮೈಸೂರು

ಆಡಳಿತ ಕಾರ್ಯಾಲಯ, ಜಗದ್ಗುರು ಶ್ರೀ ಶಿವರಾತ್ರೀಶ್ವರ ವೃತ್ತ,
9ನೇ ಬ್ಲಾಕ್, ಜಯನಗರ, ಬೆಂಗಳೂರು

ಶರಣರ ಬರವೆಮಗೆ ಪ್ರಾಣ ಜೀವಾಳವಯ್ಯ



ಜಗದ್ಗುರು
ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು
ಸಂಸ್ಥಾಪಕರು

# 14ನೇಯ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ

**7 ಮತ್ತು 8 ಜುಲೈ 2026**
**ಮಂಗಳವಾರ – ಬುಧವಾರ**

**ಶ್ರೀ ಬಸವೇಶ್ವರ ಸುಜ್ಞಾನ ಮಂಟಪ**
(ಹೊಸಹಳ್ಳಿ ಮೆಟ್ರೋ ಸ್ಟೇಷನ್ ಬಳಿ)
ವಿಜಯನಗರ, ಬೆಂಗಳೂರು

**ಉದ್ಘಾಟನೆ**
7 ಜುಲೈ 2026 * ಮಂಗಳವಾರ ಬೆಳಗ್ಗೆ 10.30

### ದಿವ್ಯ ಸಾನ್ನಿಧ್ಯ



ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಸುತ್ತೂರು ಶ್ರೀಕ್ಷೇತ್ರ



ನಿಪ್ರಸ್ವ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು
ಶ್ರೀ ಸಿದ್ಧಗಂಗಾ ಕ್ಷೇತ್ರ
ತುಮಕೂರು



ಸಮ್ಮೇಳನಾಧ್ಯಕ್ಷರು
ನಾಡೋಜ ಗೊ.ರು. ಚನ್ನಬಸಪ್ಪ
ಹಿರಿಯ ಸಾಹಿತಿಗಳು



ಉದ್ಘಾಟನೆ
ಶ್ರೀ ಡಿ.ಕೆ. ಶಿವಕುಮಾರ್
ಮುಖ್ಯಮಂತ್ರಿಗಳು



ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರ ಅನಾವರಣ
**ಶ್ರೀ ಎಂ. ಕೃಷ್ಣಪ್ಪ**
ಶಾಸಕರು ಹಾಗೂ ಮಾಜಿ ಸಚಿವರು



ಕಲ್ಯಾಣ ಸಂಗಮ - ಸ್ಮರಣ ಸಂಚಿಕೆ ಬಿಡುಗಡೆ
**ಶ್ರೀ ವಿ. ಸೋಮಣ್ಣ**
ಕೇಂದ್ರದ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರು



ಮಹಾಮನೆ - ವಿಶೇಷ ಸಂಚಿಕೆ ಬಿಡುಗಡೆ
**ಡಾ. ಎಂ.ಬಿ ಪಾಟೀಲ್**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು



ಬಸವಣ್ಣನವರ ಭಾವಚಿತ್ರ ಅನಾವರಣ
**ಡಾ. ಶರಣ ಪ್ರಕಾಶ್ ಪಾಟೀಲ**
ವೈದ್ಯಕೀಯ ಶಿಕ್ಷಣ ಸಚಿವರು

### ಮುಖ್ಯ ಅತಿಥಿಗಳು

**ಶ್ರೀ ಎಸ್ ಸುರೇಶ್ ಕುಮಾರ್**
ಶಾಸಕರು ಹಾಗೂ ಮಾಜಿ ಸಚಿವರು

**ಶ್ರೀ ಕೆ. ಗೋಪಾಲಯ್ಯ**
ಶಾಸಕರು ಹಾಗೂ ಮಾಜಿ ಸಚಿವರು

**ಶ್ರೀ ಸಿ.ಕೆ. ರಾಮಮೂರ್ತಿ**
ವಿಧಾನಸಭಾ ಸದಸ್ಯರು

**ಶ್ರೀಮತಿ ಗಂಗಾಬಿಕೆ ಮಲ್ಲಿಕಾರ್ಜುನ**
ಮಾಜಿ ಮಹಾಪೌರರು, ಬಿ.ಬಿ.ಎಂ.ಪಿ

**ಶ್ರೀ ಬಿ.ಎಸ್. ಪುಟ್ಟರಾಜು**
ಮಾಜಿ ಉಪ ಮಹಾಪೌರರು, ಬಿ.ಬಿ.ಎಂ.ಪಿ

**ಶ್ರೀ ಎಸ್.ಪಿ. ದಯಾನಂದ**
ವ್ಯವಸ್ಥಾಪಕ ನಿರ್ದೇಶಕರು, ಡಿ.ಎಸ್-ಮ್ಯಾಕ್ಸ್



ನಿಪ್ರಸ್ವ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಭಾವಚಿತ್ರ ಅನಾವರಣ
**ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳ್ಕರ್**
ಶಾಸಕರು ಹಾಗೂ ಮಾಜಿ ಸಚಿವರು

ನಿಕಟಪೂರ್ವ ಸಮ್ಮೇಳನಾಧ್ಯಕ್ಷರ ನುಡಿ
**ಡಾ. ಸಿದ್ಧರಾಮ ಬೆಲ್ದಾಳ ಶರಣರು**
ಬೀದರ್

ಪ್ರಾಸ್ತಾವಿಕ ನುಡಿ
**ಡಾ. ಕೆ.ವಿ. ನಾಗರಾಜಮೂರ್ತಿ**
ಅಧ್ಯಕ್ಷರು, ಶ.ಸಾ.ಪರಿಷತ್ತು,
ಬೆಂಗಳೂರು ನಗರ ಘಟಕ

ವಂದನಾರ್ಪಣೆ :
**ಶ್ರೀ ಸೋಮಶೇಖರ ಶಿ. ಗಾಂಜಿ**

ನಿರೂಪಣೆ : ಶ್ರೀಮತಿ ದಿವ್ಯಾ ಆಲೂರು


ಸಾಮೂಹಿಕ ವಚನ ಪ್ರಾರ್ಥನೆ :
ಕದಳಿ ಮಹಿಳಾ ವೇದಿಕೆ, ಬೆಂಗಳೂರು ನಗರ ಘಟಕ

ವಚನ ಗಾಯನ : ಪಂ. ರವೀಂದ್ರ ಸೊರಗಾವಿ
ಮಧ್ಯಾಹ್ನ 1.30

ಸ್ವಾಗತ
**ಡಾ. ಸಿ. ಸೋಮಶೇಖರ**
ಅಧ್ಯಕ್ಷರು, ಅ.ಭಾ.ಶ.ಸಾ.ಪರಿಷತ್ತು



## ನಿತ್ಯ ಪಂಚಾಂಗ 7.07.2026 ಮಂಗಳವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ–ವಸಂತ/ಗ್ರೀಷ್ಮ ಋತು, ಚಾಂದ್ರಮಾನ, ವೈಶಾಖ – ಜ್ಯೇಷ್ಠ ಮಾಸ

**ನಿಜ ಜ್ಯೇಷ್ಠ ಬಹುಳ, ಸಪ್ತಮಿ, ಉತ್ತರಾಭಾದ್ರಾ ನಕ್ಷತ್ರ, ಹರಿಹರಪುರ ಉತ್ಸವ, ಆತ್ಮಕೂರು ಸತ್ಯಧೀರತೀರ್ಥ ಆರಾಧನೆ**

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ.5.04–6.33 | 12.00–1.30 | 3.00–4.00 |
| ಸೋಮ | ಬೆ.7.20–9.04 | 10.30–12.00 | 1.30–12.00 |
| ಮಂಗಳ | ಮ.3.25–4.59 | 9.00–10.30 | 12.00–1.30 |
| ಬುಧ | ಮ.12.16–1.50 | 7.30–9.00 | 10.30–12.00 |
| ಗುರು | ಮ.1.50–3.29 | 6.00–7.30 | 9.00–10.30 |
| ಶುಕ್ರ | ಬೆ.10.42–12.16 | 3.00–4.30 | 7.30–9.00 |
| ಶನಿ | ಬೆ.9.07–10.41 | 1.30–3.00 | 6.00–7.30 |

## ಕಾಂಗ್ರೆಸ್‌ಗೆ ಪರ್ಯಾಯ ರಾಜಕೀಯ ಶಕ್ತಿ ಕಟ್ಟಿದವರು ಶ್ಯಾಮಪ್ರಸಾದ್ ಮುಖರ್ಜಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ



ಬೆಂಗಳೂರು, ಜು.6: ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವೇ ಇಲ್ಲದ ಸಂದರ್ಭದಲ್ಲಿ ಪರ್ಯಾಯ ಶಕ್ತಿ ಕಟ್ಟಿದವರು ಭಾರತೀಯ ಜನಸಂಘದ ಸಂಸ್ಥಾಪಕ ಡಾ. ಶ್ಯಾಮಪ್ರಸಾದ್ ಮುಖರ್ಜಿ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಬಣ್ಣಿಸಿದ್ದಾರೆ.

ಡಾ.ಶ್ಯಾಮಪ್ರಸಾದ್ ಮುಖರ್ಜಿ ಅವರ ಜನ್ಮದಿನದ ಪ್ರಯುಕ್ತ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸೋಮವಾರ ಗೌರವ ನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮುಖರ್ಜಿ ಅವರು ಒಬ್ಬ ಮಹಾನ್ ಮೇಧಾವಿ, ಅಪರಿಮಿತ ದೇಶಭಕ್ತ, ಪ್ರತಿಭಾನ್ವಿತ ವ್ಯಕ್ತಿ. ವೀರೋಚಿತ ಹೋರಾಟ ಮಾಡಿದವರು. ಭಾರತದ ಏಕತೆಯಲ್ಲಿ ಪ್ರಮುಖ ಪಾತ್ರ ವಹಿಸಿದ ದಿಗ್ಗಜ ನಾಯಕರು ಎಂದು ನುಡಿದರು.

ಇದೇ ವೇಳೆ ಗಣ್ಯರು ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬಿಜೆಪಿಯ ಕರ್ನಾಟಕ ರಾಜ್ಯ ಸಹಉಸ್ತುವಾರಿ ಡಾ. ಸುಧಾಕರ್ ರೆಡ್ಡಿ, ಪ್ರತಿಪಕ್ಷ ನಾಯಕ ಆರ್.ಅಶೋಕ್, ಮೇಲ್ಮನೆ ಪ್ರತಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್, ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ, ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ರಾಜ್ಯ ಕಾರ್ಯಾಲಯ ಕಾರ್ಯದರ್ಶಿ ಲೋಕೇಶ್ ಅಂಬೇಕಲ್ಲು, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ, ರಾಜ್ಯ ಮಾಧ್ಯಮ ಸಂಚಾಲಕ ಕರುಣಾಕರ ಖಾಸಲೆ, ಪಕ್ಷದ ಪ್ರಮುಖರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

## ಬರ ಪರಿಸ್ಥಿತಿ ಎದುರಿಸಲು ಕ್ರಮ ಕೈಗೊಳ್ಳಿ: ಅಧಿಕಾರಿಗಳಿಗೆ ಡಾ.ಪರಮೇಶ್ವರ್ ಸೂಚನೆ

**ಅಗತ್ಯವಿದ್ದರೆ ಕೇಂದ್ರ ಗೃಹ ಸಚಿವರ ಭೇಟಿ, ಮುಂಚಿತವಾಗಿಯೇ ಎನ್‌ಡಿಆರ್‌ಎಫ್ ನಿಧಿ ಬಿಡುಗಡೆಗೆ ಒತ್ತಾಯ**



**ಬೆಂಗಳೂರು, ಜು.6:** ಬರಗಾಲ ಎದುರಿಸಬೇಕಾದ ಸಂದರ್ಭ ಬಂದಿದೆ. ಜನ, ಜಾನುವಾರುಗಳಿಗೆ ಕುಡಿಯುವ ನೀರು, ಮೇವಿನ ಸಮಸ್ಯೆ ಸೇರಿ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಅಗತ್ಯವಾಗಿರುವ ಕ್ರಮಗಳ ಕುರಿತು ನಾನು ಮತ್ತು ಸಿಎಂ ಅಧಿಕಾರಿಗಳಿಗೆ ಅಗತ್ಯ ಸೂಚನೆ ಮತ್ತು ನಿರ್ದೇಶನ ನೀಡಿದ್ದೇವೆ ಎಂದು ಡಿಸಿಎಂ ಡಾ.ಜಿ.ಪರಮೇಶ್ವರ್ ಹೇಳಿದರು.

ವಿಧಾನಸೌಧದ ಬಳಿ ಮಾಧ್ಯಮದೊಂದಿಗೆ ಸೋಮವಾರ ಮಾತನಾಡಿದ ಅವರು, ಈಗಾಗಲೇ ಬೆಳಗಾವಿ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಿ ಚರ್ಚಿಸಲಾಗಿದೆ. ಜಲಾಶಯಗಳು ಡೆಡ್ ಸ್ಟೋರೇಜ್‌ಗೆ ತಲುಪಿರುವುದರಿಂದ ನೀರನ್ನು ಎಚ್ಚರಿಕೆಯಿಂದ ಬಳಸಬೇಕು. ಲಭ್ಯವಿರುವ ನೀರನ್ನು ಕುಡಿಯಲು ಹೊರತುಪಡಿಸಿ, ಬೇರೆ ಉದ್ದೇಶಕ್ಕೆ ಬಳಕೆಯಾಗದಂತೆ ನೋಡಿಕೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಭಾನುವಾರ ಕೆಲವು ಕಡೆಗಳಲ್ಲಿ ಮಳೆಯಾಗಿದೆ. ಹೀಗೆಯೇ ಇನ್ನೊಂದೆರಡು ದಿನ ಮಳೆಯಾದ್ರೆ ಜಲಾಶಯಗಳು ಸ್ವಲ್ಪಮಟ್ಟಿಗಾದರೂ ತುಂಬಬಹುದು. ಮಲೆನಾಡಿನಲ್ಲಿ ಮಳೆಯಾಗುತ್ತಿರುವುದರಿಂದ ಕೆಆರ್‌ಎಸ್‌ಗೆ ಒಳಹರಿವು ಆರಂಭವಾಗಿದೆ. ಜಲಾಶಯಗಳು ಒಂದು ಹಂತಕ್ಕೆ ನೀರು ಸಂಗ್ರಹವಾದರೆ ಕುಡಿಯುವ ನೀರಿಗೆ ಸಮಸ್ಯೆಯಾಗುವುದಿಲ್ಲ ಎಂದು ಹೇಳಿದರು.

ಜಾನುವಾರುಗಳಿಗೆ ಸಮಸ್ಯೆಯಾಗದಂತೆ ಮೇವುಕಿಟ್‌ಗಳನ್ನು ವಿತರಿಸಲಾಗುತ್ತಿದೆ. ಬೋರ್‌ವೆಲ್ ಇರುವವರಿಗೆ ಬೀಜ ಕೊಟ್ಟರೆ ಮೇವು ಬೆಳೆದು ಕೊಡುತ್ತಾರೆ. ಅವಶ್ಯಕತೆ ಕಂಡುಬಂದಲ್ಲಿ ಮೇವು ಬ್ಯಾಂಕ್, ಗೋಶಾಲೆಗಳನ್ನು ನಿರ್ಮಿಸುವಂತೆ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ಕೇಂದ್ರ ಸರ್ಕಾರಕ್ಕೂ ವರದಿ ಸಲ್ಲಿಸಲಾಗುವುದು. ಎನ್‌ಡಿಆರ್‌ಎಫ್ ಹಣವನ್ನು ಮುಂಚಿತವಾಗಿಯೇ ಬಿಡುಗಡೆ ಮಾಡುವಂತೆ ಒತ್ತಾಯಸಲಾಗಿದೆ. ಸಾಧ್ಯವಾದರೆ, ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡಿ ಪರಿಸ್ಥಿತಿಯ ಬಗ್ಗೆ ವಿವರಿಸಿ, ಮನವಿಯನ್ನು ಸಲ್ಲಿಸುವುದಾಗಿ ಡಾ.ಜಿ. ಪರಮೇಶ್ವರ್ ತಿಳಿಸಿದರು.

## ಬೆಂಗಳೂರು ಕಲ್ಲುಗಣಿ ದುರಂತಕ್ಕೆ ಎನ್‌ಎಚ್‌ಆರ್‌ಸಿ ಸ್ವಯಂಪ್ರೇರಿತ ದೂರು

ನವದೆಹಲಿ : ಬೆಂಗಳೂರಿನ ಕಲ್ಲುಗಣಿಯಲ್ಲಿ ಭಾರೀ ಗ್ರಾನೈಟ್ ಬಂಡೆ ಕುಸಿದು ಏಳು ವಲಸೆ ಕಾರ್ಮಿಕರು ಮೃತಪಟ್ಟಿದ್ದು, ಐವರು ಗಾಯಗೊಂಡಿರುವ ದುರಂತ ಪ್ರಕರಣವನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡಿದೆ.

ಈ ಸಂಬಂಧ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಿರುವ ಆಯೋಗ, ಘಟನೆಯ ಕುರಿತು ಸಮಗ್ರ ವರದಿಯನ್ನು ಎರಡು ವಾರಗಳೊಳಗೆ ಸಲ್ಲಿಸುವಂತೆ ನಿರ್ದೇಶಿಸಿದೆ. ಜು. 2ರಂದು ಬೆಂಗಳೂರಿನ ಕಲ್ಲುಗಣಿಯಲ್ಲಿ ಈ ದುರಂತ ಸಂಭವಿಸಿತ್ತು. ಭಾರೀ ಗ್ರಾನೈಟ್ ಬಂಡೆ ಏಕಾಏಕಿ ಕಾರ್ಮಿಕರ ಮೇಲೆ ಉರುಳಿ ಬಿದ್ದ ಪರಿಣಾಮ ಸ್ಥಳದಲ್ಲೇ ಏಳು ಮಂದಿ ಮೃತಪಟ್ಟರೆ, ಐವರು ಗಂಭೀರವಾಗಿ ಗಾಯಗೊಂಡಿದ್ದರು. ಘಟನೆ ಸಂಭವಿಸಿದ ವೇಳೆ ಸುಮಾರು 16 ಮಂದಿ ಕಾರ್ಮಿಕರು ಗಣಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ವರದಿಗಳು ತಿಳಿಸಿವೆ.

# ಮಹಿಳೆಯರಿಗೆ ಶಕ್ತಿ ತುಂಬಲು ನಮ್ಮ ಸರ್ಕಾರ ಬದ್ಧ: ಸಿಎಂ ಡಿ.ಕೆ.ಶಿವಕುಮಾರ್



**ಹೆಣ್ಣು ಎಂದರೆ ಭೂಮಿ, ಧೈರ್ಯ, ಭರವಸೆ, ಒಗ್ಗಟ್ಟು, ಶಕ್ತಿ, ಬೆಳಕು**

**ಭಾರತ ಜೋಡೋ ಯುವ ಸಂಘ ನಿಮ್ಮ ಸಂಘಟನೆ, ಸಂಸ್ಕೃತಿ, ಕಲೆ ಅನಾವರಣಕ್ಕೆ ವೇದಿಕೆ**

**ಬಸವಕಲ್ಯಾಣ, ಜು.06:** ನಮ್ಮ ಸರ್ಕಾರ ಮಹಿಳೆಯರ ಸಬಲೀಕರಣಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ರಾಜ್ಯದ ಮಹಿಳೆಯರು ನಮಗೆ ಬೆಂಬಲ ನೀಡಿದ್ದು, ಅವರಿಗೆ ಶಕ್ತಿ ತುಂಬಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ತಿಳಿಸಿದರು.

ಬಸವಕಲ್ಯಾಣದ ಬಸವ ಮಹಾಮನೆಯಲ್ಲಿ ಸೋಮವಾರ ನಡೆದ ಅಕ್ಕಪಡೆ–ಮಹಿಳೆಯರ ಶಕ್ತಿ ಪ್ರದರ್ಶನ ಮತ್ತು ಆತ್ಮರಕ್ಷಣಾ ಕಾರ್ಯಕ್ರಮದಲ್ಲಿ ಶಿವಕುಮಾರ್ ಅವರು ಭಾಗವಹಿಸಿ ಮಾತನಾಡಿದರು.

ಹೆಣ್ಣು ಕುಟುಂಬದ ಕಣ್ಣು. ಹೆಣ್ಣು ಎಂದರೆ ಭೂಮಿ, ಧೈರ್ಯ, ಭರವಸೆ, ಒಗ್ಗಟ್ಟು, ಶಕ್ತಿ, ಬೆಳಕು. ನಿಮ್ಮ ಮಾರ್ಗದರ್ಶನದಂತೆ ಪ್ರತಿಯೊಂದು ಕುಟುಂಬ ಬೆಳಗುತ್ತಿದೆ. ನಾರಿ ಶಕ್ತಿ ದೇಶದ ಶಕ್ತಿ. ನಾನು ಇಂದು ಬಸವಕಲ್ಯಾಣದಲ್ಲಿರುವ ಬಸವಣ್ಣನವರ ಅನುಭವ ಮಂಟಪದಿಂದ ಬರ ಪರಿಸ್ಥಿತಿ ಅಧ್ಯಯನ ಪ್ರವಾಸ ಆರಂಭಿಸಲು ಬಂದಿದ್ದೇನೆ.

ಇಲ್ಲಿಂದ ಕಲಬುರ್ಗಿಗೆ ಹೋಗಿ, ಕಲ್ಯಾಣ ಕರ್ನಾಟಕದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಜೊತೆ ಚರ್ಚೆ ಮಾಡುತ್ತೇನೆ. ನಾವು ಯಾವುದೇ ಗ್ರಾಮಕ್ಕೆ ಹೋದರೂ ಅಲ್ಲಿ ಗ್ರಾಮದೇವತೆ ಬಗ್ಗೆ ಕೇಳುತ್ತೇವೆ. ನಮ್ಮ ಭೂಮಿಯನ್ನು ಮಾತೃಭೂಮಿ, ಭೂಮಿತಾಯಿ ಎಂದು ಪರಿಗಣಿಸುತ್ತೇವೆ ಎಂದು ಬಣ್ಣಿಸಿದರು.

**ಭಾರತ ಜೋಡೋ ಯುವ ಸಂಘ ನಿಮ್ಮ ಸಂಘಟನೆ, ಸಂಸ್ಕೃತಿ, ಕಲೆ ಅನಾವರಣಕ್ಕೆ ವೇದಿಕೆ**

ಮಹಿಳೆಯರ ಸುರಕ್ಷತೆಗಾಗಿ ಅಕ್ಕಪಡೆ ಆರಂಭಿಸಲಾಗಿದೆ. ನಮ್ಮ ಸರ್ಕಾರ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಮುಖಂಡತ್ವದಲ್ಲಿ ಈ ಪಡೆಯನ್ನು ರಚಿಸಿದೆ. ಈ ಪಡೆಗೆ ಸೇರಿರುವವರಿಗೆ ತುಂಬು ಹೃದಯದ ಅಭಿನಂದನೆ ಸಲ್ಲಿಸುತ್ತೇನೆ. ನಿಮ್ಮ ಶಕ್ತಿ, ಧೈರ್ಯ, ಸಾಧನೆಗೆ ಫಲ ಸಿಗುತ್ತದೆ. ಮುಂದಿನ ದಿನಗಳಲ್ಲಿ ನಮ್ಮ ಸರ್ಕಾರ ಐತಿಹಾಸಿಕ ತೀರ್ಮಾನ ಮಾಡಲಿದೆ. ಮಹಿಳೆಯರಿಗಾಗಿ ಶಕ್ತಿ, ಗೃಹಜ್ಯೋತಿ, ಗೃಹಲಕ್ಷ್ಮಿ ಕಾರ್ಯಕ್ರಮವನ್ನು ಈಗಾಗಲೇ ನೀಡಿದ್ದೇವೆ. ಮಹಿಳೆಯರು ಹಾಗೂ ಯುವಕರಿಗೆ ಪ್ರತಿ ಪಂಚಾಯ್ತಿಯಲ್ಲಿ ನಿಮ್ಮ ಸಂಘಟನೆ, ಸಂಸ್ಕೃತಿ, ಕಲೆ ಅನಾವರಣಕ್ಕೆ ಹಾಗೂ ಜಾತ್ಯಾತೀತ ತತ್ವ ಉಳಿಸಿಕೊಂಡು ಒಗ್ಗಟ್ಟಿನಿಂದ ಇರಲು ರಾಜ್ಯದಲ್ಲಿ 10 ಸಾವಿರ ಭಾರತ ಜೋಡೋ ಯುವ ಸಂಘ ರಚಿಸಲು ಸರ್ಕಾರ ಆದೇಶ ಮಾಡಿದೆ ಎಂದು ತಿಳಿಸಿದರು.

ನಾವು ಮಾತೃ ದೇವೋಭವ ಎಂದು ಪರಿಗಣಿಸಿದ್ದೇವೆ. ನೀವೆಲ್ಲರೂ ನಮ್ಮ ಜೊತೆ ಕೈಜೋಡಿಸಿ, ನಮಗೆ ಶಕ್ತಿ ತುಂಬಿದ್ದೀರಿ. ನಿಮಗೆ ಶಕ್ತಿ ನೀಡುವ ಜವಾಬ್ದಾರಿ ನಮ್ಮದು. ನಿಮ್ಮಲ್ಲಿ ನಾಯಕತ್ವ ಬೆಳೆಯಬೇಕು. ಪಂಚಾಯ್ತಿಯಿಂದ ಸಂಸತ್ತಿನವರೆಗೂ ನಾಯಕತ್ವ ಬೆಳೆಯಬೇಕು. ರಾಜಕೀಯವಾಗಿ ಮಾತ್ರವಲ್ಲ, ನಿಮ್ಮ ನಿಮ್ಮ ಕ್ಷೇತ್ರದಲ್ಲಿ ನಾಯಕರಾಗಿ ಬೆಳೆಯಬೇಕು. ನಿಮ್ಮ ಜೊತೆಯಲ್ಲಿ ಡಿ ಕೆ ಶಿವಕುಮಾರ್ ಹಾಗೂ ಈ ಸರ್ಕಾರ ಇರಲಿದೆ ಎಂದು ತಿಳಿಸಿದರು.



ಸಿಎಂ ಡಿ.ಕೆ.ಶಿವಕುಮಾರ್ ಅವರು ಬೀದರ್‌ನ ಬಸವಕಲ್ಯಾಣದಲ್ಲಿ ಛತ್ರಪತಿ ಶಿವಾಜಿ ಮಹಾರಾಜ್, ಬಾಬಾಸಾಹೇಬ್ ಡಾ.ಅಂಬೇಡ್ಕರ್, ಬೊಮ್ಮಗುಂಡೇಶ್ವರ ಹಾಗೂ ಬಸವಣ್ಣನವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಡಿಸಿಎಂ ಡಾ.ಜಿ.ಪರಮೇಶ್ವರ, ಸಚಿವ ಈಶ್ವರ ಖಂಡ್ರೆ ಮತ್ತಿತರರು ಇದ್ದರು.

## ಕರ್ನಾಟಕವನ್ನು ಉತ್ತರಪ್ರದೇಶ, ಬಿಹಾರ ಮಾಡುವ ಬಿಜೆಪಿ ಯತ್ನ ಫಲಿಸಲು ಬಿಡಲ್ಲ: ಬಿ.ಕೆ.ಹರಿಪ್ರಸಾದ್

**ಬೆಂಗಳೂರು, ಜು.6:** ಕರ್ನಾಟಕವನ್ನು ಉತ್ತರ ಪ್ರದೇಶ, ಬಿಹಾರದಂತೆ ಮಾಡಲು ಬಿಜೆಪಿ ನಾಯಕರು ಹುನ್ನಾರ ನಡೆಸುತ್ತಿದ್ದಾರೆ. ಅವರ ಯತ್ನಗಳು ಫಲಿಸಲ್ಲ. ನಮ್ಮ ಹೆಣದ ಮೇಲೆ ಆ ಕೆಲಸ ಮಾಡಬೇಕಾಗುತ್ತದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ತೀವ್ರ ಎಚ್ಚರಿಕೆ ನೀಡಿದ್ದಾರೆ.

ಎಸ್‌ಐಆರ್ ವಿಚಾರವಾಗಿ ಉದ್ಭವಿಸಿರುವ ವಿವಾದದ ಕುರಿತು ಮಾತನಾಡಿದ ಅವರು, ಎಸ್‌ಐಆರ್‌ನಲ್ಲಿ ಲೋಪದೋಷಗಳಿದ್ದರೆ ಚುನಾವಣಾ ಆಯೋಗ ನೋಡಿಕೊಳ್ಳುತ್ತದೆ. ಜನಸಾಮಾನ್ಯರಿಗೆ ಎನ್ಯುಮರೇಷನ್ ಫಾರಂ ಭರ್ತಿ ಮಾಡುವುದು ಕಷ್ಟವಿರುತ್ತದೆ. ಹಾಗಾಗಿ ಸಹಾಯ ಮಾಡಬಹುದು ಎಂದು ಚುನಾವಣಾ ನಿಯಮಗಳಲ್ಲೇ ಇದೆ. ಅದರಂತೆ ಸಮುದಾಯ ಭವನ, ಚರ್ಚ್, ಮಸೀದಿ, ದೇವಸ್ಥಾನ ಸೇರಿ ಎಲ್ಲಾ ಕಡೆಗಳಲ್ಲಿ ಎನ್ಯುಮರೇಷನ್ ಫಾರಂ ಭರ್ತಿ ಮಾಡಬಹುದು ಮತ್ತು ದಿನಕ್ಕೆ 50 ಫಾರಂಗಳನ್ನು ಸಲ್ಲಿಕೆ ಮಾಡಬಹುದು. ಇದು ಚುನಾವಣಾ ಆಯೋಗದ ಮಾರ್ಗಸೂಚಿ ಉಲ್ಲಂಘನೆಯಲ್ಲ ಎಂದು ಸ್ಪಷ್ಟಪಡಿಸಿದರು. ಹಾಗೂ ಶೀಘ್ರದಲ್ಲೇ ಕಾಂಗ್ರೆಸ್ ವತಿಯಿಂದ ಚುನಾವಣಾ ಆಯೋಗವನ್ನು ಭೇಟಿ ಮಾಡಿ ಅನಿಸಿಕೆಗಳನ್ನು ಹೇಳಲಿದ್ದೇವೆ ಎಂದರು.



ಮುಂಬರುವ ಮೂರು ಚುನಾವಣೆಗಳಲ್ಲಿ ಸ್ಪಷ್ಟ ಬಹುಮತ ಸಿಗುವುದಿಲ್ಲ ಎಂಬ ಭಯ ಬಿಜೆಪಿಗೆ ಕಾಡುತ್ತಿದೆ. ಅದಕ್ಕಾಗಿಯೇ ಎಸ್‌ಐಆರ್ ಮೂಲಕ ಮೂರನೇ ಎರಡರಷ್ಟು ಬಹುಮತ ಪಡೆದು ಅಧಿಕಾರಕ್ಕೆ ಬರಲು ಸಂವಿಧಾನವನ್ನು ಬುಡಮೇಲು ಮಾಡುವ ಷಡ್ಯಂತ್ರ ನಡೆಸುತ್ತಿದ್ದಾರೆ. ಸ್ವಾಯತ್ತ ಸಂಸ್ಥೆಯಾದ ಚುನಾವಣಾ ಆಯೋಗವನ್ನು ಬಿಜೆಪಿ ಎಲ್ಲಾ ಕಡೆ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಈಗಾಗಲೇ 27 ಲಕ್ಷ ಜನರ ಮತದಾನದ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಸಿಎಎ ಹಾಗೂ ಎನ್‌ಆರ್‌ಸಿ ತಂದರೂ ಇವರಿಗೆ ಬಾಂಗ್ಲಾದೇಶದವರು ಸಿಕ್ಕಿಲ್ಲ. ಈ ಹಿಂದೆ ಕುಮಾರಸ್ವಾಮಿ ಅವರು ಒಂದು ಲಕ್ಷ ಮತಗಳ ಬಹುಮತದಲ್ಲಿ ಗೆದ್ದಾಗ ಬಾಂಗ್ಲಾದೇಶದವರು ಇರಲಿಲ್ಲವೇ ಎಂದು ಹರಿಪ್ರಸಾದ್ ಪ್ರಶ್ನಿಸಿದರು.

**ಟಿಎಂಸಿಗೆ ನೀಡಿದಂತೆ ಜೆಡಿಎಸ್‌ಗೂ ಕಾಂಗ್ರೆಸ್ ಆಸರೆಯಾಗಬೇಕಾಗುತ್ತದೆ**

**ಪ್ರಹ್ಲಾದ್ ಜೋಶಿ ಅವರು ಹಿಂದೆ ಕುಮಾರಸ್ವಾಮಿ ವಿರುದ್ಧ ಹೇಗೆ ಮಾತನಾಡಿದ್ದರು ಎಂಬುದು ಎಲ್ಲರಿಗೂ ಗೊತ್ತಿದೆ. ಈಗ ಈ ಮಹಾನ್ ನಾಯಕರು ಕುಮಾರಸ್ವಾಮಿ ಅವರನ್ನು ದಾಳವಾಗಿ ಬಳಸಿಕೊಂಡು ಬಲಿಪಶು ಹಾಗೂ ಹರಕೆಯ ಕುರಿ ಮಾಡುತ್ತಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಜೆಡಿಎಸ್ ಪಕ್ಷವನ್ನು ಸಂಪೂರ್ಣವಾಗಿ ಮುಗಿಸುತ್ತಾರೆ. ಆ ಪರಿಸ್ಥಿತಿ ಬಂದಾಗ ಕೊನೆಗೆ ನಾವೇ ಕುಮಾರಸ್ವಾಮಿ ಅವರಿಗೆ ರಕ್ಷಣೆ ಕೊಡಬೇಕಾಗುತ್ತದೆ. ಈಗ ಪಶ್ಚಿಮ ಬಂಗಾಳದಲ್ಲಿ ಟಿಎಂಸಿಗೆ ಸೋನಿಯಾ ಗಾಂಧಿ ಅವರು ರಕ್ಷಣೆ ಕೊಟ್ಟಿರುವ ಮಾದರಿಯಲ್ಲೇ ಜೆಡಿಎಸ್‌ಗೂ ಕಾಂಗ್ರೆಸ್ ಆಸರೆಯಾಗಬೇಕಾಗುತ್ತದೆ ಎಂದು ಬಿ.ಕೆ. ಹರಿಪ್ರಸಾದ್ ಭವಿಷ್ಯ ನುಡಿದರು.**

## ಚಂದಾ ಚೋರಿಯಲ್ಲಿ ಆರೆಸ್ಸೆಸ್‌ಗೂ ಪಾಲು ಹೋಗಿದ್ದರೆ ಅನುಮಾನವಿಲ್ಲ ಪ್ರಿಯಾಂಕ್ ಖರ್ಗೆ ಆರೋಪ



ಬೆಂಗಳೂರು, ಜು.6: ಆರ್‌ಎಸ್‌ಎಸ್ ಗುರುದಕ್ಷಿಣೆ ತೆಗೆದುಕೊಳ್ಳುತ್ತಾರಂತೆ. ಗುರು ಎಂದರೆ ಯಾರು ಧ್ವಜ ತಾನೇ. ಧ್ವಜದ ಮೇಲೆ ಗುರುದಕ್ಷಿಣೆ ತೆಗೆದುಕೊಂಡರೆ, ಅದಕ್ಕೆ ಲೆಕ್ಕ ತೋರಿಸಲಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು.

ಕಲಬುರಗಿಯ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಶ್ರೀರಾಮನ ಹುಂಡಿ, ಬೆಳ್ಳಿ, ಚಿನ್ನ, ಆಭರಣ, ಹಣ ಸೇರಿ ಇಟ್ಟಿಗೆಗಳನ್ನು ಕೂಡಾ ಕಳವು ಮಾಡಿದ್ದಾರೆ. ಕರ್ನಾಟಕದ ಗಣೇಶ್ ಎಂಬ ವ್ಯಕ್ತಿ ಕಟ್ಟಡ ನಿರ್ಮಾಣ ಗುತ್ತಿಗೆ ಪಡೆದುಕೊಂಡಿದ್ದಾರಂತೆ, ಇಲ್ಲಿಂದ ಹೋಗಿ ಅಲ್ಲಿ ಕಮೀಷನ್ ಹೊಡೆದಿದ್ದಾರಂತೆ. ಶ್ರೀರಾಮ ವಿಗ್ರಹದ ಪ್ರಾಣ ಪ್ರತಿಷ್ಠಾನದ ವಿಚಾರದಲ್ಲಿ ಕೆಲವರು ವಿರೋಧ ಮಾಡಿದ್ದರು. ಆದರೂ ಮೋದಿ ತರಾತುರಿಯಲ್ಲಿ ಮಾಡಿದ್ದರು. ಚಂದಾ ಚೋರಿಯಲ್ಲಿ ಆರ್‌ಎಸ್‌ಎಸ್‌ಗೂ ಪಾಲು ಹೋಗಿದ್ದರೆ ಅನುಮಾನವಿಲ್ಲ ಎಂದು ಆರೋಪಿಸಿದರು.

ನಾನು ಗೃಹಸಚಿವನಾಗಿರುವವರೆಗೂ ಆರೆಸ್ಸೆಸ್ ಪಥಸಂಚಲನಕ್ಕೆ ಅನುಮತಿ ಕಡ್ಡಾಯ

ಹಲವಾರು ಪ್ರಶ್ನೆಗಳನ್ನು ಹಾಕಿ ಆರ್‌ಎಸ್‌ಎಸ್‌ಗೆ ಪತ್ರ ಬರೆದಿದ್ದೇನೆ. ಇನ್ನೂ ಉತ್ತರ ಬಂದಿಲ್ಲ. ಅವರೂ ಕೂಡಾ ನನ್ನ ಹಾಗೂ ಕುಟುಂಬದ ವೈಯಕ್ತಿಕ ಮಾಹಿತಿ ಕಲೆ ಹಾಕುತ್ತಿದ್ದಾರೆ. ನಾನು ಗೃಹ ಸಚಿವನಾಗಿರುವವರೆಗೆ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ಪಡೆದುಕೊಳ್ಳುವುದು ಕಡ್ಡಾಯವಾಗಿರುತ್ತೆ.. ಆರ್‌ಎಸ್‌ಎಸ್‌ನವರು ಇದುವರೆಗೆ ಮಾಹಿತಿ ಮಾತ್ರ ನೀಡುತ್ತಿದ್ದರು. ಚಿತ್ತಾಪುರದಲ್ಲಿಯೂ ಹಾಗೆಯೇ ಮಾಡಿದರು. ಅನುಮತಿ ಕೊಡಲಿಲ್ಲ ಎಂದು ಕೋರ್ಟ್‌ಗೆ ಹೋಗಿದ್ದರು. ಕೋರ್ಟ್ ನಿರ್ದೇಶನದಂತೆ ಅರ್ಜಿ ಸಲ್ಲಿಸಿದರು. ಮುಂದೆಯೂ ಕೂಡಾ ಅವರು ಅರ್ಜಿ ಸಲ್ಲಿಸಿದರೆ, ಕೋರ್ಟ್ ನಿರ್ದೇಶನ ಹಾಗೂ ಸರ್ಕಾರದ ಮಾನದಂಡ, ಸ್ಥಳ, ಸಮಯ ಹಾಗೂ ಸಂದರ್ಭಕ್ಕನುಗುಣವಾಗಿ ಕ್ರಮವಹಿಸಲಾಗುವುದು ಎಂದು ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದರು.

# ಎಚ್‌ಎಂಟಿ ಪುನಶ್ಚೇತನ ಪ್ಯಾಕೇಜ್ ತಡೆಯಲು ರಾಜ್ಯ ಕಾಂಗ್ರೆಸ್ ಸರ್ಕಾರ ಸಂಚು

**ಅರಣ್ಯ ಇಲಾಖೆ ಮೂಲಕ ಅಡ್ಡಿಪಡಿಸಲು ಯತ್ನ: ಎಚ್.ಡಿ.ಕುಮಾರಸ್ವಾಮಿ ಆರೋಪ**

**ಬೆಂಗಳೂರು, ಜು.6:** ರಾಷ್ಟ್ರದಲ್ಲಿಯೇ ಪ್ರತಿಷ್ಠಿತ ಕಾರ್ಖಾನೆಯಾಗಿದ್ದ ಎಚ್‌ಎಂಟಿ ಪುನಶ್ಚೇತನಕ್ಕೆ ಕೇಂದ್ರ ಸರ್ಕಾರ ಗಂಭೀರ ಪ್ರಯತ್ನ ನಡೆಸುತ್ತಿರುವ ಬೆನ್ನಲ್ಲಿಯೇ ರಾಜ್ಯ ಕಾಂಗ್ರೆಸ್ ಸರಕಾರವು ಅರಣ್ಯ ಇಲಾಖೆಯನ್ನು ಚೂ ಬಿಟ್ಟು ಅಡ್ಡಿಪಡಿಸಲು ಪ್ರಯತ್ನ ಮಾಡುತ್ತಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ಕೆಲ ಮಾಧ್ಯಮಗಳಲ್ಲಿ ಎಚ್‌ಎಂಟಿಗೆ ರಾಜ್ಯ ಅರಣ್ಯ ಇಲಾಖೆ ನೋಟಿಸ್ ನೀಡಿ ಭೂಮಿ ತೆರವು ಮಾಡಲು ಗಡುವು ವಿಧಿಸಿದೆ ಎಂಬ ವರದಿಗಳು ಬಂದ ಹಿನ್ನೆಲೆಯಲ್ಲಿ ತುರ್ತು ಮಾಧ್ಯಮಗೋಷ್ಠಿ ನಡೆಸಿದ ಕೇಂದ್ರ ಸಚಿವರು; ಈಗಾಗಲೇ ಇದಕ್ಕೆ ಸಂಬಂಧಿಸಿದ ವ್ಯಾಜ್ಯ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ಇಂತಹ ಸೂಕ್ಷ್ಮ ಸಂದರ್ಭದಲ್ಲಿ ರಾಜ್ಯ ಸರಕಾರ ಅರಣ್ಯ ಇಲಾಖೆಯ ಮೂಲಕ ಗಡುವು ವಿಧಿಸಿ ನೋಟಿಸ್ ನೀಡಿರುವುದು ನ್ಯಾಯಾಂಗ ನಿಂದನೆ ಹಾಗೂ ಕಾನೂನುಬಾಹಿರ ಕೂಡ ಆಗುತ್ತದೆ ಎಂದು ಸ್ಪಷ್ಟಪಡಿಸಿದರು.

ಎಚ್‌ಎಂಟಿ ವಶದಲ್ಲಿರುವ 430 ಎಕರೆ ಜಮೀನು ಅರಣ್ಯ ಪ್ರದೇಶ ಆಗಿರುವುದರಿಂದ ಕೂಡಲೇ ಅಷ್ಟು ಜಾಗವನ್ನು ಅರಣ್ಯ ಇಲಾಖೆಗೆ ಬಿಟ್ಟುಕೊಡಬೇಕು ಎಂದು ಬೆಂಗಳೂರು ನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಎನ್. ರವೀಂದ್ರ ಕುಮಾರ್ ಆದೇಶ ನೀಡಿರುವುದು ನ್ಯಾಯಾಂಗ ಕಲಾಪಗಳಿಗೆ ಅಡ್ಡಿಪಡಿಸಿದಂತೆ ಆಗುತ್ತದೆ. ಅಲ್ಲದೆ ಈ ಅಧಿಕಾರಿಗೆ ಅಂತಹ ಆದೇಶ ನೀಡುವ ಅಧಿಕಾರವೂ ಇರುವುದಿಲ್ಲ. ಈ ಬಗ್ಗೆ ಎಚ್‌ಎಂಟಿ ನ್ಯಾಯಾಲಯದಲ್ಲಿಯೇ ಪ್ರಶ್ನೆ ಮಾಡುತ್ತದೆ ಎಂದು ಸಚಿವರು ಹೇಳಿದರು. ಅನೇಕ ವರ್ಷಗಳಿಂದ ನಷ್ಟದ ಸುಳಿಗೆ ಸಿಲುಕಿ ನೆನೆಗುದಿಗೆ ಬಿದ್ದಿದ್ದ ಹೆಚ್‌ಎಂಟಿ ಕಾರ್ಖಾನೆಗೆ ಮರುಜೀವ ನೀಡುವ ಉದ್ದೇಶದಿಂದ ನಾನು ಪ್ರಧಾನ ಮಂತ್ರಿಗಳು ಮತ್ತು ಕೇಂದ್ರದ ಹಣಕಾಸು ಸಚಿವರನ್ನು ಒಪ್ಪಿಸಿ ವಿಶೇಷ ಪ್ಯಾಕೇಜ್ ತರುವ ಬಗ್ಗೆ ಪ್ರಯತ್ನ ಮಾಡುತ್ತಿದ್ದೆ. ಈ ಕಾರ್ಖಾನೆಯು ನಾನು ಸಚಿವನಾಗಿರುವ ಬೃಹತ್ ಕೈಗಾರಿಕೆ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಪ್ಯಾಕೇಜ್ ಘೋಷಣೆ ಹತ್ತಿರದಲ್ಲಿ ಇರುವಾಗಲೇ ರಾಜ್ಯ ಸರಕಾರ ದುರುದ್ದೇಶದಿಂದ ಇಂತಹ ನೋಟಿಸ್ ಕೊಡಿಸಿದೆ ಎಂದು ಸಚಿವ ಕುಮಾರಸ್ವಾಮಿ ಆರೋಪ ಮಾಡಿದರು.



ಲೋಕಸಭೆ ಸದಸ್ಯ ಮಲ್ಲೇಶ್ ಬಾಬು, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ಮಾಜಿ ಶಾಸಕ ಅಖಂಡ ಶ್ರೀನಿವಾಸ್ ಮೂರ್ತಿ, ಹಿರಿಯ ಮುಖಂಡ ಪ್ರಕಾಶ್ ಮುಂತಾದವರು ಉಪಸ್ಥಿತರಿದ್ದರು.

**175 ಎಕರೆ ಯಾವಾಗ ಮಾರಾಟವಾಯಿತು ಎನ್ನುವ ದಾಖಲೆ ನನ್ನಲ್ಲಿದೆ**

ಈ ಭೂಮಿಯು ಸುಮಾರು 15,000 ಕೋಟಿ ರೂ. ಬೆಲೆ ಬಾಳುತ್ತದೆ ಎಂದು ಈ ಅಧಿಕಾರಿ ಮಹಾಶಯ ಆ ಭೂಮಿಗೆ ಬೆಲೆ ಕಟ್ಟಿದ್ದಾರೆ. ಅಂದ ಮೇಲೆ ಈ ಭೂಮಿಯ ಮೇಲೆ ಯಾರದೋ ಕಾಕದೃಷ್ಟಿ ಬಿದ್ದಿರಬಹುದೇ ಎಂಬ ಅನುಮಾನ. ಈಗಾಗಲೇ ಎಚ್‌ಎಂಟಿ ಭೂಮಿಯನ್ನು ಇದೇ ಸರಕಾರದ ಕೃಪೆಯಿಂದ ಅನೇಕರು ಕೊಳ್ಳೆ ಹೊಡೆದಿದ್ದಾರೆ. 175 ಎಕರೆ ಭೂಮಿಯು ಯಾವಾಗ ಮಾರಾಟವಾಯಿತು, ಎಲ್ಲಿ ನೋಂದಣಿ ಆಯಿತು ಎನ್ನುವ ಎಲ್ಲಾ ದಾಖಲೆಗಳು ನನ್ನಲ್ಲಿವೆ. ಆ ಜಾಗದಲ್ಲಿ ಯಾರು ಯಾರು ಮನೆ ಕಟ್ಟಿಕೊಂಡಿದ್ದಾರೆ, ಲೂಟಿ ಹೊಡೆದ ಭೂಮಿಯಲ್ಲಿ ಬಹುಮಹಡಿ ಕಟ್ಟಡಗಳು ಎದ್ದು ನಿಂತಿವೆ. ದೊಡ್ಡದೊಡ್ಡ ಅಪಾರ್ಟ್‌ಮೆಂಟ್‌ಗಳು ಬಂದಿವೆ. ಆಗ ಅರಣ್ಯ ಇಲಾಖೆ ನೋಟಿಸ್ ನೀಡಿತ್ತಾ ಎಂದು ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು. 2006ರಲ್ಲಿ ನಾನು ಮುಖ್ಯಮಂತ್ರಿ ಆಗುವ ತನಕ ಹೆಚ್‌ಎಂಟಿ ಭೂಮಿಯ ಲೂಟಿ ನಡೆಯುತ್ತಲೇ ಇತ್ತು. ಯಾವುದೇ ಕಾರಣಕ್ಕೂ ಈ ಭೂಮಿ ಭೂಗಳ್ಳರ ಪಾಲಾಗಬಾರದು ಎಂದು ಆಗಲೇ ಈ ಭೂಮಿಯ ಕ್ರಯಕ್ಕೆ ತಡೆ ಕೊಟ್ಟೆ. ಬೆಂಗಳೂರು ನಗರವನ್ನು ಸಿಂಗಾಪುರ ಮಾಡುತ್ತೇವೆ ಎಂದು ಹೊರಟವರ ಸರಕಾರದಲ್ಲಿ ಯಾವುದೇ ಎಗ್ಗಿಲ್ಲದೆ ಎಚ್‌ಎಂಟಿ ಭೂಮಿಯನ್ನು ರಣಹದ್ದುಗಳಂತೆ ಕಿತ್ತು ತಿನ್ನಲಾಯಿತು ಎಂದು ಕುಮಾರಸ್ವಾಮಿ ಅವರು ಗಂಭೀರ ಆರೋಪ ಮಾಡಿದರು.

**ನಿವೃತ್ತಿಗೆ ಮುನ್ನ ನೋಟಿಸ್ ನೀಡಿದ ಅಧಿಕಾರಿ**

**ಎಚ್‌ಎಂಟಿ ಕಾರ್ಖಾನೆಯ ವಿಶೇಷ ಪ್ಯಾಕೇಜ್ ಕುರಿತಂತೆ ಮುಂದಿನ ವಾರ ಸಭೆ ನಡೆಯಬೇಕಿತ್ತು. ಆದರೆ ಒಬ್ಬ ಅರಣ್ಯಾಧಿಕಾರಿಗೆ ಯಾರಿಂದ ಪ್ರೇರಣೆಯಾಯಿತು ಎಂಬುದು ಗೊತ್ತಿಲ್ಲ. ನಿವೃತ್ತಿಯಾಗುವುದಕ್ಕೆ 15 ದಿನ ಮುನ್ನ ನೋಟಿಸ್ ನೀಡುವ ಹುಂಬತನ ಮೆರೆದಿದ್ದಾರೆ. ಇದಕ್ಕೆ ಸಂಬಂಧಿಸಿದ ವ್ಯಾಜ್ಯ ನ್ಯಾಯಾಲಯದಲ್ಲಿ ಇದೆ ಎಂಬ ಕನಿಷ್ಠ ಪರಿಜ್ಞಾನವೂ ಈ ಅಧಿಕಾರಿಗೆ ಬೇಡವೇ, ಈ ಅಧಿಕಾರಿ ತಕ್ಕ ಪ್ರಾಯಶ್ಚಿತ್ತ ಅನುಭವಿಸಬೇಕಾಗುತ್ತದೆ ಎಂದು ಎಚ್‌ಡಿಕೆ ಎಚ್ಚರಿಕೆ ನೀಡಿದರು. ಈ ಅಧಿಕಾರಿ ಯಾರು, ಈತನ ಹಿನ್ನೆಲೆ ಏನು, ಈ ಮನುಷ್ಯ ಯಾವ ಯಾವ ರೀತಿ ಅರಣ್ಯ ಸಂರಕ್ಷಣೆ ಮಾಡಿದ್ದಾರೆ, ಈತನ ಗಾಡ್‌ಫಾದರ್ ಯಾರು ಎಂಬ ಎಲ್ಲ ಮಾಹಿತಿ ನನ್ನ ಬಳಿಯಿದೆ. ಶೀಘ್ರದಲ್ಲೇ ಇವೆಲ್ಲವನ್ನೂ ಬಹಿರಂಗಪಡಿಸುತ್ತೇನೆ ಎಂದು ಗುಡುಗಿದರು.**

**ಎಚ್‌ಎಂಟಿ ಉತ್ಪನ್ನಗಳಿಗೆ ಈಗಲೂ ಬೇಡಿಕೆ**

**ಭಾರತದ ಪ್ರಮುಖ ಉದ್ಯಮವಾಗಿದ್ದ ಎಚ್‌ಎಂಟಿಯು ಬೆಂಗಳೂರು ನಗರವನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಕೇರಳದ ಕಾಲಮಸ್ಸೆರಿ, ತೆಲಂಗಾಣದ ಹೈದರಾಬಾದ್, ಹರಿಯಾಣದ ಪಿಂಜೋರಾ ಸೇರಿದಂತೆ ಅನೇಕ ಭಾಗಗಳಲ್ಲಿ ಕಾರ್ಖಾನೆಗಳನ್ನು ಹೊಂದಿದೆ. ಒಂದು ಕಾಲದಲ್ಲಿ ಇಡೀ ದೇಶದಲ್ಲೇ ಪ್ರತಿಷ್ಠಿತ ಮತ್ತು ಲಾಭದಾಯಕ ಉದ್ಯಮವಾಗಿ ನಡೆದ ಎಚ್‌ಎಂಟಿ ಈಗ ಕಷ್ಟದ ಪರಿಸ್ಥಿತಿಯಲ್ಲಿದೆ. ಹಾಗಿದ್ದರೂ ಬಾಹ್ಯಾಕಾಶ, ರಕ್ಷಣೆ, ಸಂಶೋಧನೆ ಸೇರಿದಂತೆ ಅನೇಕ ಕ್ಷೇತ್ರಗಳಿಗೆ ಯಂತ್ರಗಳನ್ನು ತಯಾರಿಸಿ ಕೊಡುತ್ತಿದೆ. ಈಗಲೂ ವಿದೇಶಗಳಲ್ಲಿ ಎಚ್‌ಎಂಟಿ ಯಂತ್ರಗಳಿಗೆ ದೊಡ್ಡಮಟ್ಟದ ಬೇಡಿಕೆ ಇದೆ. ಎಚ್‌ಎಂಟಿ ವಾಚ್‌ಗಳಿಗೆ ಈಗಲೂ ಬೇಡಿಕೆಯಿದೆ. ಇಂತಹ ಕೈಗಾರಿಕೆಗಳನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ಬಿಟ್ಟು ಅವುಗಳ ಅವಸಾನಕ್ಕೆ ರಾಜ್ಯ ಸರಕಾರ ಯತ್ನಿಸುತ್ತಿರುವ ಸರಿಯಲ್ಲ. ಈ ಮಾತನ್ನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ ಎಂದು ಎಚ್‌ಡಿಕೆ ಹೇಳಿದರು.**

## ಮೋಡಬಿತ್ತನೆ ಸರ್ಕಾರದ ಕಾರ್ಯಕ್ರಮವಾಗಲಿ ಸಚಿವ ಸತೀಶ್ ಜಾರಕಿಹೊಳಿ ಆಶಯ

**ಹುಬ್ಬಳ್ಳಿಯಲ್ಲಿ ಮೋಡಬಿತ್ತನೆ ಮಾಡುವ ವಿಮಾನಕ್ಕೆ ಚಾಲನೆ**

ಹುಬ್ಬಳ್ಳಿ, ಜು.6: ಈವರೆಗೂ ಮೋಡ ಬಿತ್ತನೆ ಸರ್ಕಾರದ ಕಾರ್ಯಕ್ರಮ ಆಗಿಲ್ಲ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಗಮನಕ್ಕೆ ತಂದು ಚರ್ಚಿಸಲಾಗುವುದು ಎಂದು ಅವಿಭಜಿತ ಧಾರವಾಡ ಜಿಲ್ಲಾ ಪ್ರಕೃತಿ ವಿಕೋಪ ನಿರ್ವಹಣೆ ಮೇಲುಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ನಗರದ ವಿಮಾನ ನಿಲ್ದಾಣದಲ್ಲಿ ಮೋಡ ಬಿತ್ತನೆಯ ವಿಶೇಷ ವಿಮಾನಕ್ಕೆ ಸೋಮವಾರ ಚಾಲನೆ ನೀಡಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಹಾವೇರಿ ಜಿಲ್ಲೆಯ ಶಾಸಕರ ನೇತೃತ್ವದಲ್ಲಿ ಈ ಹಿಂದೆ ಸಭೆ ನಡೆಸಿ, ಮೋಡ ಬಿತ್ತನೆ ಕುರಿತು ಚರ್ಚಿಸಲಾಗಿತ್ತು. ಮುಂದುವರಿದ ಭಾಗವಾಗಿ ಇಂದು ವಿಶೇಷ ವಿಮಾನದ ಮೂಲಕ ಮೋಡ ಬಿತ್ತನೆ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಇದು ಸರ್ಕಾರದ ಕಾರ್ಯಕ್ರಮ ಆಗಬೇಕು ಎನ್ನುವುದು ನಮ್ಮ ಆಶಯ ಎಂದರು

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಜುಲೈ 07 2026, ಮಂಗಳವಾರ

## ಒಳಪುಟಗಳಲ್ಲಿ

2 ವರ್ಷದಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ 52 ಸಾವಿರ ಕೋಟಿ ವೆಚ್ಚ - ಪು.5

97 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವಿನ ಸಾಧ್ಯತೆ ಅರಿತಿರುವ ಬಿಜೆಪಿ, ಆರ್‌ಎಸ್‌ಎಸ್‌ನಿಂದ ಷಡ್ಯಂತ್ರ ಎಂಎಲ್‌ಸಿ ಜಕ್ಕಪ್ಪನವರ - ಪು.6

ರಾತ್ರಿ ಕೈಕೊಟ್ಟ ಹೆಡ್‌ಲೈಟ್: ಮೊಬೈಲ್ ಟಾರ್ಚ್‌ನಲ್ಲಿ 84ಕಿ.ಮೀ. ಓಡಿದ ಸಾರಿಗೆ ಬಸ್..! - ಪು.7

# ಶರಣರು, ಸೂಫಿ ಸಂತರ ನಾಡಿನಿಂದ ಉ.ಕರ್ನಾಟಕ ಪ್ರವಾಸಕ್ಕೆ ಸಿಎಂ ಚಾಲನೆ

### ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಹೊಸವೇಗ; ಎರಡು ದಿನಗಳ ಜಿಲ್ಲಾ ಪ್ರವಾಸದಲ್ಲಿ ಸಮಗ್ರ ಪ್ರಗತಿ ಪರಿಶೀಲನೆ

**ಬೆಂಗಳೂರು, ಜು.6:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಉತ್ತರ ಕರ್ನಾಟಕ ಪ್ರವಾಸವನ್ನು ಬಸವಾದಿ ಶರಣರ ಸಮಾನತೆಯ ನೆಲೆ ಬಸವಕಲ್ಯಾಣದಿಂದಲೇ ಆರಂಭಿಸಿದ್ದಾರೆ.

ಸೂಫಿ–ಸಂತರ ಸಾಮರಸ್ಯದ ಪರಂಪರೆಗೂ ಹೆಸರಾದ ಬೀದರ್ ಮತ್ತು ಕಲ್ಬುರ್ಗಿ ಜಿಲ್ಲೆಗಳಿಂದಲೇ ಈ ಪ್ರವಾಸವನ್ನು ಆರಂಭಿಸುತ್ತಿರುವುದು ರಾಜಕೀಯ, ಆಡಳಿತಾತ್ಮಕ ಹಾಗೂ ಸಾಂಸ್ಕೃತಿಕವಾಗಿ ವಿಶೇಷ ಮಹತ್ವ ಪಡೆದಿದೆ. ಸರ್ಕಾರದ ಸಮಗ್ರ, ಸಮಾನ ಮತ್ತು ಜನಕೇಂದ್ರಿತ ಆಡಳಿತದ ಸಂಕಲ್ಪಕ್ಕೆ ಈ ಪ್ರವಾಸ ಮತ್ತೊಂದು ನಿದರ್ಶನವಾಗಿದೆ.

ಇಡೀ ದೇಶದಲ್ಲಿ ಬರದ ಛಾಯೆ ಆವರಿಸಿಕೊಂಡಿರುವ ಸಂದರ್ಭದಲ್ಲಿ ಸಿಎಂ ಅವರು ಕೈಗೊಂಡಿರುವ ಎರಡು ದಿನಗಳ ಪ್ರವಾಸ ಮಹತ್ವ ಪಡೆದಿದೆ. ಬೀದರ್ ಹಾಗೂ ಕಲ್ಬುರ್ಗಿ ಜಿಲ್ಲೆಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡುವುದರ ಜೊತೆಗೆ, ಕಲ್ಯಾಣ ಕರ್ನಾಟಕ ವಿಭಾಗದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ಉನ್ನತ ಮಟ್ಟದ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಿದ್ದಾರೆ.

ವಿವಿಧ ಇಲಾಖೆಗಳ ಯೋಜನೆಗಳ ಅನುಷ್ಠಾನ, ಶಿಕ್ಷಣ, ಆರೋಗ್ಯ, ನೀರಾವರಿ, ಮೂಲಸೌಕರ್ಯ, ಕೈಗಾರಿಕೆ, ಕುಡಿಯುವ ನೀರು, ಉದ್ಯೋಗ ಸೃಷ್ಟಿ ಹಾಗೂ ಜನಕಲ್ಯಾಣ ಕಾರ್ಯಕ್ರಮಗಳ ಪ್ರಗತಿಯನ್ನು ಇಲಾಖೆವಾರು ಪರಿಶೀಲಿಸಿ, ಬಾಕಿ ಉಳಿದಿರುವ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಲಿದ್ದಾರೆ.

ಸಂವಿಧಾನದ ಪರಿಚ್ಛೇದ 371(ಎ) ಅಡಿಯಲ್ಲಿ ವಿಶೇಷ ಸ್ಥಾನಮಾನ ಹೊಂದಿರುವ ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಯನ್ನು ಸರ್ಕಾರ ತನ್ನ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿ ಪರಿಗಣಿಸಿದೆ. ಶಿಕ್ಷಣ, ಕೃಷಿ, ಕೈಗಾರಿಕೆ, ಉದ್ಯೋಗ, ನೀರಾವರಿ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ವೇಗವಾಗಿ ಅಭಿವೃದ್ಧಿ ಸಾಧಿಸಲು ಹಾಗೂ ಇಲಾಖೆಗಳ ನಡುವೆ ಸಮನ್ವಯ ಹೆಚ್ಚಿಸಿ ಫಲಿತಾಂಶ ಆಧಾರಿತ ಆಡಳಿತಕ್ಕೆ ಚುರುಕು ನೀಡಿಲು ಈ ಪ್ರವಾಸ 2ಮಹತ್ವದ ವೇದಿಕೆಯಾಗಲಿದೆ.

ಜಿಲ್ಲಾಮಟ್ಟದಲ್ಲಿಯೇ ಆಡಳಿತವನ್ನು ಜನರ ಬಳಿಗೆ ಕೊಂಡೊಯ್ಯುವುದು, ಸ್ಥಳೀಯ ಸಮಸ್ಯೆಗಳನ್ನು ಸ್ಥಳದಲ್ಲೇ ಆಲಿಸಿ ತ್ವರಿತ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದು ಹಾಗೂ ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಚುರುಕು ನೀಡುವುದು ಈ ಪ್ರವಾಸದ ಪ್ರಮುಖ ಉದ್ದೇಶವಾಗಿದೆ.


ರಾಜ್ಯದ ಯಾವುದೇ ಭಾಗ ಅಭಿವೃದ್ಧಿಯಿಂದ ವಂಚಿತವಾಗಬಾರದು ಎಂಬ ಸರ್ಕಾರದ ದೃಢ ಬದ್ಧತೆಯ ಭಾಗವಾಗಿಯೇ ಮುಖ್ಯಮಂತ್ರಿ ಉತ್ತರ ಕರ್ನಾಟಕ ಪ್ರವಾಸವನ್ನು ಕಲ್ಯಾಣ ಕರ್ನಾಟಕದಿಂದ ಆರಂಭಿಸಿದ್ದಾರೆ. ಇದು ಕೇವಲ ಆಡಳಿತಾತ್ಮಕ ಪ್ರವಾಸವಲ್ಲ; ಪ್ರಾದೇಶಿಕ ಸಮತೋಲನ, ಸಮಗ್ರ ಅಭಿವೃದ್ಧಿ ಮತ್ತು ಜನಕೇಂದ್ರಿತ ಆಡಳಿತಕ್ಕೆ ಸರ್ಕಾರ ನೀಡುತ್ತಿರುವ ಆದ್ಯತೆಯ ಸ್ಪಷ್ಟ ಸಂದೇಶವಾಗಿದೆ.



ಬೀದರ್‌ನ ಅನುಭವ ಮಂಟಪದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಸಿಎಂ ಡಿ.ಕೆ.ಶಿವಕುಮಾರ್ ಪರಿಶೀಲಿಸಿದರು. ಡಿಸಿಎಂ ಡಾ.ಜಿ. ಪರಮೇಶ್ವರ್ ಇದ್ದರು.

# ಹಸಿರು ಕ್ರಾಂತಿಯ ಹರಿಕಾರ ಬಾಬುಜಗಜೀವನರಾಮ್

### ದೇಶದ ಸಂಸ್ಕೃತಿಗೆ ಅಡಿಪಾಯ ಹಾಕಿದ್ದೇ ಬಾಬೂಜಿ: ಸಿಎಂ ಡಿ.ಕೆ. ಶಿವಕುಮಾರ್ ಸ್ಮರಣೆ



**ಬೆಂಗಳೂರು, ಜು.6:** ಬಾಬು ಜಗಜೀವನರಾಮ್ ಅವರು ಹಸಿರು ಕ್ರಾಂತಿಯ ಹರಿಕಾರರಾಗಿದ್ದು, ರೈತರ ಬಗ್ಗೆ ಅವರಿಗೆ ವಿಶೇಷವಾದ ಕಾಳಜಿ ಇತ್ತು. ದೇಶದ ಸಂಸ್ಕೃತಿಗೆ ಅವರದೇ ಆದ ಅಡಿಪಾಯ ಹಾಕಿದ್ದು, ನಾವು ಅವರನ್ನು ಸ್ಮರಿಸಿದ್ದೇವೆ ಎಂದು ಸಿಎಂ ಡಿ ಕೆ ಶಿವಕುಮಾರ್ ತಿಳಿಸಿದರು.

ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನರಾಮ್ ಅವರ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಸಿಎಂ ಡಿ ಕೆ ಶಿವಕುಮಾರ್ ಅವರು ವಿಧಾನಸೌಧದ ಪಶ್ಚಿಮ ದ್ವಾರದಲ್ಲಿರುವ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾಧ್ಯಮಗಳ ಜೊತೆ ಮಾತನಾಡಿ, ನಾವೆಲ್ಲರೂ ಬಾಬು ಜಗಜೀವನರಾಮ್ ಅವರ ಪುಣ್ಯಸ್ಮರಣೆ ಆಚರಿಸುತ್ತಿದ್ದೇವೆ. ಜಾತಿ ಮೇಲೆ ಅಭಿವೃದ್ಧಿ ಮಾಡಿದರೆ ಜನರಿಗೆ ಮೋಸವಾಗಲಿದೆ ಎಂದು ಬಹಳ ದಿಟ್ಟವಾಗಿ ಗುಡುಗಿದ ನಾಯಕರು ಬಾಬು ಜಗಜೀವನರಾಮ್ ಅವರು. ಬಡತನ ಮುಕ್ತ ಭಾರತ ನಿರ್ಮಾಣಕ್ಕೆ ತಮ್ಮದೇ ಆದ ಹೋರಾಟ ಮಾಡಿದ್ದ ಧೀಮಂತ ನಾಯಕರು. ನಾವು ಯುವ ಕಾಂಗ್ರೆಸ್ ನಲ್ಲಿದ್ದಾಗ ದೆಹಲಿಯಲ್ಲಿ ಸಮಾವೇಶಕ್ಕೆ ಹೋಗಿದ್ದಾಗ ಪ್ರಧಾನಿ ರಾಜೀವ್ ಗಾಂಧಿ ಅವರ ಜೊತೆಗೆ ಫೋಟೋ ತೆಗೆಸಿಕೊಳ್ಳಲು ಅವರ ಮನೆಗೆ ಹೋಗಿದ್ದೆವು. ಒಂದೊಂದು ರಾಜ್ಯಗಳ ನಿಯೋಗ ಭೇಟಿ ಮಾಡಿ ಫೋಟೋ ತೆಗೆಸಿಕೊಳ್ಳಲಾಗುತ್ತಿತ್ತು. ನಮ್ಮ ರಾಜ್ಯದ ಸರದಿ ಬರುವ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ರಾಜೀವ್ ಗಾಂಧಿ ಅವರು ಮನೆಯೊಳಗಿಂದ ಹೊರಬಂದು ಹಿರಿಯ ನಾಯಕರನ್ನು ಮನೆಯೊಳಗೆ ಕರೆದುಕೊಂಡು ಹೋದರು.

ಆನಂತರ ನಾವು ಆ ಹಿರಿಯ ನಾಯಕರು ಯಾರು ಎಂದು ಕೇಳಿದಾಗ, ಅವರು ಬಾಬುಜಗಜೀವನರಾಮ್. ಅವರು ಬಂದು ನಾನು ನೆಹರೂ, ಇಂದಿರಾ ಗಾಂಧಿ ಅವರೊಂದಿಗೆ ಕೆಲಸ ಮಾಡಿದ್ದೇನೆ. ಕೆಲವು ಭಿನ್ನಾಭಿಪ್ರಾಯದಿಂದಾಗಿ ನಾನು ಪಕ್ಷ ತೊರೆದಿದ್ದೆ. ಈಗ ನನಗೆ ವಯಸ್ಸಾಗಿದೆ ಸಾಯುವ ಮುನ್ನ ಕಾಂಗ್ರೆಸ್ ಪಕ್ಷಕ್ಕೆ ಸೇರಿ ಕಾಂಗ್ರೆಸಿಗನಾಗಿ ಸಾಯಬೇಕು ಎಂದು ಹೇಳಿದ್ದಾಗಿ ರಾಜೀವ್ ಗಾಂಧಿ ಅವರು ನಮಗೆ ಹೇಳಿದರು ಎಂದು ಸಿಎಂ ಸ್ಮರಿಸಿದರು.

ಬಾಬು ಜಗಜೀವನರಾಮ್ ಅವರು ದೇಶಕ್ಕೆ ಕೊಟ್ಟ ಕೊಡುಗೆ, ಕಾಂಗ್ರೆಸ್ ಪಕ್ಷದ ಮೇಲೆ ಅವರಿಗಿದ್ದ ನಿಷ್ಠೆ ಮರೆಯಲು ಸಾಧ್ಯವಿಲ್ಲ. ಅವರ ಸುಪುತ್ರಿ ಅವರಿಗೆ ಪಕ್ಷದಲ್ಲಿ ದೊಡ್ಡ ಜವಾಬ್ದಾರಿ ನೀಡಿ ಕೇಂದ್ರ ಸಚಿವರು ಹಾಗೂ ಮೊದಲ ಮಹಿಳಾ ಸ್ಪೀಕರ್ ಆಗಿ ಮಾಡಲಾಗಿತ್ತು. ವಿಧಾನಸೌಧದ ಉತ್ತರ ದಿಕ್ಕಿನಲ್ಲಿ ಅಂಬೇಡ್ಕರ್ ಅವರ ಪ್ರತಿಮೆ ಹಾಗೂ ಪಶ್ಚಿಮ ದ್ವಾರದಲ್ಲಿ ಬಾಬು ಜಗಜೀವನರಾಮ್ ಅವರ ಪ್ರತಿಮೆ ನಿರ್ಮಿಸಿ ಗೌರವ ಸಲ್ಲಿಸುತ್ತಿದ್ದೇವೆ. ಅವರು ರೈತರ ಬಗ್ಗೆ ವಿಶೇಷವಾದ ಕಾಳಜಿ ಹೊಂದಿದ್ದರು ಎಂದು ತಿಳಿಸಿದರು.

# ಎಸ್‌ಐಆರ್ ಪ್ರಕ್ರಿಯೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಲ್ಲ: ಸಿಎಂ ಸ್ಪಷ್ಟನೆ

**ಬೆಂಗಳೂರು, ಜು.6:** ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ. ಎಂದು ಕರ್ನಾಟಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಎಸ್‌ಐಆರ್ ವಿಚಾರದಲ್ಲಿ ನಮ್ಮದೇ ಆದ ಭಿನ್ನಾಭಿಪ್ರಾಯವಿದೆ. ಕೋರ್ಟ್‌ನಲ್ಲಿ ನಮ್ಮ ವಾದ ಸಲ್ಲಿಸಿದ್ದು, ನ್ಯಾಯಾಲಯ ಈ ವಿಚಾರವಾಗಿ ತೀರ್ಪು ನೀಡಿದ್ದಾರೆ. ಈ ಪ್ರಕ್ರಿಯೆ ವೇಳಾಪಟ್ಟಿ ಬಗ್ಗೆ ನಮಗೆ ಅಸಮಾಧಾನವಿದ್ದು, ಅದರ ವಿರುದ್ಧವೂ ಕೋರ್ಟ್ ಮೊರೆ ಹೋಗುತ್ತೇವೆ. ಎಲ್ಲರಿಗೂ ಮತದಾನದ ಹಕ್ಕು ರಕ್ಷಣೆ ಮಾಡಬೇಕು ಎಂದು ಸರ್ಕಾರ ಚುನಾವಣಾ ಆಯೋಗದ ಜೊತೆ ಕೈ ಜೋಡಿಸಿದೆ. ಮತದಾನದ ಹಕ್ಕು, ಬದುಕಿನ ಹಕ್ಕು ಎಂದು ಹೇಳುವ ಮೂಲಕ ಜನರಿಗೆ ಮತದಾನದ ಹಕ್ಕು ಉಳಿಸಿಕೊಳ್ಳಲು ಸರ್ಕಾರ ಜಾಗೃತಿ ಮೂಡಿಸುತ್ತಿದ್ದೇವೆ ಎಂದು ವಿವರಿಸಿದರು.

ನಮ್ಮಂತೆ ಬೇರೆ ಯಾವುದೇ ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಸಹಕಾರ ನೀಡಿಲ್ಲ. ಈ ಪ್ರಕ್ರಿಯೆಯ ಬಗ್ಗೆ ಸರ್ಕಾರ ರಾಜ್ಯಾದ್ಯಂತ ವ್ಯಾಪಕ ಜಾಗೃತಿ ಮೂಡಿಸುತ್ತಿರುವುದರಿಂದಲೇ ವಿರೋಧ ಪಕ್ಷ ಆತಂಕಗೊಂಡಿದೆ. ಸುಮಾರು 4.5 ಕೋಟಿ ಜನರು ಜಾತಿ ಹಾಗೂ ಆದಾಯ ಪ್ರಮಾಣಪತ್ರ ಪಡೆದುಕೊಂಡಿದ್ದಾರೆ. ಅವುಗಳನ್ನು ಆನ್‌ಲೈನ್‌ನಲ್ಲೇ ಡೌನ್‌ಲೋಡ್ ಮಾಡುವ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ಬಡವರು ಹಾಗೂ ಅಲ್ಪಸಂಖ್ಯಾತರು ಸಂಕಷ್ಟಕ್ಕೆ ಸಿಲುಕಬೇಕು ಎಂಬುದೇ ವಿಪಕ್ಷಗಳ ಉದ್ದೇಶ ಎಂದು ಆರೋಪಿಸಿದರು.

ಅಕ್ರಮ ವಲಸಿಗರ ವಿಚಾರವಾಗಿ ವಿಪಕ್ಷಗಳಿಗೆ ತಿರುಗೇಟು ನೀಡಿದ ಡಿ.ಕೆ. ಶಿವಕುಮಾರ್, ಬಾಂಗ್ಲಾದೇಶದ ಅಕ್ರಮ ವಲಸಿಗರು ಎಲ್ಲಿದ್ದಾರೆ ಎಂದು ತೋರಿಸಿ. ಅವರು ಇದ್ದರೆ ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಏಕೆ ಕ್ರಮ ಕೈಗೊಂಡಿಲ್ಲ. ಎಸ್‌ಐಆರ್ ಪ್ರಕ್ರಿಯೆಯ ಉದ್ದೇಶ ಪ್ರತಿಯೊಬ್ಬ ಅರ್ಹ ನಾಗರಿಕನಿಗೂ ಮತದಾನದ ಹಕ್ಕು ಖಚಿತಪಡಿಸುವುದಾಗಿದೆ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಉತ್ತಮ ಕಾರ್ಯವನ್ನು ವಿರೋಧ ಪಕ್ಷ ಮೆಚ್ಚಬೇಕು. ಬದಲಾಗಿ ಟೀಕೆ ಮಾಡುವುದನ್ನೇ ಕೆಲಸ ಮಾಡಿಕೊಂಡಿದ್ದಾರೆ ಎಂದರು.

# ಕೇಂದ್ರದ ನೀತಿಗಳಿಂದ ಜಾಗತಿಕವಾಗಿ ದೇಶದ ಸ್ಥಾನಮಾನ ದುರ್ಬಲ: ಖರ್ಗೆ ಕಿಡಿ

**ನವದೆಹಲಿ, ಜು.6:** ಜಾಗತಿಕವಾಗಿ ಭಾರತದ ಖ್ಯಾತಿಗೆ ಮೋದಿ ಸರ್ಕಾರದ ನೀತಿಗಳು ಧಕ್ಕೆಯಾಗಿವೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

ಸೋಮವಾರ ಮಾಹಿತಿ ಹಂಚಿಕೊಂಡಿರುವ ಅವರು, ಕೇಂದ್ರ ನೀತಿಯಿಂದಾಗಿ ದೇಶದ ಪಾಸ್‌ಪೋರ್ಟ್ ಶ್ರೇಯಾಂಕದಲ್ಲಿ ಕುಸಿತ, ವೆಚ್ಚಗಳು, ವಿದೇಶಿ ಪ್ರವಾಸಿಗರ ಆಗಮನದಲ್ಲಿ ನಿಧಾನಗತಿಯ ಚೇತರಿಕೆ ಮತ್ತು ಅಸಮರ್ಪಕ ವೀಸಾ ಸೇವೆಗಳಿಗೆ ಕಾರಣವಾಗಿವೆ ಎಂದರು.

ಭಾರತೀಯ ಪಾಸ್‌ಪೋರ್ಟ್‌ಗೆ ವಿದೇಶಗಳಲ್ಲಿ ಹೆಚ್ಚಿನ ಗೌರವವಿದೆ ಎಂಬ ಪ್ರಧಾನಿ ನರೇಂದ್ರ ಮೋದಿಯವರ 2018ರ ಹೇಳಿಕೆಯನ್ನು ಪ್ರಶ್ನಿಸಿದ ಖರ್ಗೆ, ಅವರ ಹೇಳಿಕೆ ಪ್ರಸ್ತುತ ಪರಿಸ್ಥಿತಗೆ ವಿರುದ್ಧವಾಗಿವೆ ಎಂದಿದ್ದಾರೆ.

ಜಾಗತಿಕ ಪಾಸ್‌ಪೋರ್ಟ್ ಶ್ರೇಯಾಂಕದಲ್ಲಿ, ಭಾರತವು 2013ರಲ್ಲಿ 74ನೇ ಸ್ಥಾನದಲ್ಲಿತ್ತು, ಆದರೆ, 2026ರ ಜೂನ್‌ನಲ್ಲಿ ಈ ಸ್ಥಾನ 80ಕ್ಕೆ ಕುಸಿದಿದೆ ಎಂದು ವಿಶ್ವ ಆರ್ಥಿಕ ವೇದಿಕೆಯ ಡೇಟಾ ಉಲ್ಲೇಖಿಸಿ ಹೇಳಿದರು. ಮತ್ತೊಂದು ಜಾಗತಿಕ ಸೂಚ್ಯಂಕವು ಭಾರತದ ಸ್ಥಾನ 2026ರಲ್ಲಿ 125ನೇ ಸ್ಥಾನದಲ್ಲಿ ಕಳಪೆಯಾಗಿದೆ ಎಂದಿದೆ ಎಂದು ಬಣ್ಣಿಸಿದ್ದಾರೆ.



ಕೇಂದ್ರ ಸರ್ಕಾರದ ನೀತಿಗಳು, ಸೇವೆಗಳನ್ನು ಸುಧಾರಿಸುವ ಬದಲು ಅರ್ಜಿದಾರರ ಮೇಲೆ ಆರ್ಥಿಕ ಹೊರೆ ಹೆಚ್ಚಿಸಿದೆ ಎಂದು ಖರ್ಗೆ ಆರೋಪಿಸಿದರು. ಪಾಸ್‌ಪೋರ್ಟ್ ಶುಲ್ಕವನ್ನು 1,500 ರೂ.ಗಳಿಂದ 2,500 ರೂ.ಗಳಿಗೆ ಹೆಚ್ಚಿಸಲಾಗಿದೆ, ಆದರೆ ತತ್ಕಾಲ್ ಶುಲ್ಕಗಳು 5,000 ರೂ.ಗಳಿಗೆ ಏರಿವೆ ಎಂದು ಹೇಳಿದ್ದಾರೆ.

ವಿದೇಶಿ ಪ್ರವಾಸಿಗರ ಆಗಮನವು ಸಾಂಕ್ರಾಮಿಕ ಪೂರ್ವದ ಮಟ್ಟಕ್ಕಿಂತ ಕಡಿಮೆಯಾಗಿದೆ ಎಂದು ಹೇಳಿಕೊಂಡು, ಪ್ರವಾಸೋದ್ಯಮ ವಲಯವನ್ನು ಸರ್ಕಾರ ನಿರ್ವಹಿಸುವ ರೀತಿಯನ್ನು ಕಾಂಗ್ರೆಸ್ ಅಧ್ಯಕ್ಷರು ಪ್ರಶ್ನಿಸಿದರು.

ಭಾರತಕ್ಕೆ ಪ್ರಯಾಣಿಸುವ ಸುಲಭತೆಯ ವಿಷಯದಲ್ಲಿಯೂ ಸಹ, ವಿದೇಶಿ ಪ್ರವಾಸಿಗರ ಆಗಮನ ಇನ್ನೂ ಕೋವಿಡ್ ಪೂರ್ವದ ಮಟ್ಟಕ್ಕಿಂತ ಕೆಳಗಿದೆ. ಅವರು 2019 ರಲ್ಲಿ 10.93 ದಶಲಕ್ಷದಿಂದ 2024 ರಲ್ಲಿ 9.95 ದಶಲಕ್ಷಕ್ಕೆ ಇಳಿದಿದ್ದಾರೆ. ಮೋದಿ ಸರ್ಕಾರವು ವಿದೇಶಿ ಪ್ರವಾಸಿಗರ ಡೇಟಾದೊಂದಿಗೆ ಎನ್‌ಆರ್‌ಐ ಆಗಮನವನ್ನು ಸಂಯೋಜಿಸುವ ಮೂಲಕ ಈ ವೈಫಲ್ಯವನ್ನು ಮರೆಮಾಚುತ್ತಿದೆಯೇ ಎಂದು ಅವರು ಪ್ರಶ್ನಿಸಿದ್ದಾರೆ.

ದೇಶದ ತಾಂತ್ರಿಕ ಪ್ರಗತಿಯ ಹೊರತಾಗಿಯೂ ಅದು ಹಳೆಯದಾಗಿಯೇ ಉಳಿದಿದೆ ಎಂದು ಆರೋಪಿಸಿದ ಖರ್ಗೆ, ಭಾರತದ ಅಧಿಕೃತ ವೀಸಾ ಅರ್ಜಿ ಪೋರ್ಟಲ್ ಇನ್ನೂ ಹಳೆಯದಾಗಿದೆ ಮತ್ತು ಗೊಂದಲಮಯವಾಗಿದೆ, ಅದು 1990ರ ದಶಕದ ಅಂತ್ಯದ ವೆಬ್‌ಸೈಟ್ ಅನ್ನು ಹೋಲುತ್ತದೆ. ಅತಿಥಿ ದೇವೋಭವದ ನಾಡು ಭಾರತದಲ್ಲಿ ಯಾರೂ ಈ ರೀತಿ ಪ್ರವಾಸಿಗರನ್ನು ಸ್ವಾಗತಿಸಲು ಬಯಸುವುದಿಲ್ಲ ಎಂದಿದ್ದಾರೆ.

ಜಾಗತಿಕವಾಗಿ ದೇಶದ ನಿರ್ವಹಣೆಯನ್ನು ಪ್ರಶ್ನಿಸಿರುವ ಖರ್ಗೆ, ಪಾಸ್‌ಪೋರ್ಟ್ ದುರ್ಬಲವಾಗಿದ್ದರೆ, ಪ್ರವಾಸೋದ್ಯಮ ಚೇತರಿಸಿಕೊಂಡಿಲ್ಲ, ವೀಸಾ ಸೇವೆಗಳು ನೀರಸವಾಗಿವೆ ಮತ್ತು ನಾಗರಿಕರು ಕಳಪೆ ಗುಣಮಟ್ಟದ ಸೇವೆಗಳಿಗೆ ಹೆಚ್ಚು ಪಾವತಿಸುತ್ತಿದ್ದಾರೆ, ಹಾಗಾದರೆ ಈ ಹೆಚ್ಚು ಪ್ರಚಾರ ಮಾಡಲಾದ ಜಾಗತಿಕ ಗೌರವ ಎಲ್ಲಿದೆ. ವಾಸ್ತವ ಬೇರೆಯದೇ ಆಗಿದೆ ಎಂದು ಖರ್ಗೆ ಕಿಡಿಕಾರಿದ್ದಾರೆ.

# ಬಿಹಾರ, ಪ.ಬಂಗಾಳದಲ್ಲಿ ಆದ ಎಸ್‌ಐಆರ್ ಅಕ್ರಮದ ಬಗ್ಗೆ ಮಾತನಾಡಿ

**ನವದೆಹಲಿ, ಜು.6:** ಎಸ್‌ಐಆರ್ ಕುರಿತು ಬಿಜೆಪಿ ಮತ್ತು ಜೆಡಿಎಸ್ ದ್ವಂದ್ವ ನಿಲುವು ತಳೆದಿರುವುದನ್ನು ತೀವ್ರವಾಗಿ ಖಂಡಿಸಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅವರು ಬಿಹಾರ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಚುನಾವಣೆಯಲ್ಲಿ ಎಸ್‌ಐಆರ್‌ನಲ್ಲಿ ಭಾರೀ ಅಕ್ರಮ ನಡೆದಿರುವುದನ್ನು ಬಹಿರಂಗವಾಗಿ ಘೋಷಿಸುವಂತೆ ದೋಸ್ತಿಗಳಿಗೆ ಸವಾಲು ಹಾಕಿದ್ದಾರೆ.



■ **ಬಿಜೆಪಿ – ಜೆಡಿಎಸ್ ದ್ವಂದ್ವ ನಿಲುವು: ರಣದೀಪ್‌ಸಿಂಗ್ ಸುರ್ಜೇವಾಲಾ ವಾಗ್ದಾಳಿ**

ಈ ಕುರಿತು ಹೇಳಿಕೆ ಹಾಕಿರುವ ಸುರ್ಜೇವಾಲಾ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಚುನಾವಣೆಯನ್ನು ಅಮಾನ್ಯಗೊಳಿಸುವಂತೆ ಒತ್ತಾಯಿಸಲು ನಿಮಗೆ ಧೈರ್ಯವಿದೆಯೇ ಎಂದು ಪ್ರಶ್ನಿಸಿದ್ದಾರೆ. ಕರ್ನಾಟಕದಲ್ಲಿ ಎಸ್‌ಐಆರ್‌ಗೆ ವಿರೋಧ ವ್ಯಕ್ತಪಡಿಸುತ್ತಿರುವ ಬಿಜೆಪಿ ಮತ್ತು ಜೆಡಿಎಸ್‌ನ ದ್ವಂದ್ವ ನಿಲುವು ಹಾಗೂ ಹತಾಶೆ ಆಶ್ಚರ್ಯಕರವಾಗಿದೆ.

ವಿಧಾನಸಭೆ ಚುನಾವಣೆಗೂ ಮುನ್ನ ಎಸ್‌ಐಆರ್ ಹೆಸರಿನಲ್ಲಿ ಬಿಹಾರದಲ್ಲಿ 47 ಲಕ್ಷ, ಪಶ್ಚಿಮ ಬಂಗಾಳದಲ್ಲಿ 84 ಲಕ್ಷ ಹಾಗೂ ಅಸ್ಸಾಂನಲ್ಲಿ 11 ಲಕ್ಷ ಮತದಾರರ ಹೆಸರನ್ನು ಅಳಿಸಿರುವುದು ತಪ್ಪು. ಆದ್ದರಿಂದ ಈ ಮೂರು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶವನ್ನು ಅಮಾನ್ಯಗೊಳಿಸಬೇಕು ಎಂದು ಒತ್ತಾಯಿಸಲು ಬಿಜೆಪಿ– ಜೆಡಿಎಸ್‌ನವರಿಗೆ ಧೈರ್ಯವಿದೆಯೇ ಎಂದು ಪ್ರಶ್ನಿಸಿದ್ದಾರೆ.

ಎಸ್.ಐ.ಆರ್ ಪ್ರಕ್ರಿಯೆಯು ಸಂಪೂರ್ಣವಾಗಿ ತಪ್ಪು, ಪ್ರಜಾಪ್ರಭುತ್ವ ವಿರೋಧಿ, ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲಿನ ನೇರ ದಾಳಿಯಾಗಿದೆ. ದೇಶದಾದ್ಯಂತ ಎಸ್.ಐ.ಆರ್ ಪ್ರಕ್ರಿಯೆಯನ್ನು ತಕ್ಷಣವೇ ರದ್ದುಗೊಳಿಸಬೇಕು. ಚುನಾವಣಾ ಆಯೋಗ ಮೊದಲಿನಿಂದಲೇ ಈ ಪ್ರಕ್ರಿಯೆಯನ್ನು ಆರಂಭಿಸಿರುವುದು ಗಂಭೀರ ತಪ್ಪಾಗಿದೆ. ವಾಸ್ತವದಲ್ಲಿ ಇದು ಮತದಾರರ ಹೆಸರುಗಳನ್ನು ಅಳಿಸುವ ಅಭಿಯಾನವಾಗಿದ್ದು, ಭಾರತದ ಗಣರಾಜ್ಯ ಹಾಗೂ ಜನರ ಪ್ರಜಾಪ್ರಭುತ್ವದ ಹಕ್ಕುಗಳನ್ನು ದುರ್ಬಲಗೊಳಿಸುವ ಉದ್ದೇಶ ಹೊಂದಿದೆ ಎಂದು ಹೇಳಿದ್ದಾರೆ.

# ಕರ್ನಾಟಕದಲ್ಲಿ ಎಸ್‌ಐಆರ್ ಅಕ್ರಮ: ದೋಷಪೂರಿತ ಮತದಾರ ಪಟ್ಟಿ ಸೃಷ್ಟಿ ಆತಂಕ

### ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನೇತೃತ್ವದಲ್ಲಿ ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಎನ್‌ಡಿಎ ನಿಯೋಗ ದೂರು



**ಬೆಂಗಳೂರು, ಜು.6:** ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಷಡ್ಯಂತ್ರದಿಂದ ರಾಜ್ಯಾದ್ಯಂತ ಎಸ್.ಐ.ಆರ್ ಪ್ರಕ್ರಿಯೆಯಲ್ಲಿ ತೀವ್ರ ಅಕ್ರಮಗಳು ನಡೆಯುತ್ತಿವೆ ಎಂದು ಆರೋಪಿಸಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನೇತೃತ್ವದಲ್ಲಿ ಎನ್.ಡಿ.ಎ ನಾಯಕರು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ದೂರು ಸಲ್ಲಿಸಿದರು. ರಾಜ್ಯದಲ್ಲಿ ಎಸ್.ಐ.ಆರ್ ಪ್ರಕ್ರಿಯೆಯಲ್ಲಿ ತೀವ್ರ ಅಕ್ರಮ ನಡೆಯುತ್ತಿರುವುದರಿಂದ ವಿಶ್ವಾಸಾರ್ಹವಲ್ಲದ ಹಾಗೂ ದೋಷಪೂರಿತ ಮತದಾರರ ಪಟ್ಟಿ ಸೃಷ್ಟಿಯಾಗುವ ಅಪಾಯವಿದೆ ಎಂದು ಎನ್‌ಡಿಎ ನಾಯಕರು ಚುನಾವಣಾ ಆಯೋಗದ ಗಮನ ಸೆಳೆದರು. ಹಾಗೂ ಎಸ್‌ಐಆರ್ ಅಕ್ರಮ ಕುರಿತು ತ್ವರಿತವಾಗಿ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಅಕ್ರಮಗಳು ನಡೆದ ಪ್ರದೇಶಗಳಲ್ಲಿ ಮರು ಪರಿಶೀಲನೆ ನಡೆಸಬೇಕೆಂದು ಆಗ್ರಹಿಸಿದರು.

ಕೇಂದ್ರ ಚುನಾವಣಾ ಆಯೋಗ ನಿಗದಿಪಡಿಸಿದ ಮಾರ್ಗಸೂಚಿ ಮತ್ತು ಕಾರ್ಯವಿಧಾನಗಳ ಮೂಲಕವೇ ಎಸ್‌ಐಆರ್ ನಡೆಯಬೇಕು. ಕಡ್ಡಾಯವಾಗಿ ಮನೆಮನೆಗೆ ತೆರಳಿ ಮತದಾರರ ಪರಿಶೀಲನೆ ನಡೆಸಬೇಕು. ಹಾಗಿದ್ದರೂ, ಹಲವೆಡೆ ಈ ನಿಯಮ ಪಾಲಿಸದೆ ಸಮುದಾಯ ಭವನ, ಮಸೀದಿ ಹಾಗೂ ಬೂತ್ ಮಟ್ಟದ ಅಧಿಕಾರಿಗಳ ನಿವಾಸಗಳಲ್ಲೆಲ್ಲಾ ಅರ್ಜಿ ನಮೂನೆಗಳನ್ನು ಭರ್ತಿ ಮಾಡಲಾಗುತ್ತಿದೆ ಎಂದು ಪ್ರಲ್ಹಾದ ಜೋಶಿ ಚುನಾವಣಾಧಿಕಾರಿ ಎದುರು ದೂರಿದರು.

ಎಸ್.ಐ.ಆರ್ ಪ್ರಕ್ರಿಯೆಗೆ ವಾಟ್ಸಪ್ ಗುಂಪುಗಳನ್ನು ರಚಿಸಿ, ಮತದಾರರನ್ನು ಒಂದು ಪ್ರದೇಶಕ್ಕೆ ಕರೆಸಲಾಗುತ್ತಿದೆ ಎಂಬ ದೂರುಗಳಿವೆ. ಈ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರಗಳು ಸಾಮಾಜಿಕ ಜಾಲತಾಣಗಳಲ್ಲಿವೆ. ಈ ಎಲ್ಲ ಬೆಳವಣಿಗೆ ಮತದಾರರ ಪಟ್ಟಿಯ ನಿಖರತೆ, ಪಾರದರ್ಶಕತೆ ಮತ್ತು ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆಗೆ ಧಕ್ಕೆ ಉಂಟುಮಾಡುತ್ತಿದೆ ಎಂದು ಜೋಶಿ ತೀವ್ರ ಕಳವಳ ವ್ಯಕ್ತಪಡಿಸಿದರು.

**ಭರ್ತಿಮಾಡಿದ ಅರ್ಜಿ ಮರು ಪರಿಶೀಲಿಸಿ:** ರಾಜ್ಯದಲ್ಲಿನ ಎಸ್‌ಐಆರ್ ಅಕ್ರಮ ಪ್ರಕರಣದ ಕುರಿತು ತಕ್ಷಣವೇ ಸಮಗ್ರ ತನಿಖೆ ನಡೆಸಬೇಕು ಹಾಗೂ ಈಗಾಗಲೇ ಭರ್ತಿ ಮಾಡಿರುವ ಎಲ್ಲಾ ಅರ್ಜಿ ನಮೂನೆಗಳನ್ನು ಕಡ್ಡಾಯವಾಗಿ ಮನೆ–ಮನೆಗೆ ಭೇಟಿ ನೀಡಿ ಮರು ಪರಿಶೀಲನೆ ಮಾಡುವಂತೆ ಸಂಬಂಧಿತ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಸಚಿವ ಪ್ರಲ್ಹಾದ್ ಜೋಶಿ ಮುಖ್ಯಚುನಾವಣಾ ಅಧಿಕಾರಿಗೆ ಪಟ್ಟು ಹಿಡಿದರು.

**ಕಾನೂನು ಕ್ರಮಕ್ಕೆ ಆಗ್ರಹ:** ಅಕ್ರಮಗಳಿಗೆ ಕಾರಣರಾಗಿರುವ ಅಧಿಕಾರಿಗಳು ಹಾಗೂ ರಾಜಕೀಯ ಪದಾಧಿಕಾರಿಗಳ ವಿರುದ್ಧ ಅನ್ವಯವಾಗುವ ಕಾನೂನುಗಳಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಜೋಶಿ ಸೇರಿದಂತೆ ಎನ್‌ಡಿಎ ನಾಯಕರು ಒತ್ತಾಯಿಸಿದರು.

**ನಿಯೋಗದಲ್ಲಿ ಯಾರ್ಯಾರು ಇದ್ದರು:** ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಎಚ್.ಡಿ. ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ಮೇಲ್ಮನೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಿಎಂ ಡಿ.ವಿ. ಸದಾನಂದಗೌಡ, ಮಾಜಿ ಡಿಸಿಎಂಗಳಾದ ಗೋವಿಂದ ಕಾರಜೋಳ, ಡಾ. ಸಿ.ಎನ್ ಅಶ್ವತ್ಥನಾರಾಯಣ, ಎನ್.ರವಿಕುಮಾರ್ ಹಾಗೂ ಬಿಜೆಪಿ, ಜೆಡಿಎಸ್‌ನ ಮುಖಂಡರು ಇದ್ದರು.

### ಎಸ್.ಐ.ಆರ್ ವಿಫಲಕ್ಕೆ ಯತ್ನ

ಎಸ್‌ಐಆರ್ ಪ್ರಕ್ರಿಯೆ ವಿಫಲಗೊಳಿಸುವ ತಂತ್ರ ಇದಾಗಿದೆ. ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಆದ ಬಳಿಕ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದಿಂದ ಬಾಂಗ್ಲಾ ದೇಶದವರನ್ನು ಮತಪಟ್ಟಿಗೆ ಸೇರಿಸಲು ಅವಕಾಶ ನೀಡಿದ್ದಾರೆ. ಈಗಾಗಲೇ ಸುಪ್ರೀಂ ಕೋರ್ಟ್ ಎಸ್‌ಐಆರ್ ಮಾಡಲು ಅವಕಾಶ ಇದೆ ಎಂದಿದೆ. ಅಪ್ಪ, ಅಮ್ಮ, ಕುಟುಂಬದವರಿಗೆ ಮಾತ್ರ ಅವಕಾಶ ಇದೆ. ಆದರೆ ಸಂಬಂಧಿಕರೂ ಆಗಬಹುದೆಂದು ಮಾಡಿದ್ದಾರೆ. ಇದನ್ನು ಕುತಂತ್ರದಿಂದ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅಕ್ರಮವಾಗಿ ಜಿಬಿಎ ವ್ಯಾಪ್ತಿಯಲ್ಲಿ ಎಸ್‌ಐಆರ್ ಮಾಡುತ್ತಿದ್ದಾರೆ. ಹಿಂಡು ಹಿಂಡಾಗಿ ಮಾಡಲಾಗುತ್ತಿದೆ. ಆಯ್ದ ಬೂತ್‌ಗಳಲ್ಲಿ ಪ್ರತ್ಯೇಕ ಎಸ್‌ಐಆರ್ ಮಾಡುತ್ತಿದ್ದಾರೆ. ಮನೆ ಮನೆಗೆ ಹೋಗದಿದ್ದರೆ ಅವನು ಭಾರತೀಯನೋ? ಬಾಂಗ್ಲಾ ದೇಶದವನೋ? ಯಾರಿಗೆ ಗೊತ್ತಾಗಲಿದೆ ಎಂದು ಪ್ರಲ್ಹಾದ ಜೋಶಿ ಪ್ರಶ್ನಿಸಿದರು.

### ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕು

ದೂರು ಸಲ್ಲಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವ ಜೋಶಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚುನಾವಣಾ ವ್ಯವಸ್ಥೆ ಬುಡಮೇಲು ಮಾಡಲು ಹೊರಟಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು. ಹೊಸದಾಗಿ ಎನ್ಯುಮರೇಷನ್ ಮಾಡಲು ಮುಖ್ಯ ಚುನಾವಣಾ ಅಧಿಕಾರಿ ಅವರಿಗೆ ಆಗ್ರಹಿಸಿದ್ದೇವೆ. ರಾಜ್ಯ ಸರ್ಕಾರದವರ ಕುಮ್ಮಕ್ಕು, ಧಮ್ಕಿಯಿಂದ ಇಲ್ಲಿ ಅಕ್ರಮ ನಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿಗಳು ಜಾಣ ಕಿವುಡಾಗಿದ್ದಾರೆ. ಕೇಂದ್ರ ಸರ್ಕಾರ ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂದು ಟೀಕೆ ಮಾಡುತ್ತಿದ್ದಾರೆ. ಎಸ್‌ಐಆರ್ ಅಕ್ರಮಗಳ ಬಗ್ಗೆ ದಾಖಲೆ ಸಹಿತ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇವೆ. ಎಸ್‌ಐಆರ್ ಬಗ್ಗೆ ಸರ್ಕಾರ ಎಲ್ಲಿ ಜಾಗೃತಿ ಮೂಡಿಸುತ್ತಿದೆ, ಅಕ್ರಮವಾಗಿ ಮಾಡುವುದು ಜಾಗೃತಿಯೇ, ಎಸ್‌ಐಆರ್ ಅನ್ನು ರಾಜ್ಯ ಸರ್ಕಾರದ ಅಧಿಕಾರಿ ಸಿಬ್ಬಂದಿ ಮಾಡಬೇಕಲ್ಲವೇ?

–ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

### ಪೆನ್‌ಡ್ರೈವ್ ಸಮೇತ ಸಾಕ್ಷಿ

ರಾಜ್ಯದಲ್ಲಿ ಮದರಸಾ, ಮಸೀದಿಗಳಲ್ಲಿ, ಕಾಂಗ್ರೆಸ್ನ ಚುನಾಯಿತ ಪ್ರತಿನಿಧಿಗಳ ಮನೆಯಲ್ಲಿ, ಎಸ್.ಐ.ಆರ್ ನಡೆಯುತ್ತಿದೆ. ಬಿಎಲ್‌ಎಗಳನ್ನು ಕೂಡ ಕರೆದು ಮಾಡುತ್ತಿಲ್ಲ. ಈ ಬಗ್ಗೆ ದಾಖಲೆ ಇರುವ ಪೆನ್‌ಡ್ರೈವ್ ಅನ್ನು ಚುನಾವಣಾ ಅಧಿಕಾರಿಯವರಿಗೆ ನೀಡಿದ್ದೇವೆ. ವಾಟ್ಸಪ್ ಗ್ರೂಪ್‌ಮಾಡಿ, ನಿಗದಿತ ಸ್ಥಳಕ್ಕೆ ಕರೆಸಿಕೊಳ್ಳುತ್ತಿದ್ದಾರೆ. ಈ ಮೊದಲು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್‌ನ ನಿಖಿಲ್ ಕುಮಾರಸ್ವಾಮಿ ದೂರು ನೀಡಿದ್ದಾರೆ. ಅಷ್ಟಾದರೂ ಸುಧಾರಣೆ ಆಗಿಲ್ಲ. ಹಾಗಾಗಿ ಈಗ ಮತ್ತೊಮ್ಮೆ ಕ್ರಮಕ್ಕಾಗಿ ಆಯೋಗಕ್ಕೆ ಪಟ್ಟು ಹಿಡಿದಿದ್ದೇವೆ ಎಂದರು ಜೋಶಿ.

# ಶ್ಯಾಮಪ್ರಸಾದ್ ಮುಖರ್ಜಿ ಅವರ ದೃಷ್ಟಿಕೋನ ಭಾರತದ ಪಯಣಕ್ಕೆ ಮಾರ್ಗದರ್ಶನ: ಪ್ರಧಾನಿ ಮೋದಿ



**ನವದೆಹಲಿ,ಜು.6:** ಶ್ಯಾಮ ಪ್ರಸಾದ್ ಮುಖರ್ಜಿ ಅವರ 125ನೇ ಜನ್ಮ ದಿನಾಚರಣೆಯಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಅವರಿಗೆ ಗೌರವ ಸಲ್ಲಿಸಿದರು, ಶಿಕ್ಷಣ, ಕೈಗಾರಿಕೆ, ಮಾನವೀಯ ಸೇವೆ ಮತ್ತು ರಾಷ್ಟ್ರೀಯ ಏಕತೆಗೆ ನೀಡಿದ ಕೊಡುಗೆಗಳು ಅಭಿವೃದ್ಧಿ ಹೊಂದಿದ ಭಾರತದತ್ತ ದೇಶದ ಪ್ರಗತಿಗೆ ಪ್ರೇರಣೆ ನೀಡುತ್ತಿವೆ ಎಂದು ಭಾರತದ ಅಗ್ರಗಣ್ಯ ರಾಷ್ಟ್ರನಿರ್ಮಾಣಕಾರರಲ್ಲಿ ಒಬ್ಬರು ಎಂದು ಬಣ್ಣಿಸಿದರು. "ಇಂದು, ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ 125ನೇ ಜಯಂತಿಯಂದು, ಭಾರತದ ಅತ್ಯಂತ ಗಮನಾರ್ಹ ರಾಷ್ಟ್ರನಿರ್ಮಾಣಕಾರರಲ್ಲಿ ಒಬ್ಬರಿಗೆ ನಾನು ನಮಸ್ಕರಿಸುತ್ತೇನೆ, ಅವರ ಜೀವನವನ್ನು ಪಾಂಡಿತ್ಯ, ಧೈರ್ಯ ಮತ್ತು ರಾಷ್ಟ್ರೀಯ ಸೇವೆಗೆ ಅಚಲ ಬದ್ಧತೆಯಿಂದ ವ್ಯಾಖ್ಯಾನಿಸಲಾಗಿದೆ. ಅವರು ಭಾರತದ ಏಕತೆ, ಘನತೆ ಮತ್ತು ಪ್ರಗತಿಗಾಗಿ ತಮ್ಮನ್ನು ತಾವು ಅರ್ಪಿಸಿಕೊಂಡರು" ಎಂದು ಪ್ರಧಾನಿ ಹೇಳಿದರು. ಮುಖರ್ಜಿ ಅವರ ಬಹುಮುಖಿ ಪರಂಪರೆಯನ್ನು ಎತ್ತಿ ತೋರಿಸುತ್ತಾ, ಶಿಕ್ಷಣ, ಆಡಳಿತ ಮತ್ತು ಕೈಗಾರಿಕಾ ಅಭಿವೃದ್ಧಿ ಸೇರಿದಂತೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ಅವರ ಕೊಡುಗೆಗಳು ವಿಸ್ತರಿಸಿವೆ ಎಂದು ಮೋದಿ ಹೇಳಿದರು. ಎಲ್ಲಕ್ಕಿಂತ ಹೆಚ್ಚಾಗಿ, ಭಾರತದ ಏಕತೆ ಮತ್ತು ಸಮಗ್ರತೆಗೆ ಅವರ ದೃಢವಾದ ಬದ್ಧತೆಯು ಸ್ಫೂರ್ತಿಯ ಶಾಶ್ವತ ಮೂಲವಾಗಿ ಉಳಿದಿದೆ" ಎಂದು ಪ್ರಧಾನಿ ಹೇಳಿದರು. ದೇಶಾದ್ಯಂತ ಬಿಜೆಪಿ ಮತ್ತು ಅದರ ಅಂಗಸಂಸ್ಥೆಗಳು ಮುಖರ್ಜಿಯವರ 125ನೇ ಜನ್ಮ ದಿನಾಚರಣೆಯನ್ನು ಸರಣಿ ಕಾರ್ಯಕ್ರಮಗಳ ಮೂಲಕ ಸ್ಮರಿಸುತ್ತಿರುವಾಗ, ಭಾರತದ ರಾಜಕೀಯ ಪ್ರವಚನವನ್ನು ರೂಪಿಸುವಲ್ಲಿ ಅವರ ಪಾತ್ರ ಮತ್ತು ರಾಷ್ಟ್ರೀಯ ಏಕತೆ, ಸ್ವಾವಲಂಬನೆ ಮತ್ತು ಸಾರ್ವಜನಿಕ ಸೇವೆಗೆ ಅವರ ನಿರಂತರ ಒತ್ತು ನೀಡಿರುವುದನ್ನು ಸ್ಮರಿಸುವ ಸಂದರ್ಭದಲ್ಲಿ ಪ್ರಧಾನಿಯವರ ಗೌರವ ನಮನ ಸಲ್ಲಿಸಲಾಯಿತು.

# ಪಹಲ್ಗಾಮ್ ದಾಳಿ: ಎನ್ಐಎ ಚಾರ್ಜ್‌ಶೀಟ್‌ನಲ್ಲಿ ಪಾಕ್ ಮೂಲದ ಹಫೀಜ್ ಸಯೀದ್ ಹೆಸರು



**ನವದೆಹಲಿ, ಜು.6:** ಪಹಲ್ಗಾಮ್ ಭಯೋತ್ಪಾದಕ ದಾಳಿ ಪ್ರಕರಣದಲ್ಲಿ ಪಾಕಿಸ್ತಾನ ಮೂಲದ ಭಯೋತ್ಪಾದಕ ಮತ್ತು ಎಲ್‌ಇಟಿ/ಜೆಯುಡಿ ಮುಖ್ಯಸ್ಥ ಮತ್ತು ಸ್ಥಾಪಕ ಹಫೀಜ್ ಸಯೀದ್ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸೋಮವಾರ ಆರೋಪಗಳನ್ನು ದಾಖಲಿಸಿದೆ. ಜಮ್ಮುವಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಲಾದ ಪೂರಕ ಆರೋಪಪಟ್ಟಿಯಲ್ಲಿ, ಭಯೋತ್ಪಾದನಾ ನಿಗ್ರಹ ಸಂಸ್ಥೆ ಹಫೀಜ್ ಸಯೀದ್ ವಿರುದ್ಧ ವೈಯಕ್ತಿಕವಾಗಿ ಮತ್ತು ನಿಷೇಧಿತ ಲಷ್ಕರ್-ಎ-ತೊಯ್ಬಾ (ಎಲ್‌ಇಟಿ) ಭಯೋತ್ಪಾದಕ ಸಂಘಟನೆ ಮತ್ತು ಅದರ ಸಕ್ರಿಯ ಪ್ರಾಕ್ಸಿ/ಕವರ್ ಸಂಘಟನೆ ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಮುಖ್ಯಸ್ಥನಾಗಿಯೂ ಆರೋಪ ಹೊರಿಸಿದೆ. ಆರೋಪಿಯ ವಿರುದ್ಧ ಬಿಎನ್‌ಎಸ್, 2023 ಮತ್ತು ಕಾನೂನುಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ಕಾಯ್ದೆ, 1967 ರ ವಿವಿಧ ವಿಭಾಗಗಳ ಅಡಿಯಲ್ಲಿ ಆರೋಪ ಹೊರಿಸಲಾಗಿದೆ. ಭಾರತದ ವಿರುದ್ಧ ಯುದ್ಧ ನಡೆಸಿದ್ದಕ್ಕಾಗಿ ಮತ್ತು ಗಡಿಯಾಚೆಯಿಂದ ಪಿತೂರಿ ರೂಪಿಸಿದ್ದಕ್ಕಾಗಿ ಆರೋಪಿಗಳ ವಿರುದ್ಧ ಎನ್‌ಐಎ ದಂಡನಾ ವಿಭಾಗವನ್ನು ಆರೋಪಪಟ್ಟಿಯಲ್ಲಿ ಉಲ್ಲೇಖಿಸಿದೆ.

ಮೂಲ 1,597 ಪುಟಗಳ ಚಾರ್ಜ್‌ಶೀಟ್‌ನ ಮುಂದುವರಿದ ಭಾಗವಾಗಿ ಸಲ್ಲಿಸಲಾದ ಚಾರ್ಜ್‌ಶೀಟ್, ಪಾಕಿಸ್ತಾನದ ಪಿತೂರಿ, ಹಫೀಜ್ ಸಯೀದ್ ಪಾತ್ರ ಮತ್ತು ಪ್ರಕರಣದಲ್ಲಿ ಎನ್‌ಐಎ ಸಂಗ್ರಹಿಸಿದ ಪೋಷಕ ಸಾಕ್ಷ್ಯಗಳ ವಿವರಗಳನ್ನು ಒದಗಿಸುತ್ತದೆ. ಡಿಸೆಂಬರ್ 15, 2025 ರಂದು ಸಲ್ಲಿಸಲಾದ ತನ್ನ ಹಿಂದಿನ ಚಾರ್ಜ್‌ಶೀಟ್‌ನಲ್ಲಿ, NIA ಪಾಕಿಸ್ತಾನಿ ಹ್ಯಾಂಡ್ಲರ್ ಭಯೋತ್ಪಾದಕ ಸಾಜಿದ್ ಜಾಟ್ ಅವರನ್ನು ಆರೋಪಿಯನ್ನಾಗಿ ಮತ್ತು ಜುಲೈ 2025 ರಲ್ಲಿ ಆಪರೇಷನ್ ಮಹಾದೇವ್ ಸಮಯದಲ್ಲಿ ಭದ್ರತಾ ಪಡೆಗಳಿಂದ ಕೊಲ್ಲಲ್ಪಟ್ಟ ಮೂವರು ಭಯೋತ್ಪಾದಕರು ಮತ್ತು ಬಂಧಿತ ಇಬ್ಬರು ಆರೋಪಿಗಳನ್ನು ಚಾರ್ಜ್‌ಶೀಟ್ ಮಾಡಿತ್ತು. ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಯೋಜಿಸುವುದು, ಸುಗಮಗೊಳಿಸುವುದು ಮತ್ತು ಕಾರ್ಯಗತಗೊಳಿಸುವಲ್ಲಿ ಅದರ ಪಾತ್ರಕ್ಕಾಗಿ ನಿಷೇಧಿತ ಲಷ್ಕರ್ ತೊಯ್ಬಾ ಭಯೋತ್ಪಾದಕ ಸಂಘಟನೆಯನ್ನು ಕಾನೂನು ಘಟಕವೆಂದು ಅದು ಆರೋಪಿಸಿದೆ. ಗಡಿಯಾಚೆಯಿಂದ ಭಾರತೀಯ ನೆಲದಲ್ಲಿ ಭಯೋತ್ಪಾದನೆಯನ್ನು ಸಕ್ರಿಯವಾಗಿ ಪ್ರಾಯೋಜಿಸುತ್ತಿರುವ ಪಾಕಿಸ್ತಾನದ ಸಂಪೂರ್ಣ ಪಿತೂರಿಯನ್ನು ಬಯಲು ಮಾಡಲು ಎನ್‌ಐಎ ಪ್ರಕರಣದ ತನಿಖೆಯನ್ನು ಮುಂದುವರೆಸಿದೆ.

# ಬಿಆರ್‌ಓ ನಿಧಿ ದುರುಪಯೋಗ ಪ್ರಕರಣದಲ್ಲಿ 11 ರಾಜ್ಯಗಳ 26 ಸ್ಥಳಗಳಲ್ಲಿ ಸಿಬಿಐ ದಾಳಿ




**ನವದೆಹಲಿ, ಜು.6:** ಗಡಿ ರಸ್ತೆ ಸಂಸ್ಥೆ (ಬಿಆರ್‌ಒ)ಯಲ್ಲಿನ ನಿಧಿ ದುರುಪಯೋಗಕ್ಕೆ ಸಂಬಂಧಿಸಿದ ನಾಲ್ಕು ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ, ಜಮ್ಮು ಮತ್ತು ಕಾಶ್ಮೀರ, ಲಡಾಖ್, ದೆಹಲಿ, ಹರಿಯಾಣ, ಉತ್ತರಾಖಂಡ, ಉತ್ತರ ಪ್ರದೇಶ, ಬಿಹಾರ, ಮಹಾರಾಷ್ಟ್ರ, ಅಸ್ಸಾಂ, ಅರುಣಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್ ಸೇರಿದಂತೆ 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 26 ಸ್ಥಳಗಳಲ್ಲಿ ಸೋಮವಾರ ಕೇಂದ್ರ ತನಿಖಾ ದಳ ದಾಳಿ ನಡೆಸಿದೆ. ಶೋಧನೆಗಳ ಸಮಯದಲ್ಲಿ ಹಲವಾರು ಅಪರಾಧ ದಾಖಲೆಗಳು ಮತ್ತು ಡಿಜಿಟಲ್ ಪುರಾವೆಗಳನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ. ಕೇಂದ್ರಾಡಳಿತ ಪ್ರದೇಶ ಲಡಾಖ್‌ನಲ್ಲಿ ಪ್ರಾಜೆಕ್ಟ್ ವಿಜಯಕ್ ಮತ್ತು ಪ್ರಾಜೆಕ್ಟ್ ಯೋಜಕ್ ಅಡಿಯಲ್ಲಿ ನಕಲಿ ಕ್ಯಾಶುಯಲ್ ಕಾರ್ಮಿಕರ ಹೆಸರಿನಲ್ಲಿ ಪಾವತಿಗಳನ್ನು ಬಿಡುಗಡೆ ಮಾಡುವಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿಬಿಐ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಿಆರ್‌ಒನ ತಾಂತ್ರಿಕ ಅಧಿಕಾರಿಗಳ ಮಂಡಳಿಯು ನಡೆಸಿದ ಆಂತರಿಕ ವಿಚಾರಣೆಯ ನಂತರ ರಕ್ಷಣಾ ಸಚಿವಾಲಯ ಸಲ್ಲಿಸಿದ ಕ್ರಿಮಿನಲ್ ದೂರುಗಳ ಆಧಾರದ ಮೇಲೆ ನಾಲ್ಕು ಎಫ್‌ಐಆರ್ ದಾಖಲಿಸಲಾಗಿದೆ."ಈ ಅಪರಾಧಗಳಲ್ಲಿ ಸರ್ಕಾರಿ ನಿಧಿಯ ದುರುಪಯೋಗ, ವಂಚನೆ, ನಕಲಿ ದಾಖಲೆ, ಕ್ರಿಮಿನಲ್ ನಂಬಿಕೆ ಉಲ್ಲಂಘನೆ ಮತ್ತು ಐಪಿಸಿ ಅಡಿಯಲ್ಲಿ ಕ್ರಿಮಿನಲ್ ಪಿತೂರಿ, ಜೊತೆಗೆ ಭ್ರಷ್ಟಾಚಾರ ತಡೆ ಕಾಯ್ದೆ, 1988 ರ ಅಡಿಯಲ್ಲಿ ಕ್ರಿಮಿನಲ್ ದುರ್ನಡತೆ ಮತ್ತು ಲಂಚ ಸೇರಿವೆ. ಲೆಫ್ಟಿನೆಂಟ್ ಕರ್ನಲ್ ಮತ್ತು ಮೇಜರ್ ಶ್ರೇಣಿಯ ಅಧಿಕಾರಿಗಳು, ಎಂಜಿನಿಯರ್‌ಗಳು ಮತ್ತು ಕೆಲವು ಖಾಸಗಿ ವ್ಯಕ್ತಿಗಳು ಸೇರಿದಂತೆ ಒಟ್ಟು 10 ಅಧಿಕಾರಿಗಳನ್ನು ಎಫ್‌ಐಆರ್‌ಗಳಲ್ಲಿ ಹೆಸರಿಸಲಾಗಿದೆ" ಎಂದು ಅಧಿಕಾರಿ ಹೇಳಿದರು. ಈ ವಿಷಯದ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ.

### ಈ ಪಾಪಕೃತ್ಯ ಮಾಡಿದ ಪ್ರತಿಯೊಬ್ಬರನ್ನೂ ಮೋದಿ, ಯೋಗಿ ಶಿಕ್ಷಿಸುತ್ತಾರೆ

# ಮೌನಮುರಿದ ರಾಮಮಂದಿರ ಟ್ರಸ್ಟ್ ಮುಖ್ಯಸ್ಥ



**ಅಯೋಧ್ಯೆ,ಜು.6:** ರಾಮ ಲಲ್ಲಾನ ದೇವಾಲಯದಲ್ಲಿ ದೇಣಿಗೆ ಕದಿಯುವ ಪಾಪಕೃತ್ಯವನ್ನು ಯಾರು ಮಾಡಿದ್ದಾರೋ ಪ್ರತಿಯೊಬ್ಬರಿಗೂ ಶಿಕ್ಷೆ ಆಗುವಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಸಿಎಂ ಯೋಗಿ ಆದಿತ್ಯನಾಥ್ ನೋಡಿಕೊಳ್ಳುತ್ತಾರೆ ಎಂದು ರಾಮ ಮಂದಿರ ಟ್ರಸ್ಟ್ ಮುಖ್ಯಸ್ಥ ನೃತ್ಯ ಗೋಪಾಲ್‌ದಾಸ್ ಹೇಳಿದ್ದಾರೆ.

ರಾಮಮಂದಿರ ದೇಣಿಗೆ ಕಳವು ಹಗರಣ ಬೆಳಕಿಗೆ ಬಂದ ನಂತರ ಇದು ಅವರ ಮೊದಲ ಪ್ರತಿಕ್ರಿಯೆಯಾಗಿದೆ. ಸೋಮವಾರ ರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ನಿರ್ಣಾಯಕ ಸಭೆ ನಡೆಯಲಿದೆ. ಸಭೆಗೂ ಮುನ್ನ ಹಿರಿಯ ಯತಿಗಳು ಮಾತನಾಡಿ, ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಶ್ರೀರಾಮ್ ಲಲ್ಲಾ ದೇವಾಲಯದಲ್ಲಿ ದೇಣಿಗೆ ಕಳ್ಳತನದಿಂದ ನನಗೆ ತೀವ್ರ ನೋವಾಗಿದೆ. ಈ ಪಾಪಕೃತ್ಯದಲ್ಲಿ ಭಾಗಿಯಾಗಿರುವ ಪ್ರತಿಯೊಬ್ಬರನ್ನೂ ಅಧಿಕಾರಿಗಳು ನ್ಯಾಯಕ್ಕೆ ತರಬೇಕು. ಅವರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಇದು ಲಕ್ಷಾಂತರ ಭಕ್ತರ ನಂಬಿಕೆಯ ವಿಷಯವಾಗಿದೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ನನಗೆ ಸಂಪೂರ್ಣ ನಂಬಿಕೆಯಿದೆ. ಅವರು ಈ ಪಾಪಕೃತ್ಯದಲ್ಲಿ ಭಾಗಿಯಾದ ಪ್ರತಿಯೊಬ್ಬರಿಗೂ ಶಿಕ್ಷೆಯಾಗುವಂತೆ ನೋಡಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ಅಲ್ಲದೇ ದೇಣಿಗೆ ಕಳ್ಳತನ ವಿಷಯವನ್ನು ವೈಯಕ್ತಿಯ ಲಾಭಕ್ಕಾಗಿ, ರಾಜಕೀಯಕ್ಕಾಗಿ ಬಳಸಿಕೊಳ್ಳದಂತೆ ಮನವಿ ಮಾಡಿದ್ದಾರೆ.

### ವಾರ್ಷಿಕ ಸಂತ ಉತ್ಸವ ಸಂಭ್ರಮಿಸಿದ ಸ್ಯೆಂಟ್ ಪೀಟರ್ಸ್ ಅಸೋಸಿಯೇಶನ್ ಮುಂಬಯಿ

# ವಾರ್ಷಿಕ ಸಡಗರವು ಸಂಬಂಧ ಬೆಸೆಯುತ್ತವೆ: ಎರಿಕ್ ಕರ್ವಾಲೋ



**ಮುಂಬಯಿ, ಜು.6:** ನಮ್ಮ ಪೋಷಕಸಂತರಾದ ಸ್ಯೆಂಟ್ ಪೀಟರ್ ಅವರ ವಾರ್ಷಿಕ ಮಹೋತ್ಸವದ ಶುಭ ಸಂದರ್ಭದಲ್ಲಿ ಎಸ್‌ಪಿಎ ಸಂಸ್ಥೆಯ ಪರವಾಗಿ ಎಲ್ಲರಿಗೂ ಹಾರ್ದಿಕ ಶುಭಾಶಯಗಳನ್ನು ಕೋರುವೆ. ಸ್ಯೆಂಟ್ ಪೀಟರ್ ಅವರ ಅಚಲವಾದ ನಂಬಿಕೆ ಮತ್ತು ಸತ್ಯದ ಹಾದಿ ನಮ್ಮಲ್ಲಿ ಧಾರ್ಮಿಕ ಜಾಗೃತಿ ಹಾಗೂ ಆಧ್ಯಾತ್ಮಿಕ ಶಕ್ತಿಯನ್ನು ಸದಾ ತುಂಬಲಿ ಎಂದು ಪ್ರಾರ್ಥಿಸುತ್ತೇವೆ. ವಾರ್ಷಿಕ ಸಡಗರವು ಎಲ್ಲರ ಮನೆ-ಮನಗಳಲ್ಲಿ ಸಂತೋಷವನ್ನು ತರಲಿ ಹಾಗೂ ಪೋಷಕಸಂತ ಸ್ಯೆಂಟ್ ಪೀಟರ್ ಅವರ ಆಶೀರ್ವಾದ ಈ ಸಂಸ್ಥೆ ಮತ್ತು ನಿಮ್ಮ ಕುಟುಂಬಗಳ ಮೇಲೆ ಸದಾ ಇರಲಿ ಎಂದು ಸ್ಯೆಂಟ್ ಪೀಟರ್'ಸ್ ಅಸೋಸಿಯೇಶನ್ ಬಾರ್ಕೂರು (ಮುಂಬಯಿ) ಅಧ್ಯಕ್ಷ ಎರಿಕ್ ಕರ್ವಾಲೋ ಆಶಯ ವ್ಯಕ್ತಪಡಿಸಿದರು.

ಪೀಟರ್'ಸ್ ಅಸೋಸಿಯೇಶನ್ ತನ್ನ ಪೋಷಕಸಂತ ಸ್ಯೆಂಟ್ ಪೀಟರ್ ಅವರ 36ನೇ ವಾರ್ಷಿಕ ಉತ್ಸವವನ್ನು ಇಂದಿಲ್ಲಿ ಭಾನುವಾರ ಉಪನಗರ ಅಂಧೇರಿ ಮರೋಲ್ ಇಲ್ಲಿನ ಸ್ಯೆಂಟ್ ಜೋನ್ ಎವಾಂಜಲಿಸ್ಟ್ ಇಗರ್ಜಿ ಸಭಾಗೃಹದಲ್ಲಿ ಅದ್ದೂರಿಯಾಗಿ ಆಚರಿಸಿದ್ದು ಕಾರ್ಯಕ್ರಮದ ಸಭಾಧ್ಯಕ್ಷತೆ ವಹಿಸಿ ಎರಿಕ್ ಕರ್ವಾಲೋ ಮಾತನಾಡಿದರು.

ಸಂಭ್ರಮ ಕಾರ್ಯಕ್ರಮದಲ್ಲಿ ಪಿಲಾರ್ ಥಿಯೋಲಾಜಿಕಲ್ ಕಾಲೇಜ್ ಪಿಲಾರ್-ಗೋವಾ ಇದರ ಪ್ರಾಚಾರ್ಯ ರೆ। ಫಾ। ಡಾ। ಐವಾನ್ ಡಿಅಲ್ಮೇಡಾ ಮುಖ್ಯ ಅತಿಥಿಯಾಗಿದ್ದರು. ಎಸ್‌ಪಿಎ ಮಾಜಿ ಅಧ್ಯಕ್ಷರಾದ ರಿಚಾರ್ಡ್ ಕರ್ವಾಲೋ, ಐವಾನ್ ರೆಬೆಲ್ಲೊ, ಬೋನಿಫಸ್ ಸಿಕ್ವೇರಾ ಹಾಗೂ ಪ್ರಸಕ್ತ ಉಪಾಧ್ಯಕ್ಷರಾದ ವಿಲ್ಫ್ರೆಡ್ ಸಿಕ್ವೇರಾ ಮತ್ತು ಜೋನ್ ಎಲ್. ಗೊನ್ಸಾಲ್ವಿಸ್, ಕಾರ್ಯದರ್ಶಿ ಆರ್ಥರ್ ಮೆಂಡೋನ್ಸಾ, ಖಜಾಂಚಿ ವಿನ್ಸೆಂಟ್ ಫುರ್ಟಾಡೊ ವೇದಿಕೆಯನ್ನು ಅಲಂಕರಿಸಿ ಹಬ್ಬದ ಸಂದೇಶವನ್ನಿತ್ತರು.

ಸಂತ ಪೀಟರ್ ಓರ್ವ ಬೆಸ್ತನಾಗಿದ್ದು ಅವರ ಪ್ರೇರಣೆಯಂತೆ, ನಾವೆಲ್ಲರೂ ಸಮಾಜದಲ್ಲಿ ಒಗ್ಗಟ್ಟು, ಕರುಣೆ ಮತ್ತು ಪರಸ್ಪರ ಸಹಕಾರವನ್ನು ಬೆಳೆಸುವ ಸಾಮಾಜಿಕ ಜವಾಬ್ದಾರಿಯನ್ನು ಅರಿಯಬೇಕಾಗಿದೆ. ಅವರ ನಿರಂತರ ಕಲಿಕೆ ಮತ್ತು ಜ್ಞಾನದ ಹಾದಿಯು ನಮ್ಮ ಸಂಸ್ಥೆಯ ಶೈಕ್ಷಣಿಕ ಉನ್ನತಿಗೆ ದಾರಿದೀಪವಾಗಿದ್ದು, ಯುವಮನಸ್ಸುಗಳನ್ನು ಸನ್ಮಾರ್ಗದಲ್ಲಿ ರೂಪಿಸಲು ನಮಗೆ ಸದಾ ಪ್ರೇರಣೆ ನೀಡುವಂತಾಗಲಿ. ಭಾವೀ ಪೀಳಿಗೆಗೆ ನೈತಿಕ ಮೌಲ್ಯಗಳ ಆಧಾರದ ಮೇಲೆ ಪ್ರಗತಿಪರ ಭವಿಷ್ಯವನ್ನು ನಿರ್ಮಿಸಿಕೊಡುವ ದೃಢ ಸಂಕಲ್ಪವು ಇಂತಹ ಉತ್ಸವಗಳಿಂದ ಆಗಬೇಕು. ಮನುಜರಿಗೆ ಸಾಧನೆಗಳಿಕ್ಕಿಂತ ಸಂಬಂಧಗಳೇ ಶಾಶ್ವತವಾಗಿರುತ್ತದೆ. ಆದ್ದರಿಂದ ನಮ್ಮ ವಿಶ್ವಾಸವೇ ನಮ್ಮ ಸಾಧನೆಯಾಗಲಿ ಎಂದು ಫಾ। ಐವಾನ್ ಡಿಅಲ್ಮೇಡಾ ಶುಭಶಂಸನೆಗೈದರು. ಎಸ್‌ಪಿಎ ಸಕ್ರೀಯ ಸದಸ್ಯರಾಗಿದ್ದು ರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಸ್ವರ್ಣ ಪದಕ ವಿಜೇತ ಜೊಯ್ಲಾನ್ ಫೆರ್ನಾಂಡಿಸ್ ಅವರಿಗೆ ಇವರಿಗೆ ಶಾಲು ಹೊದಿಸಿ, ಪುಷ್ಪಗುಚ್ಛ, ಸ್ಮರಣಿಕೆಯನ್ನೀಡಿ ವಿಶೇಷ ಸಾಧಕ ಸನ್ಮಾನಗೈದು ಅಭಿನಂದಿಸಲಾಯಿತು. ಎಸ್‌ಪಿಎ ಸಂಸ್ಥಾಪಕರಲ್ಲೋರ್ವರಾದ ದಿ। ಸಿಂಪ್ಲೆನ್ ಸಿಕ್ವೇರಾ ಸ್ಮರಣಾರ್ಥ ಗ್ಲಾಡಿಸ್ ಎಸ್.ಸಿಕ್ವೇರಾ, ಆರ್ಚಿಬಾಲ್ಡ್ ಫುರ್ಟಾಡೊ, ದಿ। ಹೆನ್ರಿ ರೋಚ್ ಸ್ಮರಣಾರ್ಥ ಐಡಾ ಹೆನ್ರಿ ರೋಚ್, ಆ್ಯಂಟನಿ ಗೊನ್ಸಾಲ್ವಿಸ್, ದಿ। ನೋರ್ಬರ್ಟ್ ಮಿನೇಜಸ್ ಸ್ಮರಣಾರ್ಥ ಹಿಲ್ಡಾ ಎನ್.ಮಿನೇಜಸ್, ದಿ। ವಿಲ್ಮಾ ಸಿಕ್ವೇರಾ ಸ್ಮರಣಾರ್ಥ ಬೋನಿಫೇಸ್ ಸಿಕ್ವೇರಾ ಮತ್ತು ಪರಿವಾರಗಳ ಪ್ರಾಯೋಜಕತ್ವದಲ್ಲಿ ಎಸ್‌ಪಿಎ ಸದಸ್ಯರ ಮಕ್ಕಳಿಗೆ ವಾರ್ಷಿಕವಾಗಿ ಕೊಡಮಾಡುವ ಶೈಕ್ಷಣಿಕ ಪ್ರೋತ್ಸಾಹಧನ, ಪ್ರತಿಭಾ ಪುರಸ್ಕಾರಗಳನ್ನು ಪ್ರಾಯೋಜಕರುಗಳನ್ನು ಒಳಗೊಂಡು ನಿತಿನ್ ಸಿಕ್ವೇರಾ, ಐಡಾ ಹೆಚ್. ರೋಚ್ ಮತ್ತು ಪದಾಧಿಕಾರಿಗಳು ಜೋಯಲ್ ವಿವಿಯನ್ ಸಿಕ್ವೇರಾ, ಏಂಜೆಲ್ ಜೋಕಿಮ್ ಡಿಸೋಜಾ, ಜಿಸೆಲ್ ಜೋಯ್ಲಾನ್ ಫೆರ್ನಾಂಡಿಸ್, ಕರ್ಟ್ ಆ್ಯಂಥೋನಿ ಗೊನ್ಸಾಲ್ವಿಸ್, ಅರ್ಡೆನ್ ಆರ್ಥರ್ ಮೆಂಡೋನ್ಸಾ, ಸಲೋನಿ ನಿತಿನ್ ಧಂಡ್ ಇವರಿಗೆ ಪುಷ್ಪಗುಚ್ಛ, ಪ್ರಮಾಣ ಪತ್ರಗಳನ್ನಿತ್ತು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಮೋಡೆಲ್ ಬ್ಯಾಂಕ್‌ನ ನಿರ್ದೇಶಕ ಕ್ಲೇಮೆಂಟ್ ಎ.ಲೊಬೋ, ನಿವೃತ್ತ ಪ್ರಾಂಶುಪಾಲೆ ಫಿಲೋಮೆನಾ ಸಿ. ಲೊಬೋ, ಉದ್ಯಮಿ ಹ್ಯಾರಿ ಕರ್ವಾಲೋ ಬಾರ್ಕೂರು, ಎಸ್‌ಪಿಎ ಜತೆ ಕಾರ್ಯದರ್ಶಿ ಜೋಸೆಫ್ ಡಿಅಲ್ಮೇಡಾ, ಸಂಯೋಜಕ ತಿಮೋಥಿ ಡಿಸೋಜಾ, ಆಂತರಿಕ ಲೆಕ್ಕ ಪರಿಶೋಧಕ ಮೈಕೆಲ್ ಡಿಅಲ್ಮೇಡಾ, ಐವಾನ್ ಸುವಾರಿಸ್ ಮುಲುಂಡ್, ಕಿರಣ್ ಆರ್.ಕರ್ವಾಲೋ ಸೇರಿದಂತೆ ಎಸ್‌ಪಿಎ ಮಾಜಿ, ಹಾಲಿ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಮತ್ತು ಸದಸ್ಯರನೇಕರು ಹಾಜರಿದ್ದರು. ಆರಂಭದಲ್ಲಿ ಅಭಿವಂದನಾಪೂಜೆ ನಡೆಸಲಾಗಿದ್ದು ಫಾ। ಡಾ। ಐವಾನ್ ಡಿಅಲ್ಮೇಡಾ ಪ್ರಸಂಗವನ್ನಿತ್ತು ಸಂಭ್ರಮಿಕ ಪೂಜೆ ನೆರವೇರಿಸಿ ಅನುಗ್ರಹಿಸಿದರು. ರೆನ್ನಿ ಐವಾನ್ ಸುವಾರೆಸ್, ಜಾನೆಟ್ ಕರ್ವಾಲೋ, ಜೋನ್ ಗೋನ್ಸಾಲ್ವಿಸ್, ಫ್ರೀಡಾ ಮೋರಸ್ ಹಾಗೂ ವೀರಾ ಗೋನ್ಸಾಲ್ವಿಸ್, ಪ್ರಮೀಳಾ ಫೆರ್ನಾಂಡಿಸ್, ರೀಟಾ ಸುವಾರೆಸ್, ಸಿ। ಜ್ಯೋತಿ ಡಿಅಲ್ಮೇಡಾ, ರೋಸಿ ಡಿಅಲ್ಮೇಡಾ, ಫೆಲ್ಸಿ ಸುವಾರೆಸ್ ಪೂಜೆಯ ವಿವಿಧ ಪ್ರಾರ್ಥನೆಗಳನ್ನು ಪಠಿಸಿದರು. ಎಡ್ವಿನ್ ಆಗಸ್ಟಿನ್ ಸುವಾರೆಸ್, ಸುನೀತಾ ಎ.ಸುವಾರೆಸ್, ಟೆಲ್ಮಾ ಜೇಮ್ಸ್ ಡೆಸಾ, ಪ್ರಶಾಂತ್ ಸೆರಾವ್ರೋ ಭಕ್ತಿಗೀತೆಗಳನ್ನಾಡಿದರು.

ಸಂತ ಪೀಟರ್ ಅವರ ಸ್ತುತಿಯೊಂದಿಗೆ ನಿರ್ಮಲಾ ಐವಾನ್ ರೆಬೆಲ್ಲೊ ಕಾರ್ಯಕ್ರಮ ಆದಿಗೊಳಿಸಿದರು. ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಅತಿಥಿಗಣ್ಯರಿಗೆ ಪುಷ್ಪಗುಪ್ಛವನ್ನಿತ್ತು ಗೌರವಿಸಿದರು. ವಿನ್ಸೆಂಟ್ ಫುರ್ಟಾಡೊ ಪ್ರತಿಭಾನ್ವಿತರ ಯಾದಿ ವಾಚಿಸಿಸಿದರು. ಆರ್ಥರ್ ಮೆಂಡೋನ್ಸಾ ವಾರ್ಷಿಕ ಕಾರ್ಯಚಟುವಟಿಕೆಗಳು ಮತ್ತು ಭವಿಷ್ಯದ ಯೋಜನೆ ಬಗ್ಗೆ ಮಾಹಿತಿಯನ್ನಿತ್ತರು. ಜೋನ್ ಗೊನ್ಸಾಲ್ವಿಸ್ ಪುರಸ್ಕೃತರನ್ನು ಪರಿಚಯಿಸಿದರು. ಸಂಸ್ಥೆಯ ಸದಸ್ಯರು ಮತ್ತು ಮಕ್ಕಳು ನೃತ್ಯ, ಹಾಡುಗಳನ್ನಾಡಿ ಪ್ರಹಸನಗಳೊಂದಿಗೆ ಮನೋರಂನೆ ನೀಡಿದರು. ಕು। ಅನೊಲಾ ಮಾರ್ಟಿಸ್ ಮನೋರಂಜನಾ ಕಾರ್ಯಕ್ರಮ ನಿರ್ವಾಹಿಸಿದರು. ಜೊಯ್ಲಾನ್ ಫೆರ್ನಾಂಡಿಸ್ ಸ್ವಾಗತಿಸಿ, ಪ್ರಸ್ತಾವನೆಗೈದು ಕಾರ್ಯಕ್ರಮ ನಿರೂಪಿಸಿದರು. ವಿಲ್ಫ್ರೆಡ್ ಸಿಕ್ವೇರಾ ವಂದಿಸಿದರು.

# ಅಯೋಧ್ಯೆ ರಾಮಮಂದಿರದಲ್ಲಿ ನೀವು ಕದ್ದು ನಮ್ಮನ್ನು ಸಾಕ್ಷಿ ಕೇಳ್ತೀರಾ: ಖೇರಾ ಪ್ರಶ್ನೆ

**ನವದೆಹಲಿ, ಜು. 6:** ಅಯೋಧ್ಯೆ ರಾಮಮಂದಿರದಲ್ಲಿ ನಡೆದಿರುವ ದೇಣಿಗೆ ದುರುಪಯೋಗವು ಸದ್ಯ ದೇಶಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗುತ್ತಿದೆ. ಈ ಹಗರಣದ ಸಾಕ್ಷ್ಯವನ್ನು ಕೇಳುತ್ತಿರುವ ಬಿಜೆಪಿಗರ ವಿರುದ್ಧ ಕಾಂಗ್ರೆಸ್ ಹಿರಿಯ ನಾಯಕ, ರಾಜ್ಯಸಭೆ ಸದಸ್ಯ ಪವನ್ ಖೇಡಾ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಕಳ್ಳತನ ಮಾಡಿರೋರು ನೀವು, ಸಾಕ್ಷ್ಯ ನಮ್ಮಲ್ಲಿ ಕೇಳ್ತೀರಾ ಎಂಬರ್ಥದಲ್ಲಿ ಪ್ರಶ್ನಿಸಿದ್ದಾರೆ. ಅಯೋಧ್ಯೆ ರಾಮಮಂದಿರದಲ್ಲಿ ಕಾಣಿಕೆಗಳ ಕಳ್ಳತನಕ್ಕೆ ಸಂಬಂಧಿಸಿದಂತೆ ಹೊಸ ಆರೋಪಗಳು ಹೊರಬೀಳುತ್ತಿವೆ ಮತ್ತು ಪ್ರತಿದಿನ ಹೊಸ ಪುರಾವೆಗಳು ಬೆಳಕಿಗೆ ಬರುತ್ತಿವೆ. ಇಂದು, ವಿಶ್ವ ಹಿಂದೂ ಪರಿಷತ್‌ನ ಅಲೋಕ್ ಕುಮಾರ್ ತನಿಖಾ ಅಧಿಕಾರಿಗೆ ಪತ್ರ ಬರೆದು, ಪ್ರಿಯಾಂಕಾಗಾಂಧಿ, ಅಖಿಲೇಶ್ ಯಾದವ್ ಮತ್ತು ರಾಮ್ ಗೋಪಾಲ್ ಯಾದವ್ ಅವರಿಂದ ಕಳ್ಳತನದ ಪುರಾವೆಗಳನ್ನು ಪಡೆಯಬೇಕೆಂದು ಕೇಳಿದ್ದಾರೆ ಎಂದು ಹೇಳಿದ್ದಾರೆ.

ಅಂದರೆ ಒಂದು ಪಕ್ಷವು ಕಳ್ಳತನವನ್ನು ಮಾಡಿದರೆ, ಇನ್ನೊಂದು ಪಕ್ಷವು ಪುರಾವೆಗಳನ್ನು ಒದಗಿಸಬೇಕು ಎಂಬ ಅರ್ಥವೇ? ಸತ್ಯವೆಂದರೆ ಅವರಿಗೆ ಕಳ್ಳರನ್ನು ಹಿಡಿಯುವ ಉದ್ದೇಶವೇನಿಲ್ಲ. ಅಧಿಕಾರದಲ್ಲಿರುವವರು ತಾವೇ ತಪ್ಪು ಎಸಗಿ, ಪ್ರಶ್ನಿಸುವ ವಿರೋಧ ಪಕ್ಷಗಳನ್ನೇ ಅಪರಾಧಿಗಳ ಸ್ಥಾನದಲ್ಲಿ ನಿಲ್ಲಿಸಲು ಪ್ರಯತ್ನಿಸುತ್ತಿದ್ದಾರೆ. ಸಾಕ್ಷ್ಯಗಳನ್ನು ಸೃಷ್ಟಿಸುವ ಕೆಲಸ ನಡೆಯುತ್ತಿದೆಯೇ ವಿನಃ ಸತ್ಯದ ಹುಡುಕಾಟವಲ್ಲ? ಎಂದು ದೂರಿದ್ದಾರೆ.

ದೇಶದ ಪ್ರಮುಖ ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಿಕೊಂಡು ಕೇಂದ್ರ ತನಿಖಾ ಸಂಸ್ಥೆಗಳಾದ ಇಡಿ ಮತ್ತು ಸಿಬಿಐ ದಾಳಿ ನಡೆಸುತ್ತಿರುವುದನ್ನು ಖೇಡಾ ಬಲವಾಗಿ ಖಂಡಿಸಿದ್ದಾರೆ. ಹಾಗೆಯೇ ಚುನಾವಣಾ ಸಮಯದಲ್ಲಿ ವಿರೋಧ ಪಕ್ಷಗಳ ಧ್ವನಿಯನ್ನು ಅಡಗಿಸಲು ಮತ್ತು ಸಾರ್ವಜನಿಕರ ಗಮನವನ್ನು ನಿಜವಾದ ಸಮಸ್ಯೆಗಳಿಂದ (ನಿರುದ್ಯೋಗ, ಬೆಲೆ ಏರಿಕೆ) ಬೇರೆಡೆ ಸೆಳೆಯಲು ಇಂತಹ ತಂತ್ರಗಳನ್ನು ಬಳಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

# ಮುಂಬೈ ಮಳೆ: ಬಹುಮಹಡಿ ಕಟ್ಟಡ ಕುಸಿದು 6 ಸಾವು

**ಮುಂಬೈ, ಜು. 6:** ಭೀಕರ ಮಳೆಗೆ ಬಹುಮಹಡಿ ಕಟ್ಟಡ ಕುಸಿದು ಆರು ಮಂದಿ ಸಾವನ್ನಪ್ಪಿ, ಒಬ್ಬರು ಗಾಯಗೊಂಡ ಘಟನೆ ಮಹಾರಾಷ್ಟ್ರದ ಮುಂಬೈನ ಮನ್ಖುರ್ದ್ ಪ್ರದೇಶದಲ್ಲಿ ನಡೆದಿದೆ. ಮುಂಬೈ ನಗರ ಮತ್ತು ನೆರೆಯ ಥಾಣೆ, ಪಾಲ್ಘರ್ ಜಿಲ್ಲೆಗಳಲ್ಲಿ ನಿರಂತರ ಮಳೆ ಸುರಿಯುತ್ತಿದೆ. ರಸ್ತೆಗಳು ನೀರಿನಿಂದ ತುಂಬಿದ್ದು, ಹಲವು ಕಡೆ ಕಟ್ಟಡಗಳಿಗೆ ಹಾನಿಯಾಗಿದೆ.

ಕಟ್ಟಡ ಚಾಳ್ ಸಂಖ್ಯೆ 5 ಕುಸಿದಿದ್ದು, ಸದ್ಯ ಅವಶೇಷಗಳ ಅಡಿಯಲ್ಲಿ ಒಬ್ಬ ವ್ಯಕ್ತಿ ಸಿಲುಕಿರುವ ಶಂಕೆಯಿದೆ. ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ ಸಿಬ್ಬಂದಿ ಸೇರಿದಂತೆ ಹಲವು ಸಂಸ್ಥೆಗಳು ಕಾರ್ಯಾಚರಣೆಯಲ್ಲಿ ತೊಡಗಿದೆ. ಮಳೆಯಿಂದಾಗಿ ಕಾರ್ಯಾಚರಣೆಗೆ ಅಡ್ಡಿಯಾಗುತ್ತಿದೆ ಎಂದು ವರದಿಯಾಗಿದೆ.

ಬೃಹನ್ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ (ಬಿಎಂಸಿ) ಪ್ರಕಾರ, ನಾಲ್ಕು ಮಹಿಳೆಯರು ಮತ್ತು ಒಬ್ಬ ಪುರುಷನನ್ನು ಶತಾಬ್ದಿ ಆಸ್ಪತ್ರೆಗೆ ಸಾಗಿಸಲಾಗಿದ್ದು, ಇನ್ನೊಬ್ಬ ವ್ಯಕ್ತಿಯನ್ನು ರಾಜವಾಡಿ ಆಸ್ಪತ್ರೆಗೆ ಸಾಗಿಸಲಾಗಿತ್ತು, ಎಲ್ಲರೂ ಸಾವನ್ನಪ್ಪಿದ್ದಾರೆ. ಒಬ್ಬ ಗಾಯಾಳು ಚಿಕಿತ್ಸೆ ಪಡೆಯುತ್ತಿದ್ದಾನೆ.

ಇನ್ನು ಮುಂಬೈನಲ್ಲಿ ದಿನವಿಡೀ ಸುರಿದ ಮಳೆಯಿಂದಾಗಿ ಛತ್ರಪತಿ ಶಿವಾಜಿ ಮಹಾರಾಜ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ವಿಮಾನಗಳ ಮಾರ್ಗ ಬದಲಾವಣೆ ಮತ್ತು ಹಾರಾಟ ರದ್ದತಿ ಮಾಡಲಾಗಿದೆ. ಹಲವಾರು ತಗ್ಗು ಪ್ರದೇಶಗಳು ಜಲಾವೃತಗೊಂಡಿದ್ದು, ಬಿಎಂಸಿ ಸೋಮವಾರ ಎಲ್ಲಾ ಸರ್ಕಾರಿ, ಖಾಸಗಿ ಮತ್ತು ನಾಗರಿಕ ಶಾಲೆಗಳು ಮತ್ತು ಕಾಲೇಜುಗಳಿಗೆ ರಜೆ ಘೋಷಿಸಿದೆ.

ರಾತ್ರಿಯಿಡೀ ಸುರಿದ ಭಾರೀ ಮಳೆಯಿಂದಾಗಿ ಮುಂಬೈನಾದ್ಯಂತ ಹಲವಾರು ರಸ್ತೆಗಳು ಮುಳುಗಿ, ಸಂಚಾರ ಅಸ್ತವ್ಯಸ್ತವಾಗಿದೆ. ನಗರದ ವಿವಿಧ ಭಾಗಗಳಿಂದ ಮರಗಳು ಬಿದ್ದು ನೀರು ನಿಂತಿದೆ. ಕುರ್ಲಾದಲ್ಲಿ ಅಂಗಡಿಯೊಂದರ ಮೇಲೆ ಮರ ಬಿದ್ದು 63 ವರ್ಷದ ವ್ಯಕ್ತಿಯೊಬ್ಬರು ಸಾವನ್ನಪ್ಪಿದರು. ಒಂದು ವಾರದ ಹಿಂದೆಯೂ ಮುಂಬೈನಲ್ಲಿ ಮರ ಬಿದ್ದು ಒಬ್ಬರು ಸಾವನ್ನಪ್ಪಿದ್ದರು.

### ಎಂಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಅದ್ದೂರಿಯಾಗಿ ಚಾಲನೆಗೊಂಡ ಕೊಂಕಣ್ ಮೆಲೋಡಿ ಸ್ಟಾರ್-2026

# ಕೊಂಕಣಿ ರಿಯಾಲಿಟಿ ಗಾಯನ ಸ್ಪರ್ಧಾ ಪರಿಚಯ ಹೊಸತನದ ಪರಿಕಲ್ಪನೆ: ವಾಲ್ಟರ್ ನಂದಳಿಕೆ




**ಮುಂಬಯಿ, ಜು.06:** ಮಾಂಡ್ ಸೊಭಾಣ್‌ನ ಸೋದ್ ಕಾರ್ಯಕ್ರಮದಿಂದ ಆರಂಭವಾದ ಸಂಗೀತ ಪಯಣವನ್ನು ಡಿಜಿವರ್ಲ್ಡ್‌ನ ಎಂಟಿಜಿ, ಗಲ್ಫ್ ವಾಯ್ಸ್ ಆಫ್ ಮಂಗಳೂರು, ಜಿಗಿಬಿಗಿ ತಾರಂ ಸೇರಿದಂತೆ ಹಲವು ವೇದಿಕೆಗಳು ಮತ್ತಷ್ಟು ಬಲಪಡಿಸಿವೆ. ಲಿಯೋ ಚಾರಿಟೇಬಲ್ ಟ್ರಸ್ಟ್ ಯೂಟ್ಯೂಬ್ ಆಧಾರಿತ ಕೊಂಕಣಿ ರಿಯಾಲಿಟಿ ಗಾಯನ ಸ್ಪರ್ಧೆಯನ್ನು ಪರಿಚಯಿಸಿರುವುದು ಹೊಸತನದ ಪರಿಕಲ್ಪನೆಯಾಗಿದ್ದು, ಉದಯೋನ್ಮುಖ ಗಾಯಕರಿಗೆ ಅತ್ಯುತ್ತಮ ವೇದಿಕೆಯಾಗಲಿದೆ. ಆದ್ದರಿಂದ ಕೊಂಕಣಿ ಭಾಷೆ, ಸಂಗೀತ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಡಿಜಿವರ್ಲ್ಡ್‌ನ ಸಂಪೂರ್ಣ ಬೆಂಬಲ ಮುಂದುವರಿಯಲಿದೆ ಎಂದು ಡೈಜಿವರ್ಲ್ಡ್ ಪ್ರೈವೇಟ್ ಲಿಮಿಟೆಡ್ ಸಂಸ್ಥಾಪಕ ವಾಲ್ಟರ್ ಡಿ'ಸೋಜಾ ನಂದಳಿಕೆ ಭರವಸೆ ನೀಡಿದರು.

ಮಂಗಳೂರು ಅಲ್ಲಿನ ಎಂಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಲಿಯೋ ಚಾರಿಟೇಬಲ್ ಟ್ರಸ್ಟ್ (ಎಲ್‌ಸಿಟಿ) ವತಿಯಿಂದ ಆಯೋಜಿಸಲಾದ 'ಕೊಂಕಣ್ ಮೆಲೋಡಿ ಸ್ಟಾರ್ 2026' ಕೊಂಕಣಿ ರಿಯಾಲಿಟಿ ಗಾಯನ ಸ್ಪರ್ಧೆಗೆ ಚಾಲನೆ ನೀಡಿ ವಾಲ್ಟರ್ ನಂದಳಿಕೆ ಮಾತನಾಡಿ ಹೊಸ ಪ್ರತಿಭಾವಂತ ಕೊಂಕಣಿ ಗಾಯಕರನ್ನು ಗುರುತಿಸಿ, ಬೆಳೆಸುವ ಉದ್ದೇಶದಿಂದ ಆಯೋಜಿಸಲಾದ ಈ ವಿಶಿಷ್ಟ ಸಂಗೀತಯಾತ್ರೆ ಇತಿಹಾಸದ ಪುಟ ಸೇರುವಂತಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಎಂಸಿಸಿ ಬ್ಯಾಂಕ್ ಅಧ್ಯಕ್ಷ ಸಹಕಾರ ರತ್ನ ಅನಿಲ್ ಲೋಬೋ ಪೆರ್ಮಾಯಿ ಮುಖ್ಯ ಅತಿಥಿಯಾಗಿದ್ದು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರೆಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗೌರವ ಅತಿಥಿಗಳಾಗಿ ಕೊಂಕಣಿ ನಾಟಕ ಸಭಾ ಅಧ್ಯಕ್ಷ ವಂ। ಫಾ। ರೊಕಿ ಡಿ'ಕುನ್ಹಾ, ಮಾಂಡ್ ಸೊಭಾಣ್ ಅಧ್ಯಕ್ಷ ಲೂಯಿಸ್ ಪಿಂಟೋ, ಮಂಗಳೂರು ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ರಾಯ್ ಕ್ಯಾಸ್ತೆಲಿನೋ, ಖ್ಯಾತ ಗಾಯಕ ಹಾಗೂ ಕೊಂಕಣಿ ಸಂಗೀತ ದಿಗ್ಗಜ ಸ್ವರ್ಗೀಯವಿಲ್ಫಿ ರೆಬಿಂಬಸ್ ಸುಪುತ್ರ ವಿಶ್ವಾಸ್ ರೆಬಿಂಬಸ್ ಉಪಸ್ಥಿತರಿದ್ದರು. ಲಿಯೋ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕ ಲಿಯೋ ಡಿ'ಸೋಜಾ ರಾಣಿಪುರ ಹಾಗೂ ಕಾರ್ಯಕ್ರಮದ ನಿರೂಪಕ, ಕ್ರಿಯೇಟಿವ್ ಹೆಡ್ ಜೆರಿ ಡಿ'ಸೋಜಾ ಬೊಂದೇಲ್ ವೇದಿಕೆಯನ್ನು ಅಲಂಕರಿಸಿರಿದ್ದರು.ವಂ। ಫಾ। ರೊಕಿ ಡಿ'ಕುನ್ಹಾ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಉದ್ಘಾಟನೆಯ ಪ್ರಮುಖ ಆಕರ್ಷಣೆಯಾಗಿ ಕೊಂಕಣ್ ಮೆಲೋಡಿ ಸ್ಟಾರ್ 2026 ಅಧಿಕೃತ ಶೀರ್ಷಿಕೆ ಗೀತೆಯನ್ನು ಬಿಡುಗಡೆ ಮಾಡಲಾಯಿತು. ಅನಿಲ್ ಲೋಬೋ ಮಾತನಾಡಿ ಎಂಸಿಸಿ ಬ್ಯಾಂಕ್ ಸದಾ ಕೊಂಕಣಿ ಸಂಸ್ಕೃತಿಯ ಸಂರಕ್ಷಣೆ ಮತ್ತು ಪ್ರೋತ್ಸಾಹಕ್ಕೆ ಬೆಂಬಲ ನೀಡಿದೆ ಎಂದು ಹೇಳಿದರು. ಲಿಯೋ ಡಿ'ಸೋಜಾ ಮತ್ತು ಜೆರಿ ಡಿ'ಸೋಜಾ ಅವರ ಸಂಗೀತ ಕ್ಷೇತ್ರದ ಸೇವಾರ್ಪಣೆಯನ್ನು ಶ್ಲಾಘಿಸಿ, ಈ ಸ್ಪರ್ಧೆ ಯಶಸ್ವಿಯಾಗಿ ಕೊಂಕಣಿ ಸಂಗೀತ ಕ್ಷೇತ್ರದಲ್ಲಿ ಮೈಲಿಗಲ್ಲು ಆಗಲಿ ಎಂದು ಹಾರೈಸಿದರು.

ಸ್ಟ್ಯಾನಿ ಅಲ್ವಾರೆಸ್ ಅಧ್ಯಕ್ಷೀಯ ನುಡಿಗಳನ್ನಾಡಿ, ಕೊಂಕಣಿ ಸಮುದಾಯ ಸಂಖ್ಯೆಯಲ್ಲಿ ಚಿಕ್ಕದಾಗಿದ್ದರೂ, ಕೊಂಕಣ್ ಮೆಲೋಡಿ ಸ್ಟಾರ್‌ನಂತಹ ದೂರದೃಷ್ಟಿಯ ಕಾರ್ಯಕ್ರಮಗಳು ಶಾಶ್ವತ ಬದಲಾವಣೆ ತರಬಲ್ಲವು ಎಂದು ಹೇಳಿದರು. ಯುವ ಗಾಯಕರನ್ನು ಗುರುತಿಸಿ, ಪ್ರೋತ್ಸಾಹಿಸಿ, ಬೆಳೆಸುವ ಮೂಲಕ ಈ ಸ್ಪರ್ಧೆ ಕೊಂಕಣಿ ಭಾಷೆ, ಸಾಹಿತ್ಯ ಹಾಗೂ ಸಂಗೀತದ ಬೆಳವಣಿಗೆಗೆ ಮಹತ್ತರ ಕೊಡುಗೆ ನೀಡಲಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ರೋನಿ ಕ್ರಾಸ್ತಾ, ಸ್ಟಾನ್ಲಿ ಬಂಟ್ವಾಳ್ ಹಾಗೂ ಸಂತೋಷ್ ಸಿಕ್ವೇರಾ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು. ತೀರ್ಪುಗಾರರಾಗಿ ಸೇವೆ ಸಲ್ಲಿಸಿದ ಡಾ। ವೆಲಿಟಾ ಲೋಬೋ, ಅಲ್ವಿನ್ ನೊರೊನ್ಹಾ, ಜೋಶಲ್ ಡಿ'ಸೋಜಾ ಹಾಗೂ ಧ್ವನಿ ತಂತ್ರಜ್ಞರಾಗಿ ಸೇವೆ ಸಲ್ಲಿಸಿದ ಸಂಜಯ್ ರೋಡ್ರಿಗಸ್ ಹಾಗೂ ಡಿಜಿವರ್ಲ್ಡ್ ತಂಡದ ಪ್ರತಿನಿಧಿಗಳನ್ನು ಗೌರವಿಸಲಾಯಿತು. ಪ್ರಾಥಮಿಕ ವಿಡಿಯೋ ಆಯ್ಕೆ ಸುತ್ತಿನಲ್ಲಿ ಒಟ್ಟು 113 ಸ್ಪರ್ಧಿಗಳು ಭಾಗವಹಿಸಿದ್ದು, ಅವರಲ್ಲಿ 81 ಮಂದಿ ಆಡಿಷನ್ ಸುತ್ತಿಗೆ ಆಯ್ಕೆಯಾದರು. ಸಂಘಟನಾ ಸಮಿತಿಯ ರೋಶನ್ ಕಾಮತ್ (ವಾಮಂಜೂರು), ಜಸ್ಟನ್ (ಜೆಪ್ಪು), ಕೀತ್ ಫುರ್ಟಾಡೊ (ಉರ್ವಾ), ಮೆಲ್‌ರಾಯ್ ಫೆರ್ನಾಂಡಿಸ್ (ವೆಲೆನ್ಸಿಯಾ), ಶಾಂತಿ ಕಾರ್ಡೋಜಾ (ವಾಮಂಜೂರು), ರೇಶ್ಮಾ ನೊರೊನ್ಹಾ (ಕೆಲರಾಯಿ), ಕಿರಣ್ (ಬನ್ನೂರು), ಆಸ್ಟಿನ್ (ಮೊಗರ್ನಾಡು), ರೋಶನ್ (ಎಳಿಯಾರ್ ಪದವು), ಕು। ಲವೀನಾ (ಬೆಳ್ಮಣ್), ಕು।ಇಶೆಲ್ ಡಿ'ಸೋಜಾ (ನಿರ್‌ಮಾರ್ಗ) ಹಾಗೂ ರೋಶನ್ ಕ್ರಾಸ್ತಾ (ಕುಲಶೇಖರ) ಸೇರಿದಂತೆ ಹಲವಾರು ಸ್ವಯಂಸೇವಕರು ಕಾರ್ಯನಿರ್ವಹಿಸಿದರು.

ಅನಿಲ್ ಪಾತ್ರಾವೊ, ಮೀರಾ ಕ್ರಾಸ್ತಾ, ಶಿಲ್ಪಾ ಕುಟಿನ್ಹಾ, ಅಲ್ವಿನ್ ನೊರೊನ್ಹಾ, ಡಾ। ವೆಲಿಟಾ ಲೋಬೋ ಹಾಗೂ ಜೋಶಲ್ ಡಿ'ಸೋಜಾ ಆಡಿಷನ್ ಸುತ್ತಿನ ತೀರ್ಪುಗಾರರಾಗಿದ್ದು, ರೇಡಿಯೋ ಸಾರಂಗ್ 107.8 ಎಫ್‌ಎಂನ ಆರ್‌ಜೆ ರೋಶನ್ ಕ್ರಾಸ್ತಾ ಹಾಗೂ ಕು। ಇಶೆಲ್ ಡಿ'ಸೋಜಾ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿ ಸಮಾರಂಭದ ಮೆರುಗನ್ನು ಹೆಚ್ಚಿಸಿದರು. ಲಿಯೋ ಡಿ'ಸೋಜಾ ರಾಣಿಪುರ ವಂದಿಸಿದರು.

# 2 ವರ್ಷದಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ 52 ಸಾವಿರ ಕೋಟಿ ವೆಚ್ಚ

## ಸುರಂಗಮಾರ್ಗ ನಿರ್ಮಾಣಕ್ಕೆ ಕೇಂದ್ರ ಸಚಿವ ವಿ.ಸೋಮಣ್ಣ ಶಂಕುಸ್ಥಾಪನೆ, 6 ತಿಂಗಳಲ್ಲಿ ಕಾಮಗಾರಿ ಪೂರ್ಣ



**ಬೆಂಗಳೂರು, ಜು.6:** ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ 12 ರೈಲ್ವೆ ಯೋಜನೆಗಳಿಗಾಗಿ ಸುಮಾರು 52 ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದೆ ಎಂದು ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ನೈಋತ್ಯ ರೈಲ್ವೆ ವತಿಯಿಂದ ನಿರ್ಮಿಸುತ್ತಿರುವ ಬೆಂಗಳೂರು ಮಂತ್ರಿ ಮಾಲ್ ಹಿಂಭಾಗದ ಸುರಂಗ ಮಾರ್ಗ ನಿರ್ಮಾಣಕ್ಕೆ ರೈಲ್ವೆ ಮತ್ತು ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಶಂಕುಸ್ಥಾಪನೆ ನೆರವೇರಿಸಿದರು.

ಬಳಿಕ ಮಾತನಾಡಿದ ವಿ.ಸೋಮಣ್ಣ ಮಾತನಾಡಿ, ಈ ಭಾಗದ ಜನರ ಬಹುದಿನದ ಬೇಡಿಕೆ ಇದಾಗಿದ್ದು, ಮುಂದಿನ ಆರು ತಿಂಗಳಲ್ಲಿ ಸುರಂಗ ರಸ್ತೆ ಪಾದಾಚಾರಿ ಮಾರ್ಗದ ಕಾಮಗಾರಿ ಮುಗಿಯಲಿದೆ . ನಗರದ ನೂರು ಕಿಲೋಮೀಟರ್ ವ್ಯಾಪ್ತಿಯ ಸ್ಟೇಷನ್ ಹಾಗೂ ರೈಲ್ವೆ ಕ್ರಾಸಿಂಗ್ ಕಾಮಗಾರಿ ನಡೆಸಲಾಗುತ್ತಿದೆ ಎಂದರು.

ಕೋಲಾರಕ್ಕೆ ವೇಮಗಲ್ ಮತ್ತು ನರಸಾಪುರ ಕೈಗಾರಿಕಾ ಪ್ರದೇಶದ ಮೂಲಕ ನೇರರೈಲು ಕಲ್ಪಿಸಲಾಗುವುದು. ಯಲಹಂಕದಲ್ಲಿ ಸುಮಾರು ಐದು ಸಾವಿರದ 725 ಕೋಟಿ ರೂಪಾಯಿ ವೆಚ್ಚದಲ್ಲಿ ವಿಶ್ವಮಟ್ಟದ ರೈಲ್ವೆ ಕೋಚಿಂಗ್ ಸೆಂಟರ್ ನಿರ್ಮಿಸಲಾಗುತ್ತಿದ್ದು, ಟೆಂಡರ್ ಪ್ರಕ್ರಿಯೆ ಮುಗಿದಿದೆ. ಮುಂದಿನ ದಿನಗಳಲ್ಲಿ ಬೆಂಗಳೂರಿನಿಂದ ಗ್ರಾಮಾಂತರ ಪ್ರಾದೇಶಗಳಿಗೆ ಕಡಿಮೆ ಪ್ರಯಾಣ ವೆಚ್ಚದ ಮೆಮು ರೈಲುಗಳನ್ನು ಓಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, ರಾಜ್ಯದಲ್ಲಿ ನಡೆಯುವ ಎಲ್ಲಾ ರೀತಿಯ ರೈಲ್ವೆ ಕಾಮಗಾರಿಗಳಿಗೆ ಅಗತ್ಯವಿರುವ ಎಲ್ಲಾ ರೀತಿಯ ಸಹಾಯ, ನೆರವು, ಭೂಸ್ವಾಧೀನಕ್ಕೆ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು. ಸಂಸದ ಪಿ.ಸಿ.ಮೋಹನ್ ಮಾತನಾಡಿ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರಾಜ್ಯದ ಕಾಮಗಾರಿಗಳಿಗಾಗಿ ಸಾಕಷ್ಟು ನೆರವು ನೀಡುತ್ತಿದೆ ಎಂದು ಹೇಳಿದರು.

ಶಾಸಕ ದಿನೇಶ್ ಗುಂಡೂರಾವ್, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಸಿರೋಯಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ರಾಜ್ಯದಲ್ಲಿನ ಗ್ರಾಮೀಣಾಭಿವೃದ್ಧಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ನಿರಂತರ ಸಹಕಾರ



■ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಉಪ ಮಹಾನಿರ್ದೇಶಕ ಅಲ್ತಾಫ್ ಹುಸೇನ್ ಹಾಜಿ ಸ್ಪಷ್ಟನೆ

ಬೆಂಗಳೂರು, ಜು.6: ಕರ್ನಾಟಕದಲ್ಲಿ ಕೇಂದ್ರ ಸರ್ಕಾರದ ಪ್ರಮುಖ ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನವು ಸುಗಮವಾಗಿ ಸಾಗುತ್ತಿದ್ದು, ಯೋಜನೆಗಳ ಪರಿಣಾಮಕಾರಿ ಜಾರಿಗಾಗಿ ರಾಜ್ಯ ಸರ್ಕಾರದೊಂದಿಗೆ ನಿರಂತರ ಸಹಕಾರ ಮುಂದು ವರಿಸಲಾಗುವುದು ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಉನ್ನತ ಮಟ್ಟದ ಅಧಿಕಾರಿಗಳ ತಂಡ ತಿಳಿಸಿದೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಉಪ ಮಹಾನಿರ್ದೇಶಕರು ಹಾಗೂ ಸಂಖ್ಯಾಶಾಸ್ತ್ರ ಸಲಹೆಗಾರ ಅಲ್ತಾಫ್ ಹುಸೇನ್ ಹಾಜಿ ನೇತೃತ್ವದ ತಂಡ ರಾಜ್ಯಕ್ಕೆ ಭೇಟಿ ನೀಡಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಯುಕ್ತ ದಿವ್ಯ ಪ್ರಭು ಅವರೊಂದಿಗೆ ಸಭೆ ನಡೆಸಿ ವಿಕಸಿತ ಭಾರತ – ಗ್ಯಾರಂಟಿ ಫಾರ್ ರೋಜ್ಗಾರ್ ಯೋಜನೆಯ ಅನುಷ್ಠಾನದ ಪ್ರಗತಿಯನ್ನು ಪರಿಶೀಲಿಸಿತು. ತಂಡದಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಅಧೀನ ಕಾರ್ಯದರ್ಶಿಗಳಾದ ಅನಿಲ್ ಕುಮಾರ್ ಕೆ.ಸಿ ಹಾಗೂ ಗ್ರಾಮೀಣ ವಸತಿ ವಿಭಾಗದ ಸಹಾಯಕಕ ನಿರ್ದೇಶಕ ಬಲ್ದೇವ್ ಕುಮಾರ್ ವರ್ಮಾ ಉಪಸ್ಥಿತರಿದ್ದರು.

# ಇಸ್ರೋ ಕೇಂದ್ರ ಕಚೇರಿಗೆ ಬಾಂಬ್ ಬೆದರಿಕೆ

**ಬೆಂಗಳೂರು, ಜು.6:** ಇಸ್ರೋ ಕೇಂದ್ರ ಕಚೇರಿಗೆ ಬಾಂಬ್ ಬೆದರಿಕೆ ಇ–ಮೇಲ್ ಬಂದಿದ್ದು, ಕೆಲಕಾಲ ಆತಂಕದ ವಾತಾವರಣ ಉಂಟಾಗಿತ್ತು.ಸಂಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯ ಬಿಇಎಲ್ ರಸ್ತೆಯಲ್ಲಿರುವ ಇಸ್ರೋ ಕೇಂದ್ರ ಕಚೇರಿಗೆ ಬಾಂಬ್ ಇಡಲಾಗಿದೆ ಎಂಬ ಇ–ಮೇಲ್ ಅನ್ನು ರಾತ್ರಿ ದುಷ್ಕರ್ಮಿಗಳು ಕಳುಹಿಸಿದ್ದಾರೆ.

ಸೋಮವಾರ ಬೆಳಗ್ಗೆ ಕಚೇರಿಗೆ ಬಂದ ಸಿಬ್ಬಂದಿ ಇ–ಮೇಲ್ ಪರಿಶೀಲಿಸುತ್ತಿದ್ದಾಗ ತಮಿಳು ಭಾಷೆಯಲ್ಲಿ ಬಾಂಬ್ ಬೆದರಿಕೆಯ ಇಮೇಲ್ ಸಂದೇಶ ಗಮನಿಸಿ ಆತಂಕಗೊಂಡು ತಕ್ಷಣ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ.

ಸುದ್ದಿ ತಿಳಿದು ಸಂಜಯನಗರ ಠಾಣೆ ಪೊಲೀಸರು ಬಾಂಬ್ ಪತ್ತೆದಳ, ಬಾಂಬ್ ನಿಷ್ಕ್ರಿಯದಳ ಹಾಗೂ ಶ್ವಾನ ದಳದೊಂದಿಗೆ ಸ್ಥಳಕ್ಕೆ ದಾವಿಸಿ ಪರಿಶೀಲನೆ ನಡೆಸಿದಾಗ ಯಾವುದೇ ಬಾಂಬ್ ನಂತಹ ವಸ್ತುಗಳು ಪತ್ತೆಯಾಗಿಲ್ಲ. ಇಸ್ರೋ ಸಿಬ್ಬಂದಿ ನಿಟ್ಟುಸಿರುಬಿಟ್ಟಿದ್ದಾರೆ.

ಕಳೆದ ಒಂದು ವಾರದ ಹಿಂದೆಯೂ ಕೂಡ ಈ ಕೇಂದ್ರಕ್ಕೆ ಇದೇ ರೀತಿ ಬಾಂಬ್ ಬೆದರಿಕೆಯ ಇ–ಮೇಲ್ ಬಂದಿತ್ತು. ಆ ಸಂದರ್ಭದಲ್ಲಿ ಸಹ ಪೊಲೀಸರು, ಬಾಂಬ್ ಪತ್ತೆದಳ, ಬಾಂಬ್ ನಿಷ್ಕ್ರಿಯದಳ ಪರಿಶೀಲಿಸಿದಾಗ ಯಾವುದೇ ಸ್ಫೋಟಕದಂತಹ ವಸ್ತುಗಳು ಕಂಡು ಬಂದಿರಲಿಲ್ಲ.

ಇದನ್ನು ಗಂಭೀರವಾಗಿ ಪರಿಗಣಿಸಿ ಇ–ಮೇಲೆ ಸಂದೇಶ ಎಲ್ಲಿಂದ ಬಂದಿದೆ ಎಂಬುವುದನ್ನು ಪೊಲೀಸರು ತನಿಖೆ ಕೈಗೊಂಡಾಗ ದೆಹಲಿಯ ಗಾಜೀಯಾಬಾದ್‌ನಿಂದ ಬಂದಿರುವ ಬಗ್ಗೆ ಮಾಹಿತಿ ಕಲೆಹಾಕಿ ಒಂದು ತಂಡ ಅಲ್ಲಿಗೆ ಹೋಗಿ ಒಬ್ಬನನ್ನು ಪತ್ತೆಹಚ್ಚಿ ಬಂಧಿಸಿದ್ದಾರೆ. ಒಂದು ವಾರದೊಳಗೆ ಇದು ಎಡನೇ ಬಾರಿ ಬೆದರಿಕೆಯ ಸಂದೇಶ ಕಳುಹಿಸಿರುವುದು ಆತಂಕಕಾರಿಯಾಗಿದೆ.

ಪೀಣ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇಸ್ರೋ ಕೇಂದ್ರದ ಶಾಖಾ ಕಚೇರಿ ಇದ್ದು, ಅಲ್ಲಿಯೂ ಸಹ ತಪಾಸಣೆ ಮಾಡಲಾಗಿದ್ದು ಏನೂ ಪತ್ತೆಯಾಗಿಲ್ಲ. ಇದು ಹುಸಿ ಸಂದೇಶ ಎಂಬುವುದು ಗೊತ್ತಾಗಿದೆ. ಈ ಸಂದೇಶವನ್ನು ಎಲ್ಲಿಂದ ಕಳುಹಿಸಲಾಗಿದೆ, ಯಾರು ಏತಕ್ಕಾಗಿ ಕಳುಹಿಸಿದ್ದಾರೆ ಎಂಬಿತ್ಯಾದಿ ಮಾಹಿತಿಗಳನ್ನು ಪೊಲೀಸರು ಕಲೆಹಾಕುತ್ತಿದ್ದಾರೆ.

# ಬಂಡವಾಳ ಸೆಳೆಯಲು ಸಮಾವೇಶ ಏರ್ಪಡಿಸಿ

■ ಹಾಂಕಾಂಗ್ ಮತ್ತು ಮಕಾವ್‌ನಲ್ಲಿರುವ ಭಾರತದ ಕಾನ್ಸುಲ್ ಜನರಲ್ ರಾಜೇಶ್ ನಾರಾಯಣ ನಾಯಕ್‌ಗೆ ಸಚಿವ ಎಂ.ಬಿ. ಪಾಟೀಲ್ ಮನವಿ




**ಬೆಂಗಳೂರು, ಜು.6:** ರಾಜ್ಯಕ್ಕೆ ಬಂಡವಾಳ ಸೆಳೆಯುವ ನಿಟ್ಟಿನಲ್ಲಿ ಭಾರತೀಯ ಕಾನ್ಸುಲೇಟ್ ಜನರಲ್ ಆದಷ್ಟು ತ್ವರಿತವಾಗಿ ಕರ್ನಾಟಕ ಕೇಂದ್ರಿತ ದುಂಡು ಮೇಜಿನ ಸಮಾವೇಶ ಏರ್ಪಡಿಸಬೇಕು ಮತ್ತು ರಾಜ್ಯ ಸರಕಾರದ ಇನ್ವೆಸ್ಟ್ ಕರ್ನಾಟಕ ಉಪಕ್ರಮದೊಂದಿಗೆ ಒಂದು ಕ್ರಿಯಾಶೀಲ ವ್ಯವಸ್ಥೆಯನ್ನು ರೂಪಿಸಬೇಕು ಎಂದು ಹಾಂಕಾಂಗ್ ಮತ್ತು ಮಕಾವ್‌ನಲ್ಲಿರುವ ಭಾರತದ ಕಾನ್ಸುಲ್ ಜನರಲ್ ರಾಜೇಶ್ ನಾರಾಯಣ ನಾಯಕ್ ಅವರಿಗೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮನವಿ ಮಾಡಿದರು.

ಹಾಂಕಾಂಗ್ ಮೂಲದ ಕಂಪನಿಗಳು ಕರ್ನಾಟಕದ ವಿವಿಧ ಕೈಗಾರಿಕಾ ವಲಯಗಳಲ್ಲಿ ಹೆಚ್ಚಿನ ಬಂಡವಾಳ ಹೂಡುವ ಸಂಬಂಧವಾಗಿ ಸೋಮವಾರ ತಮ್ಮನ್ನು ಭೇಟಿಮಾಡಿದ ರಾಜೇಶ್ ನಾರಾಯಣ ನಾಯಕ್ ಅವರೊಂದಿಗೆ ಈ ಕುರಿತು ವಿಚಾರ ವಿನಿಮಯ ನಡೆಸಿದರು. ಹಾಂಕಾಂಗ್‌ನಲ್ಲಿ ಹೆಚ್ಚಿನ ಉದ್ಯಮಗಳು ಕುಟುಂಬ ಕೇಂದ್ರಿತವಾಗಿವೆ. ಇವುಗಳ ಜತೆಗೆ ಹಣಕಾಸು ಸಂಸ್ಥೆಗಳು, ವೆಂಚರ್ ಕ್ಯಾಪಿಟಲ್ ನಿಧಿಗಳು ಮತ್ತು ಹೂಡಿಕೆದಾರರತ್ತ ನೋಡಬೇಕಿದೆ. ನಮ್ಮಲ್ಲಿ ಇ.ಎಸ್.ಡಿ.ಎಂ, ಸೆಮಿಕಂಡಕ್ಟರ್ಸ್, ನವೋದ್ಯಮಗಳು, ಫಿನ್–ಟೆಕ್, ಶುದ್ಧ ಇಂಧನ, ಜೈವಿಕ ತಂತ್ರಜ್ಞಾನ ಮತ್ತು ಆಧುನಿಕ ತಯಾರಿಕೆ ವಲಯಗಳಲ್ಲಿ ಹೆಚ್ಚಿನ ಹೂಡಿಕೆಗೆ ಹೇರಳ ಅವಕಾಶಗಳಿವೆ. ಇದನ್ನು ಹಾಂಕಾಂಗಿನ ಕಂಪನಿಗಳ ಗಮನಕ್ಕೆ ತರಬೇಕು ಎಂದು ಹೇಳಿದರು.

ಹಾಂಕಾಂಗ್ ಸರಕಾರ ಕೂಡ ಹೂಡಿಕೆಯನ್ನು ಉತ್ತೇಜಿಸಲು ಇನ್ವೆಸ್ಟ್–ಎಚ್.ಕೆ ಎನ್ನುವ ವ್ಯವಸ್ಥೆಯನ್ನು ರೂಪಿಸಿ, ಕಾರ್ಯತಂತ್ರಗಳನ್ನು ರೂಪಿಸುತ್ತಿದೆ. ನಮ್ಮಲ್ಲಿರುವ ಚಿಪ್ ವಿನ್ಯಾಸ, ಐಟಿ, ಎಲೆಕ್ಟ್ರಾನಿಕ್ಸ್ ಮತ್ತು ನವೋದ್ಯಮ ಕಾರ್ಯಪರಿಸರಗಳನ್ನು ಅಲ್ಲಿನ ಕಂಪನಿಗಳೊಂದಿಗೆ ಬೆಸೆಯಬೇಕಾಗಿದೆ. ಈಗಾಗಲೇ ಅಲ್ಲಿನ ಲೆನೋವೋ ಕಂಪನಿಯ ನೆರವು ಕೇಂದ್ರ ಮತ್ತು ಎಚ್.ಎಸ್.ಬಿ.ಸಿ. ಹಣಕಾಸು ಸಂಸ್ಥೆಯ ಜಾಗತಿಕ ಸೇವಾ ಕೇಂದ್ರ ಎರಡೂ ಬೆಂಗಳೂರಿನಲ್ಲಿ ಬೇರೂರಿದ್ದು, ಅತ್ಯುತ್ತಮವಾಗಿ ಕೆಲಸ ಮಾಡುತ್ತಿವೆ ಎಂದು ಅವರು ವಿವರಿಸಿದ್ದಾರೆ.

ಇದಕ್ಕೆ ಸ್ಪಂದಿಸಿದ ನಾಯಕ್ ಅವರು, ಹಾಂಕಾಂಗ್ ಜಾಗತಿಕ ವಾಣಿಜ್ಯ ವಹಿವಾಟಿನ ಪ್ರಮುಖ ಕೇಂದ್ರವಾಗಿದ್ದು, ಮರುರಫ್ತಿಗೆ ಹೆಸರುವಾಸಿಯಾಗಿದೆ. ಇದನ್ನು ಕರ್ನಾಟಕ ರಾಜ್ಯವು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಒಳ್ಳೆಯ ಅವಕಾಶಗಳಿವೆ. ಅದರಲ್ಲೂ ಎಲೆಕ್ಟ್ರಾನಿಕ್ಸ್, ದೂರಸಂಪರ್ಕ ಸಾಧನಗಳು ಮತ್ತು ಹೈ–ವ್ಯಾಲ್ಯೂ ತಯಾರಿಕೆಯ ಉತ್ಪನ್ನಗಳ ವಿಭಾಗದಲ್ಲಿ ರಾಜ್ಯಕ್ಕೆ ಸದವಕಾಶಗಳ ಬಾಗಿಲು ತೆರೆದಿದೆ ಎಂದಿದ್ದಾರೆ. ಹಾಂಕಾಂಗ್ ಭಾರತದೊಂದಿಗೆ 9ನೇ ಅತಿದೊಡ್ಡ ವಿದೇಶಿ ಹೂಡಿಕೆದಾರ ದೇಶವಾಗಿದ್ದು, 2024ರಲ್ಲಿ 25.81 ಬಿಲಿಯನ್ ಡಾಲರ್ ವಹಿವಾಟು ನಡೆಸಿದೆ. ಭಾರತೀಯ ಕಂಪನಿಗಳು ಚೀನಾದೊಳಕ್ಕೆ ಪ್ರವೇಶಿಸಿ ಹೂಡಿಕೆ ಮಾಡಬೇಕೆಂದರೆ ಅದಕ್ಕೆ ಹಾಂಕಾಂಗ್ ಹೆಬ್ಬಾಗಿಲಾಗಿದೆ. ಈ ವಾಸ್ತವವನ್ನು ಗಮನದಲ್ಲಿ ಇಟ್ಟುಕೊಂಡು ನಾವು ಕೆಲಸ ಮಾಡುತ್ತಿದ್ದು, ತಮ್ಮ ಸಹಕಾರ ಕೂಡ ಬೇಕು ಎಂದು ಸಚಿವರು ತಿಳಿಸಿದ್ದಾರೆ.

# ಬೀದಿಬದಿ ವ್ಯಾಪಾರಿಗಳ ವಿರುದ್ಧ ಕ್ರಮ ಖಂಡಿಸಿ ನಾಳೆ ಬೀದಿ ವ್ಯಾಪಾರ ಬಂದ್

**ಬೆಂಗಳೂರು, ಜು.6:** ರಾಜಧಾನಿ ಬೆಂಗಳೂರಿನಲ್ಲಿ ಪಾದಚಾರಿಗಳ ಅನುಕೂಲಕ್ಕಾಗಿ ಬಿಬಿಎಂಪಿ ಮತ್ತು ಸರ್ಕಾರ ಹಮ್ಮಿಕೊಂಡಿರುವ ಫುಟ್ಪಾತ್ ತೆರವು ಕಾರ್ಯಾಚರಣೆಯು ಇದೀಗ ತೀವ್ರ ಸ್ವರೂಪದ ಹೋರಾಟಕ್ಕೆ ಕಾರಣವಾಗಿದೆ. ತೆರವು ನೆಪದಲ್ಲಿ ಬೀದಿಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುತ್ತಿರುವುದನ್ನು ವಿರೋಧಿಸಿ, ಜುಲೈ 8 ರಂದು ಬೆಂಗಳೂರಿನಾದ್ಯಂತ ಬೀದಿ ಬದಿ ವ್ಯಾಪಾರವನ್ನು ಸಂಪೂರ್ಣವಾಗಿ ಬಂದ್ ಮಾಡಿ ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ.

ಬೆಂಗಳೂರಿನ ಬೀದಿ ಬದಿ ವ್ಯಾಪಾರಿಗಳ ಜಂಟಿ ಹೋರಾಟ ಸಮಿತಿಯ ನೇತೃತ್ವದಲ್ಲಿ ಈ ಹೋರಾಟ ರೂಪಿತವಾಗಿದ್ದು, ನಗರದ ಪ್ರಮುಖ 6 ಸಂಘಟನೆಗಳು ಜಂಟಿಯಾಗಿ ಈ ಬಂದ್ ಕರೆಗೆ ಬೆಂಬಲ ಘೋಷಿಸಿವೆ.ಪಾದಚಾರಿಗಳ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸುವುದನ್ನು ನಾವು ವಿರೋಧಿಸುವುದಿಲ್ಲ. ಆದರೆ, ಅದೇ ರೀತಿ ಬೀದಿ ಬದಿ ವ್ಯಾಪಾರಿಗಳ ಹಿತರಕ್ಷಣೆಗೂ ನ್ಯಾಯಾಲಯದ ಸ್ಪಷ್ಟ ಆದೇಶ ಹಾಗೂ ಕಾಯ್ದೆಗಳಿವೆ ಎಂದು ಹೋರಾಟ ಸಮಿತಿ ನೆನಪಿಸಿದೆ.

ನಿಯಮಾವಳಿ ಪ್ರಕಾರ ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ (ಐಡಿ ಕಾರ್ಡ್) ನೀಡಬೇಕಾಗಿರುವುದು ಸರ್ಕಾರದ ಕರ್ತವ್ಯ. ಆದರೆ, ಪ್ರಸ್ತುತ ನಗರದಲ್ಲಿ ಈಗಾಗಲೇ ಅಧಿಕೃತವಾಗಿ ಐಡಿ ಕಾರ್ಡ್ ಪಡೆದಿರುವ ವ್ಯಾಪಾರಿಗಳನ್ನೂ ಸಹ ಯಾವುದೇ ಪರ್ಯಾಯ ವ್ಯವಸ್ಥೆ ಕಲ್ಪಿಸದೆ ಏಕಾಏಕಿ ಎತ್ತಂಗಡಿ ಮಾಡಲಾಗುತ್ತಿದೆ ಎಂದು ವ್ಯಾಪಾರಿಗಳು ಆಕ್ರೋಶ ಹೊರಹಾಕಿದ್ದಾರೆ.

ಸರ್ಕಾರದ ಈ ಏಕಪಕ್ಷೀಯ ತೀರ್ಮಾನದಿಂದ ಸಾವಿರಾರು ಬಡ ಕುಟುಂಬಗಳ ಜೀವನೋಪಾಯಕ್ಕೆ ಸಂಕಷ್ಟ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಜುಲೈ 8ರಂದು ನಗರದಾದ್ಯಂತ ವ್ಯಾಪಾರ–ವಹಿವಾಟುಗಳನ್ನು ಸ್ಥಗಿತಗೊಳಿಸಿ, ಸರ್ಕಾರದ ನೀತಿಯ ವಿರುದ್ಧ ರಸ್ತೆಗಿಳಿದು ಜಂಟಿ ಹೋರಾಟ ನಡೆಸಲು ಸಮಿತಿ ತೀರ್ಮಾನಿಸಿದೆ. ತಮಗೆ ನ್ಯಾಯ ಸಿಗುವವರೆಗೆ ಮತ್ತು ಸೂಕ್ತ ಪರ್ಯಾಯ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವವರೆಗೆ ಹೋರಾಟ ಮುಂದುವರಿಯಲಿದೆ ಎಂದು ಸಂಘಟನೆಗಳ ಪ್ರಮುಖರು ಎಚ್ಚರಿಸಿದ್ದಾರೆ.

# ಪ್ರವಾಸಿ ತಾಣಗಳ ಅಭಿವೃದ್ಧಿ ಕುರಿತು ಇಂದು ಸಮಾಲೋಚನಾ ಕಾರ್ಯಾಗಾರ

**ಬೆಂಗಳೂರು, ಜು.6:** ಕರ್ನಾಟಕವನ್ನು ಜಾಗತಿಕ ಪ್ರವಾಸೋದ್ಯಮ ತಾಣವಾಗಿ ರೂಪಿಸುವ ಮಹತ್ವಾಕಾಂಕ್ಷೆಯ ಯೋಜನೆಯ ಭಾಗವಾಗಿ, ಜಾಗತಿಕ ಗುಣಮಟ್ಟದ ಪ್ರವಾಸಿ ತಾಣಗಳ ಅಭಿವೃದ್ಧಿ ಕುರಿತ ರಾಜ್ಯಮಟ್ಟದ ಸಮಾಲೋಚನಾ ಕಾರ್ಯಾಗಾರ ಮಂಗಳವಾರ ನಡೆಯಲಿದೆ.

ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಮಹತ್ವದ ಸಭೆಯಲ್ಲಿ, ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳಾದ ಸುವಾಶಿಷ್ ದಾಸ್, ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿಗಳಾದ ತ್ರಿಲೋಕ್ ಚಂದ್ರ, ಆಯುಕ್ತರಾದ ಡಾ ರಾಮ್ ಪ್ರಸಾತ್ ಮನೋಹರ್ ಸೇರಿ ಹಿರಿಯ ಅಧಿಕಾರಿಗಳು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಜಂಗಲ್ ಲಾಡ್ಜ್ಸ್ ಅಂಡ್ ರೆಸಾರ್ಟ್ಸ್, ಪ್ರವಾಸೋದ್ಯಮ ಕ್ಷೇತ್ರದ ಹೂಡಿಕೆದಾರರು, ಆತಿಥ್ಯ ಉದ್ಯಮದ ಪ್ರತಿನಿಧಿಗಳು, ಪ್ರವಾಸೋದ್ಯಮ ತಜ್ಞರು ಹಾಗೂ ವಿವಿಧ ವಲಯಗಳ ಪ್ರಮುಖ ಹಿತಾಸಕ್ತಿದಾರರು ಭಾಗವಹಿಸಲಿದ್ದಾರೆ.

ರಾಜ್ಯದ ಪ್ರವಾಸೋದ್ಯಮ ಕ್ಷೇತ್ರದ ಭವಿಷ್ಯದ ಬೆಳವಣಿಗೆಗೆ ಹೊಸ ದಿಕ್ಕು ನೀಡುವ ಉದ್ದೇಶದಿಂದ ಆಯೋಜಿಸಲಾಗಿರುವ ಈ ಕಾರ್ಯಾಗಾರದಲ್ಲಿ, ಜಾಗತಿಕ ಗುಣಮಟ್ಟದ ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸಲು ಆಯ್ಕೆ ಮಾಡಬೇಕಾದ ಪ್ರಮುಖ ತಾಣಗಳ ಕುರಿತು 360 ಡಿಗ್ರಿ ಸಮಗ್ರ ಚರ್ಚೆ ನಡೆಯಲಿದೆ. ಪ್ರವಾಸಿ ತಾಣಗಳ ಆಯ್ಕೆಗೆ ಅಗತ್ಯ ಮಾನದಂಡಗಳು, ಮೂಲಸೌಕರ್ಯ ಅಭಿವೃದ್ಧಿ, ಪ್ರವಾಸಿಗರ ಅನುಭವ ಸುಧಾರಣೆ, ಖಾಸಗಿ ಹೂಡಿಕೆ ಅವಕಾಶಗಳು, ಪರಿಸರ ಸಂರಕ್ಷಣೆ, ಸ್ಥಳೀಯ ಸಮುದಾಯದ ಭಾಗವಹಿಸುವಿಕೆ, ಸಂಪರ್ಕ ವ್ಯವಸ್ಥೆ, ಬ್ರ್ಯಾಂಡಿಂಗ್, ಅಂತರರಾಷ್ಟ್ರೀಯ ಮಾರುಕಟ್ಟೆ ಹಾಗೂ ಸುಸ್ಥಿರ ಪ್ರವಾಸೋದ್ಯಮ ಮಾದರಿಗಳ ಕುರಿತು ವಿವಿಧ ತಜ್ಞರು ತಮ್ಮ ಅಭಿಪ್ರಾಯಗಳನ್ನು ಮಂಡಿಸಲಿದ್ದಾರೆ.

ಈ ಸಮಾಲೋಚನಾ ಸಭೆಯಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಹಾಗೂ ಶಿಫಾರಸುಗಳ ಆಧಾರದ ಮೇಲೆ, ರಾಜ್ಯದ ಮೊದಲ ಹಂತದಲ್ಲಿ ಜಾಗತಿಕ ಗುಣಮಟ್ಟದ ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸಲಾಗುವ ಆದ್ಯತೆಯ ಪ್ರವಾಸಿ ತಾಣಗಳನ್ನು ಅಂತಿಮಗೊಳಿಸುವ ನಿರ್ಧಾರ ಕೈಗೊಳ್ಳಲಾಗುವ ಸಾಧ್ಯತೆ ಇದೆ.ಈ ಯೋಜನೆಯ ಮೂಲಕ ಆಯ್ಕೆಯಾಗುವ ಪ್ರವಾಸಿ ತಾಣಗಳನ್ನು ವಿಶ್ವದರ್ಜೆಯ ಮೂಲಸೌಕರ್ಯ, ಪ್ರವಾಸಿಗರಿಗೆ ಉತ್ತಮ ಅನುಭವ, ಖಾಸಗಿ ಹೂಡಿಕೆ, ಸುಸ್ಥಿರ ಅಭಿವೃದ್ಧಿ ಹಾಗೂ ಅಂತರರಾಷ್ಟ್ರೀಯ ಮಟ್ಟದ ಬ್ರ್ಯಾಂಡಿಂಗ್ ಮೂಲಕ ಅಭಿವೃದ್ಧಿಪಡಿಸಿ, ಕರ್ನಾಟಕವನ್ನು ಭಾರತದ ಪ್ರಮುಖ ಜಾಗತಿಕ ಪ್ರವಾಸೋದ್ಯಮ ತಾಣವಾಗಿ ರೂಪಿಸುವ ಗುರಿಯನ್ನು ರಾಜ್ಯ ಸರ್ಕಾರ ಹೊಂದಿದೆ.

# ರಾಮ್‌ಮಾಧವ್ ಬಗ್ಗೆ ಅವಹೇಳನಕಾರಿ ಆರೋಪ ಬಿ.ಕೆ. ಹರಿಪ್ರಸಾದ್‌ಗೆ ನೋಟಿಸ್




**ಬೆಂಗಳೂರು, ಜು.6:** ಬಿಜೆಪಿ ರಾಷ್ಟ್ರೀಯ ನಾಯಕ ರಾಮ್‌ಮಾಧವ್ ಅವರ ಗೌರವಕ್ಕೆ ಧಕ್ಕೆ ತರುವಂತಹ ಅವಹೇಳನಕಾರಿ ಆರೋಪಗಳನ್ನು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಬಿ.ಕೆ ಹರಿಪ್ರಸಾದ್ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಅದಕ್ಕಾಗಿ, ಹರಿಪ್ರಸಾದ್ ಅವರಿಗೆ ರಾಮ್‌ಮಾಧವ್ ಅವರ ವಕೀಲರು ಲೀಗಲ್ ನೋಟಿಸ್ ನೀಡಿದ್ದಾರೆ. ಇತ್ತೀಚೆಗೆ, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದ ಬಿ.ಕೆ ಹರಿಪ್ರಸಾದ್, ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆಗಳನ್ನು ಎದುರಿಸಲು ಮತ್ತು ಅಲ್ಲಿ ಸರ್ಕಾರ ರಚಿಸಲು ಬಿಜೆಪಿ ನಾಯಕ ರಾಮ್ ಮಾಧವ್ ಅವರು ನಿಷೇಧಿತ ಸಂಘಟನೆಗಳ ಬೆಂಬಲ ಪಡೆದಿದ್ದಾರೆ. ಅವರೊಂದಿಗೆ ಗುಪ್ತ ಒಪ್ಪಂದ ಮಾಡಿಕೊಂಡಿದ್ದಾರೆ. ಕೊಲಂಬೊ ಮತ್ತು ಲಂಡನ್‌ನಲ್ಲಿ ಪಾಕಿಸ್ತಾನದ ಪ್ರತಿನಿಧಿಗಳೊಂದಿಗೆ ರಾಮ್ ಮಾಧವ್ ನಾಲ್ಕು ಸಭೆಗಳನ್ನು ನಡೆಸಿದ್ದಾರೆ. ಪಾಕಿಸ್ತಾನದ ಉನ್ನತ ಅಧಿಕಾರಿಗಳು, ಅಪಾಯಕಾರಿ ಐಎಸ್‌ಐನ ಮಾಜಿ ಮೇಜರ್ ಜನರಲ್ ಸೇರಿದಂತೆ ಹಲವರನ್ನು ಭೇಟಿಯಾಗಿದ್ದಾರೆ ಎಂದು ಆರೋಪಿಸಿದ್ದರು.

ಈ ಬೆನ್ನಲ್ಲೇ, ರಾಮ್ ಮಾಧವ್ ಅವರ ಪರವಾಗಿ ಸುಪ್ರೀಂ ಕೋರ್ಟ್‌ನ ವಕೀಲ ವಿಕ್ರಾಂತ್ ಪಚ್‌ನಂದ ಅವರು ಬಿ.ಕೆ. ಹರಿಪ್ರಸಾದ್ ಅವರಿಗೆ ಲೀಗಲ್ ನೋಟಿಸ್ ನೀಡಿದ್ದಾರೆ. ಮಾಧ್ಯಮ ಮತ್ತು ಅಂತರ್ಜಾಲ ತಾಣಗಳಲ್ಲಿ ರಾಮ್ ಮಾಧವ್ ಅವರನ್ನು ನೇರವಾಗಿ ಗುರಿಯಾಗಿಸಿ, ಅವರ ಹೆಸರಿಗೆ ಮಸಿ ಬಳಿಯುವ ಉದ್ದೇಶದಿಂದ ಹರಿಪ್ರಸಾದ್ ಅವರು ಸುಳ್ಳು ಆರೋಪಗಳನ್ನು ಹರಡುತ್ತಿದ್ದಾರೆ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ನೋಟಿಸ್‌ನಲ್ಲಿ ಹರಿಪ್ರಸಾದ್ ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 2023ರ ಸೆಕ್ಷನ್ 356ರ ಅಡಿಯಲ್ಲಿ ಮಾನನಷ್ಟ ಮೊಕದ್ದಮೆ ಹೂಡುವ ಎಚ್ಚರಿಕೆ ನೀಡಲಾಗಿದೆ. ರಾಮ್ ಮಾಧವ್ ವಿರುದ್ಧ ಮಾಡಲಾಗಿರುವ ಎಲ್ಲ ಸುಳ್ಳು ಆರೋಪಗಳು ಮತ್ತು ಹೇಳಿಕೆಗಳನ್ನು ಮಾಧ್ಯಮ ಮತ್ತು ಅಂತರ್ಜಾಲ ತಾಣಗಳಿಂದ ತಕ್ಷಣವೇ ತೆಗೆದುಹಾಕಬೇಕು ಎಂದು ವಕೀಲರು ಒತ್ತಾಯಿಸಿದ್ದಾರೆ. ಅಲ್ಲದೆ, ಹರಿಪ್ರಸಾದ್ ಅವರು ತಾವು ಮಾಡಿರುವ ಎಲ್ಲ ತಪ್ಪು ಆರೋಪಗಳನ್ನು ಸಾರ್ವಜನಿಕವಾಗಿ ಹಿಂಪಡೆಯಬೇಕು. ರಾಮ್ ಮಾಧವ್ ಅವರಲ್ಲಿ ಕ್ಷಮೆ ಯಾಚಿಸಬೇಕು ಎಂದು ನೋಟಿಸ್‌ನಲ್ಲಿ ಕೇಳಲಾಗಿದೆ.

# ಹಿರಿಯೂರು ಉಪಚುನಾವಣೆಗೆ ಎನ್‌ಡಿಎ ಅಭ್ಯರ್ಥಿ



■ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ನಿರ್ಧಾರ

**ಬೆಂಗಳೂರು, ಜು.6:** ಚಿತ್ರದುರ್ಗದ ಹಿರಿಯೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹಾಗೂ ಶಿಕ್ಷಕರ, ಪದವೀಧರರ ಚುನಾವಣೆಗಳನ್ನು ಜಂಟಿಯಾಗಿ ನಡೆಸುವ ಕುರಿತು ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ನಿರ್ಧಾರಕ್ಕೆ ಬರಲಾಗಿದೆ. ಮಲ್ಲೇಶ್ವರದ ಬಿಜೆಪಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಉಭಯ ಸದನಗಳ ವಿಪಕ್ಷ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಪಕ್ಷದ ಸಹ ಉಸ್ತುವಾರಿ ಸುಧಾಕರ ರೆಡ್ಡಿ, ಸಿ.ಟಿ.ರವಿ, ಸಂಸದ ಗೋವಿಂದ ಕಾರಜೋಳ, ಡಿ.ವಿ. ಸದಾನಂದಗೌಡ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಸಭೆಯ ಬಳಿಕ ವಿಜಯೇಂದ್ರ ಮಾತನಾಡಿ, ಸಚಿವ ಕೆ. ಸುಧಾಕರ್ ನಿಧನದಿಂದ ತೆರವಾಗಿರುವ ಹಿರಿಯೂರು ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿಯನ್ನು ನಿಲ್ಲಿಸಿ ಜೆಡಿಎಸ್ ಜತೆ ಜಂಟಿಯಾಗಿ ಹೋರಾಟ ನಡೆಸಲು ತೀರ್ಮಾನ ಮಾಡಲಾಗಿದೆ. ಹಿರಿಯೂರು ಕ್ಷೇತ್ರದಿಂದ ಜೆಡಿಎಸ್ ಅಥವಾ ಬಿಜೆಪಿಯಲ್ಲಿ ಯಾರು ಅಭ್ಯರ್ಥಿ ಆಗಬೇಕೆಂಬ ಬಗ್ಗೆ ಅಂತಿಮ ನಿರ್ಧಾರ ಮಾಡಲು ಗೋವಿಂದ ಕಾರಜೋಳ, ಅಶೋಕ್ ಮತ್ತು ಸಿ.ಟಿ.ರವಿ ನೇತೃತ್ವದಲ್ಲಿ ಕಮಿಟಿ ರಚನೆ ಮಾಡಲಾಗಿದೆ. ಈ ಕಮಿಟಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಜತೆ ಚರ್ಚಿಸಿ ಅಭ್ಯರ್ಥಿಯನ್ನು ಅಂತಿಮ ಮಾಡಲಿದೆ ಎಂದು ಮಾಹಿತಿ ನೀಡಿದರು.

ಅಕ್ಟೋಬರ್‌ನಲ್ಲಿ ಎದುರಾಗಲಿರುವ ಶಿಕ್ಷಕರು ಮತ್ತು ಪದವೀಧರರ ಕ್ಷೇತ್ರಗಳಿಗೆ ನಡೆಯುವ ಚುನಾವಣೆಗೆ ಈಗಾಗಲೇ ಬಿಜೆಪಿಯಿಂದ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ. ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರಲು ಕಮಿಟಿ ರಚಿಸಲಾಗಿದೆ. ಈ ಎರಡೂ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿ ಜಂಟಿಯಾಗಿ ಹೋರಾಟ ನಡೆಸಿ ಗೆಲ್ಲಲ್ಲೇಬೇಕೆಂದು ನಿರ್ಧಾರ ಮಾಡಿದ್ದು, ಕಾರ್ಯತಂತ್ರ ರೂಪಿಸಲಾಗಿದೆ. ಚುನಾವಣೆ ದೃಷ್ಟಿಯಿಂದ ನೀಡಿರುವ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಲು ಕಮಿಟಿಗಳಿಗೆ ಸೂಚಿಸಲಾಗುತ್ತದೆ ಎಂದು ವಿಜಯೇಂದ್ರ ತಿಳಿಸಿದರು.

# ಬಿಜೆಪಿ ಜನಸ್ಪಂದನ ಸಭೆಗೆ ಕಾಂಗ್ರೆಸ್ ಕಾರ್ಯಕರ್ತರಿಂದ ಮುತ್ತಿಗೆ ಯತ್ನ

**ಬೆಂಗಳೂರು, ಜು.6:** ರಾಜಾಜಿನಗರ ಕ್ಷೇತ್ರದ ಶಾಸಕ ಎಸ್. ಸುರೇಶ್ ಕುಮಾರ್ ಅವರ ಕಚೇರಿಯಲ್ಲಿ ಪ್ರತಿವಾರದಂತೆ ಈ ಸೋಮವಾರ ಹಮ್ಮಿಕೊಂಡಿದ್ದ 'ಜನರೊಂದಿಗೆ ಜನಸೇವಕ' ಜನಸ್ಪಂದನ ಕಾರ್ಯಕ್ರಮಕ್ಕೆ ಮುತ್ತಿಗೆ ಹಾಕಲು ಕಾಂಗ್ರೆಸ್ ಕಾರ್ಯಕರ್ತರು ಮುಂದಾದ ಬೆನ್ನಲ್ಲೇ, ಸ್ಥಳದಲ್ಲಿ ತೀವ್ರ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು. ರಾಜಾಜಿನಗರದಲ್ಲಿ ನಡೆದಿದೆ ಎನ್ನಲಾದ 300 ಕೋಟಿ ರೂಪಾಯಿ ಟೆಂಡರ್ ಅಕ್ರಮ ಆರೋಪ ಖಂಡಿಸಿ ಕಾಂಗ್ರೆಸ್ ಮತ್ತು ಎನ್.ಎಸ್.ಯು.ಐ. ಕಾರ್ಯಕರ್ತರು ಈ ಮುತ್ತಿಗೆಗೆ ಮುಂದಾಗಿದ್ದರು.ಕಾಂಗ್ರೆಸ್ ಕಾರ್ಯಕರ್ತರು ಮುತ್ತಿಗೆ ಹಾಕಲು ಬರುತ್ತಿರುವ ವಿಚಾರ ತಿಳಿಯುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ಸಹ ಸ್ಥಳದಲ್ಲಿ ಜಮಾಯಿಸಿ ಕಾಂಗ್ರೆಸ್ ವಿರುದ್ಧ ಪ್ರತಿಭಟನೆಗೆ ನಿಂತರು. ಮಾತಿಗೆ ಮಾತು ಬೆಳೆದು ಉಭಯ ಪಕ್ಷಗಳ ಕಾರ್ಯಕರ್ತರು ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿದರು. ಸದ್ಯ ಸ್ಥಳದಲ್ಲಿ ಬಿಗುವಿನ ವಾತಾವರಣ ಮುಂದುವರಿದಿದ್ದು, ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದೆ.

# ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಕೌಶಲ್ಯ ಬೆಳೆಸಿಕೊಳ್ಳುವುದು ಯಶಸ್ಸಿಗೆ ಹಾದಿ: ಎಂ.ಎನ್. ಅನುಚೇತ್

## ಆರ್.ವಿ. ಸ್ಟಾರ್ಸ್ ಪ್ರಶಸ್ತಿ ಪ್ರದಾನ




**ಬೆಂಗಳೂರು, ಜು.6:** ಯಶಸ್ಸಿಗೆ ಯಾವುದೇ ಅಡ್ಡದಾರಿಗಳಿಲ್ಲ. ಸಮರ್ಪಣಾ ಮನೋಭಾವ, ಶಿಸ್ತು, ಪರಿಶ್ರಮ ಮತ್ತು ನಿರಂತರ ಪ್ರಯತ್ನವೇ ಯಶಸ್ಸಿನ ನಿಜವಾದ ಅಡಿಪಾಯ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರಾದ ಎಂ.ಎನ್. ಅನುಚೇತ್ ತಿಳಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ (ಆರ್.ಎಸ್.ಎಸ್.ಟಿ)ನ ಮಹತ್ವಾಕಾಂಕ್ಷಿ ಉಪಕ್ರಮವಾದ ಬೆಂಗಳೂರು ಹಾಗೂ ಮೈಸೂರಿನ ಎಂಟು ಪದವಿಪೂರ್ವ ಕಾಲೇಜುಗಳ ಮೂಲಕ ಯುವ ಪ್ರತಿಭೆಗಳನ್ನು ರೂಪಿಸುವ ಆರ್‌ವಿ ಲರ್ನಿಂಗ್ ಹಬ್ ಕಾರ್ಯಕ್ರಮದಲ್ಲಿ ಆರ್.ವಿ. ಸ್ಟಾರ್ಸ್ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಕಠಿಣ ಪರಿಶ್ರಮದ ಮೂಲಕ ಸಾಧನೆ ಮಾಡಬೇಕು. ಶಿಕ್ಷಣ ವ್ಯವಸ್ಥೆ ಜ್ಞಾನಾಧಾರಿತ ಶಿಕ್ಷಣದಿಂದ ಕೌಶಲ್ಯಾಧಾರಿತ ಶಿಕ್ಷಣದತ್ತ ಪರಿವರ್ತನೆಯಾಗಿದ್ದು, ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನಕ್ಕೆ ಅನುಗುಣವಾಗಿ ತಮ್ಮ ಕೌಶಲ್ಯವನ್ನುಮೇಲ್ದರ್ಜೆಗೇರಿಸಿಕೊಂಡು ಯಶಸ್ಸಿನತ್ತ ಸಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ತಾವು ಓದಿದ ಆರ್.ವಿ. ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿ ಜೀವನ್ನು ಎಂ.ಎನ್. ಅನುಚೇತ್ ಮೆಲುಕು ಹಾಕಿದರು.

ಆರ್ವಿ ಲರ್ನಿಂಗ್ ಹಬ್ ಹಾಗೂ ಟ್ರಸ್ಟಿ, ಆರ್ವಿ ಶಿಕ್ಷಣ ಸಂಸ್ಥೆಗಳು ಅಧ್ಯಕ್ಷ ಸಿ.ಎ. ಡಾ.ಎ.ಎಸ್. ವಿಷ್ಣುಭರತ್ ಆಲಂಪಲ್ಲಿ ಮಾತನಾಡಿ. ಉನ್ನತ ಶಿಕ್ಷಣದಲ್ಲಿಯೂ ಶ್ರೇಷ್ಠ ಸಾಧನೆ ಮಾಡಿ, ಜ್ಞಾನ, ನಾವೀನ್ಯತೆ ಹಾಗೂ ಶ್ರೇಷ್ಠತೆಯ ಮೂಲಕ ಸಮಾಜಕ್ಕೆ ಅರ್ಥಪೂರ್ಣ ಕೊಡುಗೆ ನೀಡಬೇಕು. ಜವಾಬ್ದಾರಿಯುತ, ಕರುಣಾಮಯ ಹಾಗೂ ಆದರ್ಶ ನಾಗರಿಕರಾಗಿ ಬೆಳೆವಣಿಗೆ ಸಾಧಿಸಬೇಕು ಎಂದರು.

ಆರ್ವಿ ಲರ್ನಿಂಗ್ ಹಬ್‌ನ ಪ್ರಥಮ ತಂಡದ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸುಮಾರು 150 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಜೆಇಇ ಮೈನ್, ಜೆಇಇ ಅಡ್ವಾನ್ಸ್, ಕೆಸಿಇಟಿ ಹಾಗೂ ಕಾಮೆಡ್ ಕೆ ಸೇರಿದಂತೆ ವಿವಿಧ ವೃತ್ತಿಪರ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಗಳಲ್ಲಿಯೂ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಅವರ ಈ ವಿಶಿಷ್ಟ ಸಾಧನೆಯನ್ನು ಗೌರವಿಸುವ ಸಲುವಾಗಿ ಆರ್.ವಿ– ಸ್ಟಾರ್ಸ್ – ವಾರ್ಷಿಕ ಶೈಕ್ಷಣಿಕ ಸಾಧನಾ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಆರ್‌ವಿಯ ಹೋಗಿ, ಜಗತ್ತನ್ನು ಬದಲಾಯಿಸಿ ಎಂಬ ಧ್ಯೇಯವಾಕ್ಯದೊಂದಿಗೆ ಅವರು ಉನ್ನತ ಶಿಕ್ಷಣದತ್ತ ಆತ್ಮವಿಶ್ವಾಸದಿಂದ ಹೆಜ್ಜೆಯಿಟ್ಟರು.

ಬೇಸ್ ಎಜುಕೇಶನಲ್ ಸರ್ವೀಸ್‌ನ ಮುಖ್ಯಸ್ಥರಾದ ಆರ್. ಪಿ. ಉಮಾಶಂಕರ್, ಆರ್ವಿ ಶಿಕ್ಷಣ ಸಂಸ್ಥೆಗಳ ಸಹ ಕಾರ್ಯದರ್ಶಿ ನಿಖಿಲ್ ಎ. ಮೂರ್ತಿ, ರಿಜಿಸ್ಟ್ರಾರ್ ಸಯ್ಯದ್ ಶಹ್ಮೀರ್, ಆರ್ವಿ ಲರ್ನಿಂಗ್ ಹಬ್‌ನ ನಿರ್ದೇಶಕ ಮಯೂರ್ ಗೋಯಲ್, ಸಹ ನಿರ್ದೇಶಕ ಶ್ರೀವತ್ಸ ಮತ್ತಿತರರು ಪಾಲ್ಗೊಂಡಿದ್ದರು.

# ಸಮಸಮಾಜ ನಿರ್ಮಾಣಕ್ಕೆ ದಾಸ- ವಚನ ಸಾಹಿತ್ಯ ಅಗತ್ಯ: ಲಿಂಗರಾಜ್ ಅಪ್ಪಾ

**ಕಲಬುರಗಿ, ಜು.6:** ಸಮ ಸಮಾಜ ಹಾಗೂ ಉತ್ತಮ ಸಂಸ್ಕಾರಯುತ ಸಮಾಜ ನಿರ್ಮಾಣಕ್ಕೆ ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯ ಇಂದು ಅನಿವಾರ್ಯ ಎಂದು ಶ್ರೀ ಶರಣಬಸವೇಶ್ವರ ಸಂಸ್ಥಾನದ ಪೂಜ್ಯ ಲಿಂಗರಾಜಪ್ಪ ಅಪ್ಪ ಹೇಳಿದರು.

ಕಲಬುರಗಿಯ ದಾಸ ಸಾಹಿತ್ಯ ಸಾಸ್ಕೃತಿಕ ಪ್ರತಿಷ್ಠಾನ ಟ್ರಸ್ಟ್ ಆಯೋಜಿಸಿದ್ದ ದಾಸ ಸಾಹಿತ್ಯ ಪ್ರವರ್ತಕ ಶ್ರೀಪಾದರಾಜರ ಆರಾಧನಾ ನಿಮಿತ್ತ ದಾಸಸಾಹಿತ್ಯ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿ, ಎಲ್ಲಾ ಪಾಲಕರು ಮಕ್ಕಳ ಮತ್ತು ಯುವಕರ ಮನಸ್ಸಿನಲ್ಲಿ ಮನೆಯಲ್ಲಿಯೇ ಒಳ್ಳೆಯ ವಿಚಾರ ತುಂಬ ಬೇಕು ಎಂದರು.

ಪ್ರಾಸ್ತಾವಿಕ ಮಾತನಾಡಿದ ಪ್ರತಿಷ್ಠಾನದ ಗೌರವಾಧ್ಯ ಡಾ.ಸ್ವಾಮಿರಾವ್ ಕುಲಕರ್ಣಿ, ದಾಸ ಸಾಹಿತ್ಯವು ಬದುಕಿನ ಸಾಹಿತ್ಯ, ಇಂದಿನ ಯುವ ಜನಾಂಗಕ್ಕೆ ಮಾರ್ಗದರ್ಶಕ ಎಂದು ಹೇಳಿದರು. ಪ್ರತಿಷ್ಠಾನದ ಉಪಾಧ್ಯಕ್ಷ ವ್ಯಾಸರಾಜ ಸಂತೆಕೆಲ್ಲೂರ ಅವರು, ದಾಸಸಾಹಿತ್ಯಕ್ಕೆ ಶ್ರೀಪಾದರಾಜರ ಕೊಡುಗೆ ಕುರಿತು ವಿಚಾರ ಮಂಡನೆ ಮಾಡಿದರು.




ಕಲಬುರಗಿ ನಗರದ ಜೈವೀರ ಹನುಮಾನ ಮಂದಿರದಲ್ಲಿ ದಾಸ ಸಾಹಿತ್ಯ ಪ್ರವರ್ತಕ ಶ್ರೀಪಾದರಾಜರ ಆರಾಧನೆ ನಿಮಿತ್ತ ದಾಸ ಸಾಹಿತ್ಯ ಸಾಸ್ಕೃತಿಕ ಪ್ರತಿಷ್ಠಾನ ಟ್ರಸ್ಟ್ ಆಯೋಜಿಸಿದ್ದ ದಾಸ ಸಾಹಿತ್ಯ ದಿನಾಚರಣೆಯನ್ನು ಶರಣಬಸವೇಶ್ವರ ಸಂಸ್ಥಾನದ ಪೂಜ್ಯ ಲಿಂಗರಾಜ ಅಪ್ಪಾ ಅವರು ಉದ್ಘಾಟಿಸಿದರು. ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಸಂಗೀತಗಾರ ಡಾಮುದ್ದುಮೋಹನ್, ಶ್ರೀನಿವಾಸ ಸಿರನೂರಕರ್, ವ್ಯಾಸರಾಜ ಸಂತೆಕೆಲ್ಲೂರ, ಡಾ.ಸ್ವಾಮಿರಾವ್ ಕುಲಕರ್ಣಿ, ಅವಿನಾಶ ಕುಲಕರ್ಣಿ ಅವರಿದ್ದರು.

ಖ್ಯಾತ ಹಿಂದುಸ್ತಾನಿ ಸಂಗೀತಗಾರರು ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಡಾ.ಮುದ್ದುಮೋಹನ ಅವರಿಗೆ ಹರಿದಾಸ ಸಂಪದ ರಾಜ್ಯಮಟ್ಟದ ಚೊಚ್ಚಲ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ, ಫಲಕದೊಂದಿಗೆ, ಹನ್ನೊಂದು ಸಾವಿರ ರೂ. ಸಂಭಾವನೆ ರೂಪದಲ್ಲಿ ನೀಡಲಾಯಿತು.

ಕಲಬುರಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶಾಸ್ತ್ರಿಯ ಸಂಗೀತ, ಭಕ್ತಿಗೀತ ಗಾಯನ ಹಾಗು ಶಾಸ್ತ್ರೀಯ ನೃತ್ಯ ಕಾರ್ಯಕ್ರಮ ಪ್ರಸ್ತುತಗೊಂಡವು. ಸೌಖ್ಯ ಕುಲಕರ್ಣಿ ಅವರ ನೂಪುರ ತಂಡದ ವಿದ್ಯಾರ್ಥಿನಿಯರು ಶ್ರೀಪಾದರಾಜರ ಕೀರ್ತನೆಗಳಿಗೆ ಭರತ ನಾಟ್ಯ ಪ್ರಸ್ತುತ ಪಡಿಸಿದರು.

ಡಾ.ಮುದ್ದುಮೋಹನ ಅವರು ಹಿಂದುಸ್ತಾನಿ ಶಾಸ್ತ್ರಿಯ ಸಂಗೀತದ ಮೂಲಕ ಆರಂಭಿಸಿ, ದಾಸರ ಕೀರ್ತನೆಗಳನ್ನು ಪ್ರಸ್ತುತ ಪಡಿಸುವ ಮೂಲಕ ನೆರೆದ ಸಂಗೀತಾಸಕ್ತರ ಮೆಚ್ಚುಗೆಗೆ ಪಾತ್ರರಾದರು. ಶಾರದಾ ಸಂಗೀತ ವಿದ್ಯಾಲಯದ ವಿದ್ಯಾರ್ಥಿನಿಯರು ಪ್ರಾರ್ಥನೆ ನೆರವೇರಿಸಿದರು. ಸುನಂದಾ ಸಾಲವಾಡಗಿ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಪ್ರಧಾನ ಕಾರ್ಯದರ್ಶಿ ನಾರಾಯಣ ಕುಲಕರ್ಣಿ, ಡಾ.ಮುದ್ದುಮೋಹನ್ ಅವರನ್ನು ಪರಿಚಯಿಸಿದರು. ಕೆ.ಪಿ.ಗಿರಿಧರ ವಂದಿಸಿದರು.

# ಎನ್.ಜಿ.ಓ ಕಚೇರಿಯಲ್ಲಿ ಎಸ್.ಐ.ಆರ್ ಪ್ರಕ್ರಿಯೆಗೆ ಭಗವಂತ ಖೂಬಾ ಖಂಡನೆ




**ಬೀದರ್, ಜು.6:** ಬೀದರ್‌ನಲ್ಲಿ ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಅವರು, ಬೀದರ್ ನಗರದ ಹಳೇ ಪಟ್ಟಣದ ಭೀಮನಗರ ಓಣಿಯಲ್ಲಿ ಬೂತ್ ಸಂಖ್ಯೆ 109ರಲ್ಲಿ ನಡೆಯುತ್ತಿರುವ ಎಸ್.ಐ.ಆರ್ ಪ್ರಕ್ರಿಯೆಯನ್ನು ವೀಕ್ಷಣೆ ಮಾಡಿದಾಗ, ಒಂದು ವಿಶೇಷ ವರ್ಗ ಶಾಹಿನ್ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಅಬ್ದುಲ್ ಖದಿರ್ ಅವರ (Bidar Betterment foundation) ಎನ್.ಜಿ.ಓ ಕಚೇರಿಯಲ್ಲಿ ಒಂದೆಡೆ ಸೇರಿ, ತಮ್ಮ SIR ಪ್ರಕ್ರಿಯೆಯಲ್ಲಿ ತೊಡಗಿರುವುದು ಕಂಡು ಬಂತು.

ಇದನ್ನು ಕಂಡು ಖೂಬಾ ಸ್ಥಳದಲ್ಲೇ ಇದ್ದ ಬಿ.ಎಲ್.ಓ ಅನಿಲಕುಮಾರ್ ಅವರಿಗೆ ಪ್ರಶ್ನಿಸಿ, ಯಾಕಪ್ಪಾ ಇವರಿಗೆಲ್ಲಾ ಇಲ್ಲಿ ಏಕೆ ಸೇರಿಸಿದಿಯಾ, ಇವರ ಫಾರ್ಮಗಳು ಇವರ ಮನೆಗೆ ತಲುಪಿಸಬೇಕು ಅಲ್ವಾ, ಅದು ಬಿಟ್ಟು ಯಾಕೆ ಈ ಕಚೇರಿಯಲ್ಲಿ ಎಲ್ಲರನ್ನು ಗುಂಪಾಗಿ ಸೇರಿಸಿ ಮಾಡಿಸುತ್ತಿದ್ದಿಯಾ ಎಂದು ಪ್ರಶ್ನಿಸಿದಾಗ ಬಿ.ಎಲ್.ಓ ಅನಿಲಕುಮಾರ ತಬ್ಬಿಬ್ಬಾಗಿ, ಸರಿಯಾಗಿ ಉತ್ತರ ನೀಡದೆ, ಸರಿಯಾಗಿ ಉತ್ತರಿಸದೆ ತನ್ನ ಸ್ಕೂಟಿ ಹತ್ತಿಕೊಂಡು ಓಡಿಹೋದ ಘಟನೆ ನಡೆದಿದೆ.

ಖೂಬಾರವರನ್ನು ಕಂಡ ಹೆಣ್ಣು ಮಕ್ಕಳು ಮತ್ತು ಇನ್ನು ಕೆಲವು ಜನರು ನೇರವಾಗಿ ಅಲ್ಲಿಂದ ಕಾಲ್ಕಿತ್ತರು, ಇನ್ನು ಕೆಲವರು ಬಿ.ಎಲ್.ಓ ಮತ್ತು ಎನ್.ಜಿ.ಓದವರನ್ನು ರಕ್ಷಿಸಲು ಸಬೂಬು ಹೇಳುತ್ತಿದ್ದರು ಆದರೆ ಅಲ್ಲೇ ಇದ್ದ ಬೇರೆ ಸಮಾಜದ ಜನರು ಬಿ.ಎಲ್.ಓ ಮನೆಗೆ ಫಾರ್ಮ ತಂದು ನೀಡದೆ, ಇಲ್ಲಿ ಕೂಡಿಸಿ ಎಸ್.ಐ.ಆರ್ ಪ್ರಕ್ರೀಯೆ ಮಾಡುತ್ತಿರುವುದಕ್ಕೆ ಬೇಸರ ಹೊರಹಾಕಿದರು.

ಈಗಾಗಲೆ ರಾಮನಗರ, ಹುಬ್ಬಳ್ಳಿಯಲ್ಲಿ ಇದೇ ತರಹ ನಡೆದಿದ್ದು, ಇವಾಗ ಅದೇ ಮಾದರಿಯಲ್ಲಿ ಬೀದರ್‌ನಲ್ಲಿ ಆಗುತ್ತಿದೆ ಇದನ್ನು ಜಿಲ್ಲಾಧಿಕಾರಿಗಳು ತಡೆಹಿಡಿಯಬೇಕು, ಸರ್ಕಾರದ ಆದೇಶದಂತೆ, ನಿಯಮಗಳಂತೆ ಎಲ್ಲರು ಎಸ್.ಐ.ಆರ್ ಪ್ರಕ್ರೀಯೆಯಲ್ಲಿ ಭಾಗವಹಿಸಬೇಕು, ಅರ್ಹ ಮತದಾರರು ಯಾವೂದೇ ಕಾರಣಕ್ಕೂ ಹೆದರುವ ಅವಶ್ಯಕತೆ ಇಲ್ಲಾ, ಅನರ್ಹ ಮತದಾರರು ಎಸ್.ಐ.ಆರ್ ನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅಲ್ಲಿ ನೆರೆದಿದ್ದ ಕೆಲ ಮುಸ್ಲಿಂ ಯುವಕರಿಗೆ ಖೂಬಾ ಅವರು ತಿಳಿಸಿದರು, ಎಸ್.ಐ.ಆರ್ ಕುರಿತು ಭಯಪಡುವ ಅವಶ್ಯಕತೆ ಇಲ್ಲಾ ಆದರೆ ನಿವೆಲ್ಲರೂ ಈ ಓಣಿಯಲ್ಲಿ ಮತ್ತು ಎನ್.ಜಿ.ಓ ಕಚೇರಿಯಲ್ಲಿ ಕುಳಿತುಕೊಂಡು ಈ ಪ್ರಕ್ರಿಯೆಯಲ್ಲಿ ಯಾವೂದೇ ಕಾರಣಕ್ಕೂ ಮಾಡಬಾರದು, ಈ ವಿಷಯವನ್ನು ನಾನು ರಾಜ್ಯ ಚುನಾವಣಾ ಆಯೋಗ ಮತ್ತು ಜಿಲ್ಲಾಧಿಕಾರಿ ಗಮನಕ್ಕೆ ತರುವುದಾಗಿ ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಸ್ಥಳಿಯರ ಗಮನಕ್ಕೆ ತಂದರು.

ಕಾಂಗ್ರೇಸ್ ಪಕ್ಷ ಎಸ್.ಐ.ಆರ್ ಹಳ್ಳ ಹಿಡಿಸಲು ಪ್ರಯತ್ನಿಸುತ್ತಿದೆ, ಈಗಾಗಲೇ ಎರಡು ಮೂರು ಕಡೆ ಈ ಪ್ರಯತ್ನ ಮಾಡಿದೆ ಅದರ ಮುಂದುವರೆದ ಭಾಗವಾಗಿ ಬೀದರ್ ನಗರದಲ್ಲಿ ನಡೆಸುತ್ತಿದೆ, ಇದನ್ನು ರಾಜ್ಯ ಸರ್ಕಾರ ತಡೆಹಿಡಿಯಬೇಕು ಮತ್ತು ನಿಯಮದಂತೆ ಅಧಿಕಾರಿಗಳಿಂದ ಎಸ್.ಐ.ಆರ್ ಮಾಡಿಸಬೇಕು ಎಂದು ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

# ಬೆಳಗಾವಿಯ ಸಪ್ತ ನದಿಗಳಲ್ಲಿ ನೀರಿನ ಹರಿವು ಹೆಚ್ಚಳ, ಜಲಾವೃತಗೊಂಡ ಸೇತುವೆಗಳ ಸಂಖ್ಯೆ 8ಕ್ಕೆ ಏರಿಕೆ



**ಬೆಳಗಾವಿ, ಜು.6:** ಮಹಾರಾಷ್ಟ್ರದ ಕೊಂಕಣ ಪ್ರದೇಶ ಹಾಗೂ ಜಿಲ್ಲೆಯಲ್ಲಿ ವರುಣನ ಅಬ್ಬರ ಮುಂದುವರಿದಿದ್ದು, ಬೆಳಗಾವಿಯ ಸಪ್ತ ನದಿಗಳಲ್ಲಿ ನೀರಿನ ಹರಿವು ಹೆಚ್ಚಿದೆ. ಚಿಕ್ಕೋಡಿ ಉಪವಿಭಾಗ ವ್ಯಾಪ್ತಿಯಲ್ಲಿ ಭಾನುವಾರ ಮುಳುಗಡೆಯಾಗಿದ್ದ ಏಳು ಸೇತುವೆಗಳು ಸೋಮವಾರವೂ ಅದೇ ಸ್ಥಿತಿಯಲ್ಲಿವೆ. ಇದರೊಂದಿಗೆ ಗೋಕಾಕ–ಶಿಂಗಾಳಾಪುರ ಸೇತುವೆ ಮುಳುಗಿದ್ದು, ಜಲಾವೃತಗೊಂಡ ಸೇತುವೆಗಳ ಸಂಖ್ಯೆ ಎಂಟಕ್ಕೆ ಏರಿಕೆಯಾಗಿದೆ.

ಹಿಡಕಲ್ ಜಲಾಶಯ ಹಾಗೂ ನವಿಲುತೀರ್ಥ ಜಲಾಶಯಗಳಿಗೆ ಒಳಹರಿವಿನ ಪ್ರಮಾಣದಲ್ಲಿ ಗಣನೀಯವಾಗಿ ಏರಿಕೆಯಾಗಿದೆ.ಬೆಳಗಾವಿ ನಗರದಲ್ಲಿ ಮಳೆ ಮುಂದುವರಿದಿದ್ದು, ಭಾನುವಾರ ರಾತ್ರಿಯಿಂದ ಸೋಮವಾರ ಸಂಜೆಯವರೆಗೆ ಏಳು ಮರ ಬಿದ್ದಿವೆ. ಕುವೆಂಪು ನಗರದ ಪ್ರೆಸ್ ಕಾಲೊನಿ ಹಾಗೂ ಭಾಗ್ಯ ನಗರದಲ್ಲಿ ಮರ ಬಿದ್ದು ಕಾರುಗಳು ಜಖಂಗೊಂಡಿವೆ. ಅದೃಷ್ಟವಷಾತ್ ಯಾವುದೇ ಅನಾಹುತವಾಗಿಲ್ಲ.

ಘಟಪ್ರಭಾ ನದಿ ಉಕ್ಕಿ ಹರಿಯುತ್ತಿರುವುದರಿಂದ ಹಿಡಕಲ್ ಜಲಾಶಯದಲ್ಲಿ ನೀರಿನ ಸಂಗ್ರಹ ಒಂದೇ ದಿನದಲ್ಲಿ ನಾಲ್ಕು ಅಡಿ ಏರಿಕೆಯಾಗಿದೆ. 2,175 ಅಡಿ ಗರಿಷ್ಠ ಸಂಗ್ರಹ ಸಾಮರ್ಥ್ಯದ ಹಿಡಕಲ್‌ನಲ್ಲಿ ಭಾನುವಾರ 2,094 ಅಡಿ ನೀರು ಸಂಗ್ರಹವಿತ್ತು. ಸೋಮವಾರ ಅದು 2,098.05 ಅಡಿಗೆ ಏರಿಕೆಯಾಗಿದೆ. ಒಳಹರಿವಿನ ಪ್ರಮಾಣ 5,377 ಕ್ಯೂಸೆಕ್‌ನಿಂದ 14,143 ಕ್ಯೂಸೆಕ್‌ಗೆ ಹೆಚ್ಚಿದೆ. ಖಾನಾಪುರ ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ವರುಣ ಅಬ್ಬರಿಸುತ್ತಿರುವ ಕಾರಣ, ಮಲಪ್ರಭಾ ನದಿ ಮೈದುಂಬಿಕೊಂಡು ಹರಿಯುತ್ತಿದೆ. ಇದರಿಂದಾಗಿ ಸವದತ್ತಿ ತಾಲ್ಲೂಕಿನ ನವಿಲುತೀರ್ಥ ಜಲಾಶಯಕ್ಕೆ ಸೋಮವಾರ 2,069 ಕ್ಯೂಸೆಕ್ ನೀರು ಹರಿದುಬಂದಿದೆ. ಭಾನುವಾರ 622 ಕ್ಯೂಸೆಕ್ ಒಳಹರಿವು ಮಾತ್ರ ಇತ್ತು.

## ಜಲಪಾತಗಳಿಗೆ ಪ್ರವಾಸಿಗರ ಭೇಟಿ ನಿಷೇಧ: ಜಿಲ್ಲಾಧಿಕಾರಿ ಆದೇಶ



ಖಾನಾಪುರ ಅರಣ್ಯ ಪ್ರದೇಶವೂ ಸೇರಿದಂತೆ ಜಿಲ್ಲೆಯ ಹಲವೆಡೆ ಭಾರಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ, ಸುರಕ್ಷತೆ ದೃಷ್ಟಿಯಿಂದ ಪ್ರಮುಖ ಜಲಪಾತಗಳಿಗೆ ಪ್ರವಾಸಿಗರ ಭೇಟಿ ನಿಷೇಧಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜಿಲ್ಲೆಯ ವಿವಿಧ ನದಿಗಳಲ್ಲಿ ನೀರಿನ ಹರಿವು ಹೆಚ್ಚಿದೆ. ಹಾಗಾಗಿ ಸಾರ್ವಜನಿಕರು ಹಾಗೂ ಪ್ರವಾಸಿಗರು ನದಿತೀರಕ್ಕೆ ಇಳಿಯಬಾರದು. ಜಲಪಾತಗಳಲ್ಲಿ ರೀಲ್ಸ್ ಮಾಡುವ ಸಾಹಸಕ್ಕೆ ಕೈಹಾಕಬಾರದು' ಎಂದರು.

ಬೆಳಗಾವಿ ನಗರಕ್ಕೆ ಕುಡಿಯುವ ನೀರು ಪೂರೈಸುವ ರಕ್ಕಸಕೊಪ್ಪ ಜಲಾಶಯದಲ್ಲಿ ನೀರಿನ ಸಂಗ್ರಹ ಮಟ್ಟ ಪ್ರತಿದಿನ ಅರ್ಧ ಅಡಿ ಏರುತ್ತಿದೆ. ಹಾಗಾಗಿ ನಗರದಲ್ಲಿ ತಲೆದೋರಿನ ನೀರಿನ ಸಮಸ್ಯೆ ಶೀಘ್ರ ನೀಗಲಿದೆ' ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಸೇತುವೆಗಳು ಮುಳುಗಡೆಯಾದ ಕಡೆ ಬ್ಯಾರಿಕೇಡ್ ಹಾಕಿ ಜನಸಂಚಾರ ನಿರ್ಬಂಧಿಸಲಾಗಿದೆ. ಈವರೆಗೆ ಸುರಿದ ಮಳೆಯಿಂದ ಐದು ಮನೆಗಳಿಗೆ ಹಾನಿಯಾಗಿದೆ. ಚಿಕ್ಕೋಡಿ ತಾಲ್ಲೂಕಿನ ವಡ್ರಾಳದಲ್ಲಿ ದನದ ಕೊಟ್ಟಿಗೆಯ ಗೋಡೆ ಬಿದ್ದು ಎಮ್ಮೆಯೊಂದು ಮೃತಪಟ್ಟಿದೆ' ಎಂದು ವಿವರಿಸಿದರು.'ಮಳೆಯಿಂದ ತೊಂದರೆಗೆ ಸಿಲುಕುವ ಜನರಿಗೆ ನೆರವಾಗಲು ಜಿಲ್ಲಾಧಿಕಾರಿ ಕಚೇರಿಯಲ್ಲಿ ಕಂಟ್ರೋಲ್ ರೂಂ ತೆರೆಯಲಾಗಿದೆ. ಪೊಲೀಸರು, ಎಸ್ಡಿಆರ್‌ಎಫ್ ತಂಡದವರು ಸೇವೆಗೆ ಸನ್ನದ್ಧರಿದ್ದಾರೆ. ಅಗತ್ಯಬಿದ್ದರೆ ಹದಿನೈದೇ ನಿಮಿಷಗಳಲ್ಲಿ ಕಾಳಜಿ ಕೇಂದ್ರ ತೆರೆಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಹೇಳಿದರು.

# 97 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವಿನ ಸಾಧ್ಯತೆ ಅರಿತಿರುವ ಬಿಜೆಪಿ, ಆರ್‌ಎಸ್‌ಎಸ್‌ನಿಂದ ಷಡ್ಯಂತ್ರ: ಎಂಎಲ್‌ಸಿ ಜಕ್ಕಪ್ಪನವರ



**ಹುಬ್ಬಳ್ಳಿ, ಜು.6:** ಕಾಂಗ್ರೆಸ್ ಖಚಿತವಾಗಿ ಗೆಲ್ಲಬಹುದಾದ ಸುಮಾರು 97 ವಿಧಾನ ಸಭಾ ಕ್ಷೇತ್ರಗಳಲ್ಲಿ ಪಕ್ಷದ ಗೆಲುವಿನ ಸಾಧ್ಯತೆಯನ್ನು ಅರಿತಿರುವ ಆರ್‌ಎಸ್‌ಎಸ್ ಹಾಗೂ ಬಿಜೆಪಿ, ವಿಶೇಷ ಮತದಾರರ ತೀವ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ಷಡ್ಯಂತ್ರ ನಡೆಸಲು ಮುಂದಾಗಿವೆ. ಆದರೆ ಇಂತಹ ಪ್ರಯತ್ನಗಳಿಗೆ ಕಾಂಗ್ರೆಸ್ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಎಫ್.ಎಚ್. ಜಕ್ಕಪ್ಪನವರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಸ್‌ಐಆರ್‌ಗೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸುತ್ತಿಲ್ಲ. ಆದರೆ ಅದರ ಅನುಷ್ಠಾನದ ಕುರಿತು ಈಗಲೂ ಹಲವು ಅನುಮಾನಗಳಿವೆ. ಪಶ್ಚಿಮ ಬಂಗಾಳ ಹಾಗೂ ಬಿಹಾರದಲ್ಲಿ ನಡೆದ ರೀತಿಯಲ್ಲೇ ಎಸ್‌ಐಆರ್ ಪ್ರಕ್ರಿಯೆಯ ಮೂಲಕ ಮತ ಕಳವು ಮಾಡಲು ಬಿಜೆಪಿ ಮುಂದಾಗಿದೆ. ಇದನ್ನು ಕಾಂಗ್ರೆಸ್ ಸಹಿಸುವುದಿಲ್ಲ" ಎಂದು ಆರೋಪಿಸಿದರು.

"ಚುನಾವಣಾ ಆಯೋಗವೇ ನೀಡಿರುವ ನಮೂನೆಗಳನ್ನು ಅನಕ್ಷರಸ್ಥರು ಒಂದೆಡೆ ಸೇರಿ, ಓದು–ಬರಹ ಬಲ್ಲವರ ನೆರವಿನಿಂದ ಭರ್ತಿ ಮಾಡಿದರೆ ಅದರಲ್ಲಿ ತಪ್ಪೇನಿದೆ. ಒಂದೇ ಸ್ಥಳದಲ್ಲಿ ಸೇರಿ ಅರ್ಜಿ ಭರ್ತಿ ಮಾಡಬಾರದು ಎಂಬ ಯಾವುದೇ ನಿಯಮವನ್ನು ಚುನಾವಣಾ ಆಯೋಗ ರೂಪಿಸಿಲ್ಲ" ಎಂದರು. ಎಸ್‌ಐಆರ್ ಪ್ರಕ್ರಿಯೆ ಹಾಗೂ ಮತದಾನದ ಹಕ್ಕಿನ ರಕ್ಷಣೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಬಿಎಲ್‌ಓಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಜಕ್ಕಪ್ಪನವರ ತಿಳಿಸಿದರು.

# ಆರೋಗ್ಯವೇ ಮನುಷ್ಯನ ನಿಜವಾದ ಸಂಪತ್ತು: ಡಾ.ಅಲ್ಲಮಪ್ರಭು ದೇಶಮುಖ



ಕಲಬುರಗಿಯ ಶರಣಬಸವೇಶ್ವರ ಸಂಸ್ಥಾನದ ದಿ. ಡಾ.ಶರಣಬಸವಪ್ಪ ಅಪ್ಪ ಅವರ ಪ್ರಥಮ ಪುಣ್ಯ ಸ್ಮರಣೆಯ ನಿಮಿತ್ಯ ಆಯೋಜಿಸಿದ ಉಚಿತ ಆರೋಗ್ಯ ಶಿಬಿರವನ್ನು ಡಾ.ಅಲ್ಲಮಪ್ರಭು ದೇಶಮುಖ ಅವರು ಉದ್ಘಾಟಿಸಿ ಮಾತನಾಡಿದರು.

**ಕಲಬುರಗಿ, ಜು. 6:** ಉತ್ತಮ ಆರೋಗ್ಯವಿದ್ದಾಗ ಮಾತ್ರ ವ್ಯಕ್ತಿ, ಕುಟುಂಬ ಮತ್ತು ಸಮಾಜದ ಅಭಿವೃದ್ಧಿ ಸಾಧ್ಯವಾಗುತ್ತದೆ. ಆರೋಗ್ಯವೇ ಮನುಷ್ಯನ ನಿಜವಾದ ಸಂಪತ್ತು ಎಂದು ಡಾ. ಅಲ್ಲಮಪ್ರಭು ದೇಶಮುಖ ಹೇಳಿದರು.

ನಗರದ ಗೋದುತಾಯಿ ದೊಡ್ಡಪ್ಪ ಅಪ್ಪ ಪದವಿ ಮಹಿಳಾ ಮಹಾವಿದ್ಯಾಲಯದಲ್ಲಿ ಲಿಂ. ಡಾ. ಶರಣಬಸವಪ್ಪ ಅಪ್ಪ ಅವರ ಪ್ರಥಮ ಪುಣ್ಯಸ್ಮರಣೆ ಅಂಗವಾಗಿ ಶಾಲಾ–ಕಾಲೇಜುಗಳು ಮತ್ತು ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಬಸವೇಶ್ವರ ಬೋಧನ ಮತ್ತು ಸಾರ್ವಜನಿಕ ಆಸ್ಪತ್ರೆ ಹಾಗೂ ಎಸ್.ನಿಜಲಿಂಗಪ್ಪ ದಂತ ವೈದ್ಯಕೀಯ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ 15 ದಿನಗಳ ವರೆಗೆ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ಉಚಿತ ಆರೋಗ್ಯಭಾಗ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದಿನ ವೇಗದ ಜೀವನಶೈಲಿಯಲ್ಲಿ ಅನೇಕರು ತಮ್ಮ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಾರೆ. ಆದರೆ ಸಣ್ಣ ಸಮಸ್ಯೆಗಳನ್ನು ಆರಂಭದಲ್ಲಿಯೇ ಗುರುತಿಸಿ ಸೂಕ್ತ ಚಿಕಿತ್ಸೆ ಪಡೆದರೆ ದೊಡ್ಡ ಕಾಯಿಲೆಗಳನ್ನು ತಡೆಗಟ್ಟಬಹುದು. ಆದಯ್ದರಿಂದ ಇಂತಹ ಉಚಿತ ಆರೋಗ್ಯ ತಪಾಸಣೆ ಶಿಬಿರಗಳು ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ. ಆರೋಗ್ಯವಂತ ಸಮಾಜವೇ ಸದೃಢ ರಾಷ್ಟ್ರನಿರ್ಮಾಣಕ್ಕೆ ಆದಾರ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಕುಟುಂಬದವರನ್ನೂ ನಿಯಮಿತ ಆರೋಗ್ಯ ತಪಾಸಣೆಗೆ ಪ್ರೇರೇಪಿಸಬೇಕು ಎಂದು ಅವರು ಹೇಳಿದರು.

ಅತಿಥಿಗಳಾದ ಹಿರಿಯ ವೈದ್ಯ ಡಾ. ಶರಣಗೌಡ ಪಾಟೀಲ್ ಅವರು ಮಾತನಾಡಿ, ಎಲ್ಲರೂ ತಮ್ಮ ಆರೋಗ್ಯದ ಸ್ಥಿತಿಯನ್ನು ತಿಳಿದುಕೊಂಡು ಸೂಕ್ತ ವೈದ್ಯಕೀಯ ಸಲಹೆ ಪಡೆಯಬೇಕು. ಸಮತೋಲನ ಆಹಾರ, ನಿಯಮಿತ ವ್ಯಾಯಾಮ, ಯೋಗ, ಸ್ವಚ್ಛತೆ ಹಾಗೂ ಮಾನಸಿಕ ಆರೋಗ್ಯದ ಕಡೆಗೂ ಸಮಾನ ಗಮನ ನೀಡಬೇಕು ಎಂದು ಹೇಳಿದರು.

ಶರಣಬಸವೇಶ್ವರ ದೇವಸ್ಥಾನ ಆವರಣದ ಶಾಲಾ–ಕಾಲೇಜುಗಳ ನಿರ್ದೇಶಕಿ ಡಾ. ನೀಲಾಂಬಿಕಾ ಶೇರಿಕಾರ್ ಮಾತನಾಡಿದರು. ಹಿರಿಯ ವೈದ್ಯರಾದ ಡಾ. ಮಲ್ಲಿಕಾರ್ಜುನ್ ತೆಗನೂರ್, ಡಾ. ಸುನೀಲ್ ದೇಶಮುಖ, ಡಾ. ವೀರೇಂದ್ರ ಪಾಟೀಲ್, ಡಾ. ನೀಲಾಂಬಿಕಾ ಶೇರಿಕಾರ್, ಪ್ರಾಚಾರ್ಯೆ ಡಾ. ಸೀಮಾ ಪಾಟೀಲ್, ಡಾ. ಎಂ.ಆರ್. ಹುಗ್ಗಿ, ಡಾ. ಅಮ್ರಪಾಲಿ ಉಪಸ್ಥಿತರಿದ್ದರು. ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಎಂ.ಆರ್.ಎಂ.ಸಿ ಮಹಾವಿದ್ಯಾಲಯದ ವೈದ್ಯರು ಮತ್ತು ಶರಣಬಸವೇಶ್ವರ ದೇವಸ್ಥಾನ ಆವರಣದ ಶಾಲಾ–ಕಾಲೇಜುಗಳ ಎಲ್ಲ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

# ಪತ್ನಿ, ನಾದಿನಿ ಕೊಂದು ಮೂವರು ಮಕ್ಕಳೊಂದಿಗೆ ಪರಾರಿ




**ಚಿಕ್ಕಬಳ್ಳಾಪುರ, ಜು.6:** ಅಕ್ಕ–ತಂಗಿಯರನ್ನು ಕತ್ತು ಕೊಯ್ದು ಭೀಕರವಾಗಿ ಕೊಲೆ ಮಾಡಿರುವ ಬೆಚ್ಚಿ ಬೀಳಿಸುವ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರದ ಜೆ.ಜೆ. ಕಾಲೋನಿಯಲ್ಲಿ ನಡೆದಿದೆ.

ಚಿಂತಾಮಣಿಯ ಜೆ.ಜೆ. ಕಾಲೋನಿಯ ಶಮಾ(24) ಹಾಗೂ ರೇಷ್ಮಾ(21) ಕೊಲೆಯಾದವರು. ಚಿಂತಾಮಣಿ ನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತರು ಹಿಂದೂ ಧರ್ಮದಿಂದ ಮುಸ್ಲಿಂ ಧರ್ಮಕ್ಕೆ ಮತಾಂತರವಾಗಿದ್ದರು ಎಂದು ತಿಳಿದುಬಂದಿದೆ. ಮೃತ ಶಮಾ ಅವರ ಪತಿ ಏಜಾಜ್ ಮೇಲೆಯೇ ಕೊಲೆ ಶಂಕೆ ವ್ಯಕ್ತವಾಗಿದೆ. ಪತ್ನಿ ಹಾಗೂ ನಾದಿನಿಯ ಕತ್ತು ಕೊಯ್ದು ಹತ್ಯೆ ಮಾಡಿರುವ ಶಂಕೆ ಇದ್ದು, ಘಟನೆ ಬಳಿಕ ಮೂವರು ಮಕ್ಕಳನ್ನು ಕರೆದುಕೊಂಡು ಸ್ಥಳದಿಂದ ಪರಾರಿಯಾಗಿದ್ದಾನೆ. ಗಾಂಜಾ ಮತ್ತಿನಲ್ಲೇ ಈ ಕೃತ್ಯ ನಡೆದಿರಬಹುದು ಎಂಬ ಅನುಮಾನ ವ್ಯಕ್ತವಾಗಿದೆ. ಚಿಂತಾಮಣಿ ನಗರದಲ್ಲಿ ಗಾಂಜಾ ಮಾರಾಟ ಹೆಚ್ಚಾಗಿದ್ದು, ಪೊಲೀಸರು ಇದನ್ನು ತಡೆಯುವಲ್ಲಿ ವಿಫಲರಾಗಿದ್ದಾರೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಚಿಂತಾಮಣಿ ನಗರ ಪೊಲೀಸರು ಆರೋಪಿಯ ಪತ್ತೆಗೆ ಶೋಧ ಕಾರ್ಯ ಮುಂದುವರಿಸಿದ್ದು, ಕೊಲೆಗೆ ನಿಖರ ಕಾರಣವೇನು ಎಂಬ ಬಗ್ಗೆ ತನಿಖೆ ನಡೆಸುತ್ತಿದ್ದಾರೆ.

# ಕೆರೆ ನೀರಿನ ಪ್ರಮಾಣ ಕುಸಿತ: ಸಿಂಧನೂರು ಪಟ್ಟಣಕ್ಕೆ ಕುಡಿಯುವ ನೀರಿಗೆ ಎದುರಾಗುತ್ತಾ ಸಂಕಷ್ಟ?



**ರಾಯಚೂರು, ಜು. 6:** ಜಿಲ್ಲೆಯ ಸಿಂಧನೂರು ತಾಲ್ಲೂಕಿನ ತುರ್ವಿಹಾಳ ಪಟ್ಟಣ ಸಮೀಪದಲ್ಲಿರುವ ಸಿಂಧನೂರು ನಗರದ ಕುಡಿಯುವ ನೀರು ಪೂರೈಕೆಯ ಬೃಹತ್ ಕೆರೆ ಸಿಂಧನೂರು ನಗರದ ಜೀವಸೆಲೆಯಾಗಿದ್ದು, ಸದ್ಯ ಕೆರೆನೀರಿನ ಪ್ರಮಾಣದಿನದಿಂದ ದಿನಕ್ಕೆ ಕುಸಿಯುತ್ತಿರುವುದು ಕಂಡು ಬಂದಿದ್ದು, ನಾಗರಿಕರಲ್ಲಿ ಆಂತಕ ಉಂಟಾಗಿದೆ.

ಸದ್ಯ ಕುಡಿಯುವ ನೀರಿನ ಕೆರೆಯಲ್ಲಿ ಸದ್ಯ ಅಂದಾಜು ಒಂದೂವರೆಯಿಂದ ಎರಡು ಮೀಟರ್ ಮಾತ್ರ ನೀರಿನ ಸಂಗ್ರಹವಿದೆ. ಹಾಗಾಗಿ ಪ್ರಸ್ತುತ ತುರ್ವಿಹಾಳ ಕೆರೆಯಿಂದ ನೇರವಾಗಿ ನೀರನ್ನು ನಗರದ 31 ವಾರ್ಡ್‌ಗಳಿಗೆ ಸರಬರಾಜು ಮಾಡಲಾಗುತ್ತಿದೆ. ಕಳೆದ ಎರಡು ತಿಂಗಳ ಹಿಂದೆ ಕುಡಿಯುವ ನೀರಿನ ಉದ್ದೇಶಕ್ಕೆ ತುಂಗಭದ್ರಾ ಎಡದಂಡೆ ನಾಲೆಗೆ ನೀರು ಹರಿಸಿದ ವೇಳೆ ತುರ್ವಿಹಾಳ ಕೆರೆ ಹಾಗೂ ನಗರದ ಕುಡಿಯುವ ನೀರಿನ ಕೆರೆಯಲ್ಲಿ ನೀರು ಸಂಗ್ರಹಿಸಲಾಗಿತ್ತು. ಬೇಸಿಗೆಯ ಕಾರಣದಿಂದ ನೀರಿನ ಬೇಡಿಕೆ ಹೆಚ್ಚಿ ನಗರದ ಕುಡಿಯುವ ನೀರಿನ ಕೆರೆ ಬೇಗನೆ ಖಾಲಿಯಾಗಿದ್ದು, ಈಗ ತುರ್ವಿಹಾಳ ಕೆರೆಯೇ ಆಸರೆಯಾಗಿದೆ.

ನೀರನ್ನು ಮಿತವಾಗಿ ಬಳಸಿ: ಸದ್ಯ ಸಿಂಧನೂರು ಕೆರೆಯಲ್ಲಿ ನೀರು ಕಡಿಮೆ ಇರಬಹುದು, ಆದರೆ ತುರ್ವಿಹಾಳ ಕೆರೆಯಲ್ಲಿ ಹೆಚ್ಚಿನ ಪ್ರಮಾಣದ ನೀರನ್ನು ಸಂಗ್ರಹಿಸಲಾಗಿದೆ. ಅಂದಾಜು ಇನ್ನೂ ಮೂರು ಇಲ್ಲವೇ ಮೂರುವರೇ ತಿಂಗಳಿಗಾಗುವಷ್ಟು ನೀರಿನ ಸಂಗ್ರಹವಿದೆ. ಹಾಗಾಗಿ ನಾಗರಿಕರು ಆತಂಕಪಡುವ ಅಗತ್ಯವಿಲ್ಲ. ಈಗ 8 ದಿನಕ್ಕೊಮ್ಮೆ ಆಯಾ ವಾರ್ಡ್‌ಗಳಿಗೆ ನೀರು ಪೂರೈಕೆ ಮಾಡಲಾಗುತ್ತಿದೆ. ಬರುವ ದಿನಗಳಲ್ಲಿ ಒಂದೆರಡು ದಿನ ಹೆಚ್ಚು ಕಡಿಮೆ ಆಗಬಹುದು. ಆದರೆ ನೀರಿನ ಕೊರತೆ ಮಾತ್ರ ಇಲ್ಲ. ಆದರೆ ಸಾರ್ವಜನಿಕರು ನೀರನ್ನು ಮಿತವಾಗಿ ಬಳಸಬೇಕು ಎಂದು ನಗರಸಭೆಯ ಪೌರಾಯುಕ್ತ ಹೇಳುತ್ತಾರೆ.

# ಬಿಜೆಪಿ ಕಚೇರಿಯಲ್ಲಿ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಜಯಂತಿ ಆಚರಣೆ



**ಬಳ್ಳಾರಿ, ಜು.06:** ನಗರದ ವಾಲ್ಮೀಕಿ ಸರ್ಕಲ್‌ನಲ್ಲಿರುವ ನಗರ ಬಿಜೆಪಿ ಕಚೇರಿಯಲ್ಲಿ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿಯವರ ಜಯಂತಿಯನ್ನು ಆಚರಿಸಲಾಯಿತು.

ನಗರದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ,ಜಿಲ್ಲಾ ಅಧ್ಯಕ್ಷ ಅನಿಲ್ ನಾಯ್ಡು, ನಗರ ಅಧ್ಯಕ್ಷ ವೆಂಕಟರಮಣ, ಸಫಾಯಿ ಕರ್ಮಚಾರಿ ಮಾಜಿ ಅಧ್ಯಕ್ಷ ಹೆಚ್. ಹನುಮಂತಪ್ಪರವರು, ಪಾಲಿಕೆಯ ಸದಸ್ಯರಾದ ಸುರೇಖಾ ಮಲ್ಲನಗೌಡ, ಜಿಲ್ಲಾ ಕಾರ್ಯದರ್ಶಿ ಡಾ. ರೇಣುಕಾ ಮಂಜುನಾಥ್ ಮೊದಲಾದವರು ಪಾಲ್ಗೊಂಡಿದ್ದರು.

# ಬಡ್ತಿಗೆ ಆಗ್ರಹಿಸಿ ಪಂಚಾಯತ್ ನೌಕರರಿಂದ ಅನಿರ್ದಿಷ್ಟ ಧರಣಿ



ಕಲಬುರಗಿಯಲ್ಲಿ ಗ್ರಾಮ ಪಂಚಾಯತ್ ನೌಕರರ ಸಂಘದ ನೇತೃತ್ವದಲ್ಲಿ ಕರವಸೂಲಿಗಾರರು, ಗುಮಾಸ್ತ, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳಿಂದ ಕಾರ್ಯದರ್ಶಿ ಗ್ರೇಡ್–2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಬ್ಯಾಕ್‌ಲಾಗ್ ಹುದ್ದೆಗಳಿಗೆ ಬಡ್ತಿ ನೀಡುವಂತೆ ಆಗ್ರಹಿಸಿ ಜಿಲ್ಲಾ ಪಂಚಾಯತ್ ಆವರಣದಲ್ಲಿ ಪ್ರತಿಭಟನೆ ನಡೆಸಲಾಯಿತು.

**ಕಲಬುರಗಿ, ಜು. 6:** ಕರವಸೂಲಿಗಾರ, ಗುಮಾಸ್ತ, ಕ್ಲರ್ಕ ಕಂ, ಡಾಟಾ–ಎಂಟ್ರಿ–ಆಪರೇಟರ್ ಹುದ್ದೆಗಳಿಂದ ಕಾರ್ಯದರ್ಶಿ ಗ್ರೇಡ್–2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಬ್ಯಾಕಲಾಗ್ ಹುದ್ದೆಗಳೂ ಸೇರಿದಂತೆ ಒಟ್ಟು 37 ನೌಕರರಿಗೆ ಬಡ್ತಿ ನೀಡಲು ಅನುಸರಿಸುತ್ತಿರುವ ವಿಳಂಬ ವಿರೋಧಿಸಿ ಜಿಲ್ಲಾ ಪಂಚಾಯಿತಿ ಕಚೇರಿ ಆವರಣದಲ್ಲಿ ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ನೇತೃತ್ವದಲ್ಲಿ ನೌಕರರು ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

ಸಂಘದ ಜಿಲ್ಲಾಧ್ಯಕ್ಷ ನಾಗರಾಜ್ ಜಿ. ಭಂಗೂರ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾರುತಿ ಎಸ್. ಸುಗ್ಗಾ, ಭೋಜರಾಜ್ ಮಾಲಿಪಾಟೀಲ್, ಜೈಭೀಮ್ ಹೊಸಮನಿ, ಸಿದ್ದುಗೌಡ, ಬಂದಗಿ ಸಾಬ್, ಮಹಾದೇವಪ್ಪ ಮಲ್ಲಣ್ಣ ಹೊನಗುಂಟಿ, ಮಲ್ಲಿನಾಥ ಮಹಾಗಾಂವ್, ಮಡಿವಾಳಯ್ಯ, ದುರ್ಗಪ್ಪ ಕಟ್ಟಿಮನಿ, ಶಿವಲಿಂಗಪ್ಪ ವಟವಟಿ, ರಾಜಕುಮಾರ್ ಪೂಜಾರಿ, ಶರಣಪ್ಪ ಶೆಳ್ಳಗಿ, ಮಹಾದೇವ್ ಜಮಾದಾರ್, ಶಿವರಾಜ್ ಯಾದವ್, ಆನಂದ್ ನಡಗೇರಿ, ಬಸರೆಡ್ಡಿ, ಮಾರುತಿ ಎಸ್. ಸುಗ್ಗಾ, ಭೀಮರಾವ್ ಎಸ್. ಜಮಾದಾರ್, ಶರಣು ದಿಗ್ಗಾವಿ ಮುಂತಾದವರು ಪಾಲ್ಗೊಂಡಿದ್ದರು.

ಪ್ರತಿಭಟನೆಕಾರರು ನಂತರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ, ಈ ಹಿಂದೆ ಇದೇ ಬೇಡಿಕೆಗಳಿಗೆ ಒತ್ತಾಯಿಸಿ ಅನಿರ್ಧಿಷ್ಟ ಧರಣಿ ಸತ್ಯಾಗ್ರಹ ಹಮ್ಮಿಕೊಂಡಾಗ ಬೇಡಿಕೆಗಳಿಗೆ ಏಪ್ರಿಲ್ 5ರೊಳಗೆ ಸ್ಪಂದಿಸುವುದಾಗಿ ಭರವಸೆ ನೀಡಿದ್ದಯಿರಿಂದ ಹೋರಾಟ ಹಿಂಪಡೆಯಲಾಯಿತು. ಆದಾ ಗ್ಯೂ, ಈವರೆಗೂ ಬೇಡಿಕೆಗಳಿಗೆ ಸ್ಪಂದಿಸದೇ ಇರುವುದರಿಂದ ಅನಿರ್ಧಿಷ್ಟ ಧರಣಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನೌಕರರು ಎರಡು ದಿನಗಳಿಂದ ಜಿಲ್ಲಾ ಪಂಚಾಯಿತಿ ಕಾರ್ಯಾಲಯದ ಮುಂದೆ ಬಡ್ತಿ ಆದೇಶ ಕೊಡುವಂತೆ ಕುಳಿತಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದಿರುವುದು ನೌಕರರಿಗೆ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗುತ್ತಿರುವ ಪ್ರಯುಕ್ತ ಬೇಡಿಕೆಗಳು ಈಡೇರುವವರೆಗೆ ಅನಿರ್ಧಿಷ್ಟ ಧರಣಿ ಸತ್ಯಾಗ್ರಹ ಮುಂದುವರೆಯುತ್ತದೆ ಎಂದು ಹೇಳಿದರು.

2026ರ ಜನವರಿ 1ರ ಅಂತ್ಯಕ್ಕೆ ಇರುವಂತೆ ಕರವಸೂಲಿಗಾರ, ಕ್ಲರ್ಕ ಕಂ, ಡಾಟಾ/ಎಂಟ್ರಿ ಆಪರೇಟರ್ ಸೇವಾ ಜೇಷ್ಠತೆ ಪ್ರಚುರಪಡಿಸುವಂತೆ, ಈಗಾ ಗಲೇ ಕಾರ್ಯದರ್ಶಿ ಗ್ರೇಡ್–2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳಿಗೆ ತಾತ್ಕಾಲಿಕ ಪಟ್ಟಿ ಅಂತಿಮಗೊಳಿಸಿ ಆದೇಶ ನೀಡುವಂತೆ, ರಜಾ ದಿನಗಳ 2017ರ ಅಕ್ಟೋಬರ್ 31ಕ್ಕಿಂತ ಮೊದಲಿನ ಎಲ್ಲ ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಏಕಕಾಲಕ್ಕೆ ಅನುಮೋದನೆ ನೀಡುವಂತೆ, ಇಎಫ್‌ಎಂ–ಎಸ್‌ಗಿಂತ ಮೊದಲಿನ ಬಾಕಿ ನಿಂತ ವೇತನ ಕರವಸೂಲಾತಿಯಲ್ಲಿ ಶೇ. 40ರಷ್ಟು ಸಿಬ್ಬಂದಿ ವೇತನ ಮಾಡುವಂತೆ ಅವರು ಒತ್ತಾಯಿಸಿದರು.

# ಮತದಾರ ಪಟ್ಟಿ ಪರಿಷ್ಕರಣೆಗೆ ಎಲ್ಲರ ಸಹಕಾರ ಅಗತ್ಯ: ಬೋಸರಾಜು

**ರಾಯಚೂರು, ಜು. 6:** ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ದೇಶದ ಭವಿಷ್ಯ ನಿರ್ಧರಿಸುವ ಪವಿತ್ರ ಕರ್ತವ್ಯವಾಗಿದೆ. ಜಿಲ್ಲೆಯ ಎಲ್ಲ ಅರ್ಹ ಮತದಾರರು ತಮ್ಮ ತಮ್ಮ ಹೆಸರನ್ನು ಈ ಪರಿಷ್ಕರಣೆಯ ಮತದಾರ ಪಟ್ಟಿಯಲ್ಲಿ ಕಡ್ಡಾಯವಗಿ ನೋಂದಾಯಿಸಿ ಕೊಳ್ಳಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ ಎಂದು ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಎನ್.ಎಸ್.ಬೋಸರಾಜು ಅಚಿವರು ಹೇಳಿದರು.

ವಿಶೇಷ ಮತದಾರರ ತೀವ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯಕ್ರಮದ ಅಂಗವಾಗಿ ರಾಯಚೂರಿನ ಅರಬ್ ಮೊಹಲ್ಲಾ, ಸಿಯಾತಲಾಬ್ ಸೇರಿದಂತೆ ವಿವಿಧ ಬಡಾವಣೆಗಳಿಗೆ ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಎನ್.ಎಸ್. ಬೋಸರಾಜು ಮತ್ತು ಸಂಸದ ಕುಮಾರ ನಾಯಕರು ಭಾಗವಹಿಸಿ ಮತ ಪರಿಷ್ಕರಣೆ ಬಗ್ಗೆ ವಿವರಿಸಿ ಜಾಗೃತಿ ಮೂಡಿಸಿದರು.

ನಿನ್ನೆ ನಾನು ಈ ಮತದಾರ ಪರಿಷ್ಕರಣೆಯಲ್ಲಿ ಭಾಗವಹಿಸಿ, ನನ್ನ ಎಲ್ಲಾ ವಿವರಗಳೊಂದಿಗೆ ಫಾರಂ ಭರ್ತಿ ಮಾಡಿ ಸ್ವವಿವರ ನೀಡಿದ್ದೇನೆ. ಯಾರೂ ಸಹ ಈ ಪ್ರಕ್ರಿಯೆಯಿಂದ ದೂರ ಉಳೀಯಬಾರದು. ಅರ್ಹರಿಗೆ ಗ್ಯಾರಂಟಿ ಯೋಜನೆಗಳು ತಲುಪಲು ಈ ಮತದಾರ ಪಟ್ಟಿ ಪರಿಷ್ಕರಣೆ ತುಂಬಾ ಅಗತ್ಯವಾಗಿದೆ ಎಂದು ಮತದಾರರಿಗೆ ಎನ್‌ಎಸ್ ಬೋಸರಾಜು ಮನವರಿಕೆ ಮಾಡಿದರು.

ಪ್ರತಿಯೊಬ್ಬ ಅರ್ಹ ನಾಗರಿಕನ ಹೆಸರು ಮತದಾರರ ಪಟ್ಟಿಯಲ್ಲಿ ಸರಿಯಾಗಿ ದಾಖಲಿಸಬೇಕು. ಮತದಾರರ ಹೆಸರು ಸೇರ್ಪಡೆ, ವಿಳಾಸ ಬದಲಾವಣೆ, ತಿದ್ದುಪಡಿ, ವಯಸ್ಸು ಮತ್ತು ಗುರುತಿನ ವಿವರಗಳ ಪರಿಶೀಲನೆ ಸೇರಿದಂತೆ ಎಲ್ಲ ಮಾಹಿತಿಯೂ ಸರಿಯಾಗಿ ನೀಡಬೇಕು ಎಂದು ತಿಳಿಸಿದರು.

ಅಗತ್ಯ ದಾಖಲೆಗಳನ್ನು ಸಮಯಕ್ಕೆ ಸರಿಯಾಗಿ ಸಲ್ಲಿಸುವುದು, ಬೂತ್ ಮಟ್ಟದ ಅಧಿಕಾರಿಗಳೊಂದಿಗೆ ಸಹಕರಿಸುವುದು ಮತ್ತು ಯಾವುದೇ ತಪ್ಪು ಮಾಹಿತಿ ಕಂಡುಬಂದರೆ ತಕ್ಷಣ ಸರಿಪಡಿಸಿಕೊಳ್ಳುವುದು ಅತ್ಯಂತ ಮುಖ್ಯ. ಈ ಪ್ರಕ್ರಿಯೆಯಲ್ಲಿ ಬಿಎಲ್ ಓ ಹಾಗೂ ಬಿಎಲ್‌ಎಗಳ ಸಮನ್ವಯತೆ ಮುಖ್ಯವಾಗಿದೆ ಎಂದು ತಿಳಿಸಿದರು.

ಮತದಾರರ ಪಟ್ಟಿಯಲ್ಲಿ ಅರ್ಹ ನಾಗರಿಕರ ಹೆಸರು ಕೈಬಿಡದಂತೆ ಮನೆಮನೆಗೆ ತೆರಳಿ ಜಾಗೃತಿ ಮೂಡಿಸುವ ಕೆಲಸವನ್ನು ಕಾರ್ಯಕರ್ತರು, ಬೂತ್ ಏಜೆಂಟ್‌ಗಳು ಹಾಗೂ ಸಂಬಂಧಿತ ಅಧಿಕಾರಿಗಳು ಸಮನ್ವಯದಿಂದ ಕೈಗೊಳ್ಳಬೇಕು ಎಂದು ಕರೆ ನೀಡಿದರು.

ವಿಶೇಷವಾಗಿ ಯುವ ಮತದಾರರು, ಮಹಿಳೆಯರು, ವಲಸೆ ಬಂದವರು ಮತ್ತು ಹೊಸದಾಗಿ ಮತದಾನದ ಅರ್ಹತೆ ಪಡೆದಿರುವವರು ತಮ್ಮ ಹೆಸರು, ವಿಳಾಸ ಮತ್ತು ಇತರ ವಿವರಗಳನ್ನು ಪರಿಶೀಲಿಸಿ ಅಗತ್ಯವಿದ್ದರೆ ತಕ್ಷಣ ನೋಂದಾಯಿಸಿ ಕೊಳ್ಳಬೇಕು ಎಂದು ಮನವಿ ಮಾಡಿದರು.

ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದವರು, ತಪ್ಪು ದಾಖಲೆ ಹೊಂದಿರುವವರು ಅಥವಾ ಸ್ಥಳಾಂತರಗೊಂಡವರು ನಿರ್ಲಕ್ಷ್ಯ ಮಾಡದೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಮತದಾರರ ಪಟ್ಟಿಯ ಶುದ್ಧೀಕರಣ ಕಾರ್ಯ ಯಶಸ್ವಿಯಾಗಲು ಸಾರ್ವಜನಿಕರು, ಪಕ್ಷದ ಕಾರ್ಯಕರ್ತರು ಮತ್ತು ಅಧಿಕಾರಿಗಳು ಒಟ್ಟಾಗಿ ಕೆಲಸ ಮಾಡಬೇಕು. ಯಾವುದೇ ಅರ್ಹ ಮತದಾರರನ್ನು ಕೈಬಿಡದಂತೆ ಎಲ್ಲರೂ ಜಾಗರೂಕರಾಗಿರಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಜಯಣ್ಣ, ಕೆ ಶಾಂತಪ್ಪ, ಮೊಹ್ಮದ್ ಶಾಲಂ, ಜಯವಂತರಾವ್ ಪತಂಗೆ, ಯುಸೂಫ ಖಾನ್, ಜಿಂದಪ್ಪ, ದೇವರಾಜ್, ತಿಮ್ಮಪ್ಪ ಬಿಲ್ ಒ, ಬೂತ್ ಮಟ್ಟದ ಏಜೆಂಟ್‌ಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.


ರಾಯಚೂರು ನಗರದ ಅರಬ್ ಮೊಹಲ್ಲಾ, ಸಿಯಾತಲಾಬ್ ಸೇರಿದಂತೆ ಇತರ ಬಡಾವಣೆಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ವಿಧಾನ ಪರಿಷತ್ ಸದ್ಯ ಎನ್.ಎಸ್.ಬೋಸರಾಜು ಮತ್ತು ಸಂಸದ ಜಿ.ಕುಮಾರ ನಾಯಕ ಭೇಟಿ ನೀಡಿ ಜನರಲ್ಲಿ ಜಾಗೃತಿ ಮೂಡಿಸಿದರು.

# ಲಿಂಗಾನಂದ ಸ್ವಾಮೀಜಿಯಿಂದ ನಾಡಿನಲ್ಲಿ ಬಸವ ತತ್ವದ ಪ್ರಸಾರ: ಸಿದ್ದವೀರ

**ಬೀದರ್, ಜು. 6:** ಬಸವ ಧರ್ಮ ಪೀಠದ ಮೊದಲ ಪೀಠಾಧಿಪತಿ ಲಿಂಗೈಕ್ಯ ಲಿಂಗಾನಂದ ಸ್ವಾಮೀಜಿಯವರ ಅವಿರತ ಪರಿಶ್ರಮದಿಂದ ನಾಡಿನಾದ್ಯಂತ ಬಸವತತ್ವದ ಪ್ರಚಾರ ಮತ್ತು ಪ್ರಸಾರವಾಗಲು ಸಾಧ್ಯವಾಯಿತು ಎಂದು ರಾಷ್ಟ್ರೀಯ ಬಸವ ದಳದ ಯುವ ಮುಖಂಡ ಸಿದ್ದವೀರ ಸಂಗಮದ ತಿಳಿಸಿದರು.

ಯುವ ರಾಷ್ಟ್ರೀಯ ಬಸವ ದಳ ಹಾಗೂ ಮಾತೆ ಮಹಾದೇವಿ ಬಸವ ಬಳಗದ ಸಹಯೋಗದಲ್ಲಿ ನಗರದಲ್ಲಿ ಏರ್ಪಡಿಸಿದ್ದ 'ಲಿಂಗಾನಂದ ಸ್ವಾಮೀಜಿಯವರ ಸಂಸ್ಮರಣೋತ್ಸವ' ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ, ಮಾತನಾಡಿದರು.

'ತಾಳೆಗರಿಗಳಲ್ಲಿ ಬರೆದಿದ್ದ ವಚನಗಳನ್ನು ಸಂಗ್ರಹಿಸಿ, ಅವುಗಳನ್ನು ಮುದ್ರಿಸಿ ಜನರಿಗೆ ತಲುಪಿಸಿದ ಕಾರ್ಯ ವಚನ ಪಿತಾಮಹ ಫ. ಗು. ಹಳಕಟ್ಟಿ ಮಾಡಿದರೆ, ಲಿಂಗಾನಂದ ಸ್ವಾಮೀಜಿಯವರು ನಾಡಿನಾದ್ಯಂತ ಸಂಚರಿಸಿ, ಆ ವಚನಗಳನ್ನು ಜನಸಾಮಾನ್ಯರಿಗೆ ತಲುಪಿಸಿದರು. ರಾಜ್ಯದಲ್ಲಿ ಮೊದಲ ಮಹಿಳಾ ಪೀಠ ಸ್ಥಾಪಿಸಿ, ಅದಕ್ಕೆ ಜಗದ್ಗುರು ನೇಮಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

12ನೇ ಶತಮಾನದಲ್ಲಿ ಕಲ್ಯಾಣ ಕ್ರಾಂತಿ ನಡೆದ ನಂತರ ನೂರಾರು ಶರಣರ ಹತ್ಯೆ ಮಾಡಲಾಗಿತ್ತು. ವಚನ ಸಾಹಿತ್ಯವನ್ನು ಹಾಳುಗೆಡುವ ಪ್ರಯತ್ನ ಮಾಡಲಾಗಿತ್ತು. ಚದುರಿ ಹೋಗಿದ್ದ ವಚನ ಸಾಹಿತ್ಯವನ್ನು ಸಂಗ್ರಹಿಸಿ, ಸಾಲ ಮಾಡಿ ಅದನ್ನು ಹಳಕಟ್ಟಿಯವರು ಪ್ರಕಟಿಸಿದರು. ಅವುಗಳನ್ನು ಆಳವಾಗಿ ಅಧ್ಯಯನ ಮಾಡಿ, ಹಳ್ಳಿ ಹಳ್ಳಿಗಳಿಗೆ ಓಡಾಡಿ ಪ್ರಚಾರ ಮಾಡಿದವರು ಲಿಂಗಾನಂದ ಸ್ವಾಮೀಜಿ. ಅವರ ಶ್ರಮದಿಂದ ಇಂದು ಎಲ್ಲರೂ ವಚನ ಸಾಹಿತ್ಯದ ಬಗ್ಗೆ ತಿಳಿಯುವಂತಾಗಿದೆ ಎಂದು ನುಡಿದರು. ರವಿ ಪಾಪಡೆ ನಿರೂಪಿಸಿದರು. ಯುವ ರಾಷ್ಟ್ರೀಯ ಬಸವ ದಳದ ಜಿಲ್ಲಾಧ್ಯಕ್ಷ ಗಣೇಶ ಬಿರಾದಾರ ವಂದಿಸಿದರು. ಸಿದ್ರಾಮ ಶಟಕಾರ, ಅರವಿಂದ ಕಾರಬಾರಿ, ಜಗನ್ನಾಥ ಶೆಟಕಾರ, ರಾಜಕುಮಾರ ಪಾಟೀಲ, ಸಂಗಶೆಟ್ಟಿ ಶೆಟಕಾರ, ಅರವಿಂದ ಧುಮ್ಮನಸೂರೆ, ನಾಗರಾಜ ಬಗದಲ್ ಹಾಜರಿದ್ದರು.


ಬೀದರ ನಗರದಲ್ಲಿ ಯುವ ರಾಷ್ಟ್ರೀಯ ಬಸವ ದಳ ಹಾಗೂ ಮಾತೆ ಮಹಾದೇವಿ ಬಸವ ಬಳಗದ ಸಹಯೋಗದಲ್ಲಿ ಏರ್ಪಡಿಸಿದ್ದ 'ಲಿಂಗಾನಂದ ಸ್ವಾಮಿಜಿ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಲಿಂಗಾನಂದ ಸ್ವಾಮೀಜಿ ಭಾವಚಿತ್ರಕ್ಕೆ ರಾಷ್ಟ್ರೀಯ ಬಸವ ದಳದ ಯುವ ಮುಖಂಡ ಸಿದ್ದವೀರ ಸಂಗಮದ ಅವರು ಪುಷ್ಪನಮನ ಸಲ್ಲಿಸಿ ಮಾತನಾಡಿದರು.

# ಬೀದರ್ ಜಿಲ್ಲೆಯಲ್ಲಿ ವಿಬಿ ಜಿರಾಮ್ ಜಿ 125 ದಿನ ಉದ್ಯೋಗಾವಕಾಶ ಭರವಸೆ; ಸಿಇಓ ಡಾ.ಗಿರೀಶ್ ಬದೋಲೆ



ಬೀದರ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲೆಯ ಎಲ್ಲಾ ಅನುಷ್ಠಾನ ಅಧಿಕಾರಿಗಳು, ಪಿಡಿಓಗಳು ಹಾಗೂ ತಾಂತ್ರಿಕ ಸಿಬ್ಬಂದಿಗೆ ಒಂದು ದಿನದ ವಿಬಿ ಜಿ ರಾಮ್‌ಜಿ ಯೋಜನೆ ಜಿಲ್ಲಾಮಟ್ಟದ ತರಬೇತಿ ಕಾರ್ಯಾಗಾರವನ್ನು ಜಿಪಂ ಸಿಇಓ ಡ.ಗಿರೀಶ್ ಬದೋಲೆ ಉದ್ಘಾಟಿಸಿದರು.

**ಬೀದರ್, ಜು.6:** ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ 'ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್‌ಗಾರ್ ಆಂಡ್ ಆಜೀವಿಕಾ ಮಿಷನ್' (ಗ್ರಾಮೀಣ) ವಿಬಿಜಿರಾಮ್‌ಜಿ ಯೋಜನೆಯಡಿ ಅರ್ಹ ಗ್ರಾಮೀಣ ಅಕುಶಲ ಕುಟುಂಬಕ್ಕೆ ವರ್ಷಕ್ಕೆ 125 ದಿನಗಳ ಕಡ್ಡಾಯ ಉದ್ಯೋಗಾವಕಾಶ ಕಲ್ಪಿಸಲಾಗುವುದು ಎಂದು ಜಿಲ್ಲಾ ಪಂಚಾಯಿತಿ ಸಿಇಓ ಡಾ.ಗಿರೀಶ್ ಬದೋಲೆ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲೆಯ ಎಲ್ಲಾ ಅನುಷ್ಠಾನ ಅಧಿಕಾರಿಗಳು, ಪಿಡಿಓಗಳು ಹಾಗೂ ತಾಂತ್ರಿಕ ಸಿಬ್ಬಂದಿಗೆ ಒಂದು ದಿನದ ವಿಬಿ ಜಿ ರಾಮ್‌ಜಿ ಯೋಜನೆ ಜಿಲ್ಲಾಮಟ್ಟದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ವಿಬಿ ಜಿ ರಾಮ್‌ಜಿ ಯೋಜನೆ ಜು.1ರಿಂದ ಜಿಲ್ಲೆಯಾದ್ಯಂತ ಅನುಷ್ಠಾನ ಗೊಂಡಿದೆ. ಸಮಗ್ರ ಡಿಜಿಟಲ್ ವ್ಯವಸ್ಥೆ ಮೂಲಕ ಆಡಳಿತ ಹೊಣೆಗಾರಿಕೆ ಮತ್ತು ನಾಗರಿಕರ ಪಾಲ್ಗೊಳ್ಳುವಿಕೆ ಯನ್ನು ಹೆಚ್ಚಿಸುವುದು ಯೋಜನೆಯ ಉದ್ದೇಶ. ಕೃಷಿ ಚಟುವಟಿಕೆಯ ಸಂದರ್ಭದಲ್ಲಿ ಕೃಷಿ ಕಾರ್ಮಿಕರ ಸಮರ್ಪಕ ಲಭ್ಯತೆಗೆ ಸುಗವ ುಗೊಳಿಸಲು ಯೋಜನೆಯಡಿ 60 ದಿನಗಳ ಕಾಲ ವಿರಾಮ ನೀಡುವ ವಿಶೇಷ ವ್ಯವಸ್ಥೆ ಮಾಡಲಾಗಿದೆ ಎಂದರು. ವಿಬಿ ಜಿ ರಾಮ್ ಜಿ ಯಶಸ್ವಿಯಾಗಿ ಅನುಷ್ಠಾನಕ್ಕೆ ರೂಪುರೇಷೆ ಸಿದ್ಧಪಡಿಸಿಲಾಗಿದೆ. ಯೋಜನೆಯಡಿ ಅಧಿಕಾರಿಗಳು ಗ್ರಾಮೀಣ ಜನರಿಗೆ ಉದ್ಯೋಗ ಕಲ್ಪಿಸುವುದರ ಜತೆಗೆ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಕೈಗೆತ್ತಿಕೊಳ್ಳಬೇಕು ಎಂದು ಸೂಚಿಸಿದರು.

ವಿಬಿ ಜಿ ರಾಮ್ ಜಿ ಯೋಜನೆಯ ಅನುಷ್ಠಾನ ಕುರಿತು ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಾದ ಸಹಾಯಕ ಕಾರ್ಯದರ್ಶಿ ಬೀರೇಂದ್ರ್ ಸಿಂಗ್ ಠಾಕೂರ್ ಮತ್ತು ಸಹಾಯಕ ನಿರ್ದೇಶಕ ಸುದೇಶ್, ಮಲ್ಲೇಶ್ ತರಬೇತಿ ನೀಡಿ ಮಾತನಾಡಿದರು.

ಉಪ ಕಾರ್ಯದರ್ಶಿ ಶರಣಬಸಪ್ಪಕೋಟೆಪ್ಪಗೋಳ, ದೀಪಿಕಾ, ಕೋಮಲ, ಎಂಐಎಸ್ ಜಿಲ್ಲಾ ಸಂಯೋಜಕ ಕಿರಣ, ಐಇಸಿ ರಜನಿಕಾಂತ ಶರ್ಮಾ ಇದ್ದರು.

# ಜಿಲ್ಲಾಧಿಕಾರಿಯಿಂದ ಮತದಾರರ ಪಟ್ಟಿ ಪರಿಷ್ಕರಣೆ ಪರಿಶೀಲನೆ

ಬೀದರ, ಜು.6: ಜಿಲ್ಲೆಯಲ್ಲಿ ಕೈಕೊಮಡಿರುವ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ ಕಾರ್ಯಗಳ ಕುರಿತು, ಬೀದರ್ ತಾಲ್ಲೂಕಿನ ಹಮಿಲಾಪುರ ಗ್ರಾಮಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು, ಮತದಾರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಸ್ವತಃ ಪರಿಶೀಲಿಸಿದರು.

ಪರಿಶೀಲನೆಗೆ ನೇಮಿಸಿರುವ ಬಿಎಲ್‌ಓ ಅವರುಗಳು ನಡೆಸಿರುವ ಕಾರ್ಯದ ಕುರಿತು ಜಿಲ್ಲಾಧಿಕಾರಿ ಮನೆ ಮನೆಗೆ ಭೇಟಿ ಕೊಟ್ಟು ಸಾರ್ವಜನಿಕರೊಪಂದಿಗೆ ಸಮಾಲೋಚನೆ ನಡೆಸುವ ಮೂಲಕ ಎನ್ಯುಮರೇಷನ್ ಅರ್ಜಿ ನಮೂನೆ ವಿತರಿಸುವುದನ್ನು ವೀಕ್ಷಿಸಿದರು.

ಅರ್ಹರು ಮತದಾನದ ಹಕ್ಕಿನಿಂದ ವಂಚಿತರಾಗಬಾರದು. ಅನರ್ಹರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಬಾರದು. ಮತದಾರರ ಪಟ್ಟಿ ಪರಿಶುದ್ಧವಾಗಿರಬೇಕು ಎಂಬ ಕಾರಣಕ್ಕೆ ಈ ಪರಿಶೀಲನೆ ನಡೆಸಲಾಗುತ್ತಿದೆ. ಅರ್ಹರು ತಪ್ಪದೆ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬೇಕು ಎಂದು ತಿಳಿಸಿದರು.

ಅಧಿಕಾರಿಗಳು ಹಾಗೂ ಬಿ.ಎಲ್.ಓ.ಗಳು ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು. ಮತದಾರರಿಗೆ ಅರ್ಜಿ ಭರ್ತಿ ಮಾಡಲು ಎಲ್ಲ ರೀತಿಯಿಂದಲೂ ಸಹಕಾರ ನೀಡುವ ಮೂಲಕ, ಅವರಿಂದ ಯಾವುದೇ ತಪ್ಪು ನಡೆಯದಂತೆ ನೋಡಿಕೊಳ್ಳುವುದು ಬಿಎಲ್‌ಓಗಳ ಕರ್ತವ್ಯವಾಗಿದೆ ಎಂದು ಸೂಚಿಸಿದರು.

ದೋಷವಿಲ್ಲದ, ನಿಖರ ಪಟ್ಟಿ ತಯಾರಿಸುವುದು ಹಾಗೂ ಪಾರದರ್ಶಕತೆ ಕಾಯ್ದುಕೊಳ್ಳುವುದು ಮತದಾರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ ಮೂಲ ಉದ್ದೇಶವಾಗಿದೆ. ಈ ಮೂಲಕ ಉದ್ದೇಶ ಸಾರ್ಥಕವಾಗುವಂತೆ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಶಿವಾನಂದ ಕರಾಳೆ ಹಾಗೂ ಬೀದರ್ ಉಪ ವಿಭಾಗಾಧಿಕಾರಿ ಮುಹಮ್ಮದ್ ಶಕೀಲ್ ಅವರೂ ಈ ಸಂದರ್ಭದಲ್ಲಿ ಇದ್ದರು.


ಬೀದರ್‌ನಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ಪರಿಶೀಲನೆ ಕುರಿತು ತಾಲ್ಲೂಕಿನ ಹಮಿಲಾಪುರ ಗ್ರಾಮಕ್ಕೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಭೇಟಿ ನೀಡಿ ಪರಿಶೀಲಿಸಿದರು.

# ಮಸೀದ್, ಮದರಸಾ, ಶಾದಿ ಮಹಲ್‌ಗಳಲ್ಲಿ ಎಸ್.ಐ.ಆರ್ ಪರಿಷ್ಕರಣೆ, ಬಿಎಲ್‌ಓಗಳನ್ನು ಬಂಧಿಸಲು ಮಾಜಿ ಸಚಿವ ಶ್ರೀರಾಮುಲು ಆಗ್ರಹ

**ಬಳ್ಳಾರಿ, ಜು.6:** ಮನೆ ಮನೆಗೆ ಹೋಗದೆ, ಎಲ್ಲಂದರಲ್ಲಿ ಮಸೀದಿ,ಶಾದಿ ಮಹಲ್, ದರ್ಗಾ, ಮದರಸಾ, ಮೊಹಲ್ಲಾಗಳಲ್ಲಿ ಗುಂಪಾಗಿ ಕುಳಿತು,ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್)ಯ ಎನ್ಯುಮರೇಷನ್ ಪಾರಂ ತುಂಬುತ್ತಿದ್ದಾರೆ. ಇದು ನಿಯಮಗಳ ಉಲ್ಲಂಘನೆಯಾಗಿದೆ. ಅದಕ್ಕಾಗಿ ಇದರಲ್ಲಿ ಪಾಲ್ಗೊಂಡ ಬಿಎಲ್‌ಓಗಳನ್ನು ತಕ್ಷಣ ಬಂಧಿಸಬೇಕು. ನಗರದ ತಮ್ಮ ನಿವಾಸದಲ್ಲಿ ಸುದ್ದಿ ಗೋಷ್ಟಿಯಲ್ಲಿ ಮಾತನಾಡುತ್ತಿದ್ದರು. ರಾಜ್ಯದಲ್ಲಿ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅಣತಿಯಂತೆ ಎಸ್ ಐ ಆರ್ ನಡೆಸುತ್ತಿರುವ ಅಧಿಕಾರಿಗಳು ಅವರು ಹೇಳಿದಂತೆ ಮಾಡುತ್ತಿದ್ದಾರೆ ಎಂದು ಮಾಜಿ ಸಚಿವ ಶ್ರೀರಾಮುಲು ಆರೋಪಿಸಿದ್ದಾರೆ.

ಅದಕ್ಕಾಗಿ ಎಸ್ ಐ ಆರ್ ನ್ನು ದಿಕ್ಕುತಪ್ಪಿಸುವ ಕೆಲಸ ನಡೆದಿದೆ. ಅದಕ್ಕಾಗಿ ಈವರೆಗಿನ ಎಸ್ ಐ ಆರ್ ಪ್ರಕ್ರಿಯೆ ರದ್ದು ಮಾಡಿ ಚುನಾವಣಾ ಆಯೋಗ ಮಧ್ಯ ಪ್ರವೇಶ ಮಾಡಿ ಕಟ್ಟು ನಿಟ್ಟಿನಲ್ಲಿ ಆಗಬೇಕು ಎಂದರು. ಅಕ್ರಮ ಬಾಂಗ್ಲಾ ವಲಸಿಗರು ಪಶ್ಚಿಮ ಬಂಗಾಳ, ಬಿಹಾರ ಮುಂತಾದ ರಾಜ್ಯಗಳಿಂದ ಹೊರ ಬಿದ್ದವರು ಈಗ ಕರ್ನಾಟಕದಲ್ಲಿ ಆಶ್ರಯಪಡೆದಿದ್ದು. ಅವರಿಗೆ ಕಾಂಗ್ರೆಸ್ ವಾಸ್ತವ್ಯ ನೀಡುತ್ತಿದೆಂದು ಆರೋಪಿಸಿದರು.

ಚುನಾವಣೆಯನ್ನು ಅಕ್ರಮವಾಗಿ ಬೋಗಸ್ ಓಟರ್ ನಿಂದ ಗೆಲ್ಲಲ್ಲು ಈಗಿನಿಂದಲೇ ಪ್ರಯತ್ನ ನಡೆದಿದೆ ಇದನ್ನು ಖಂಡಿಸುವೆ ಎಂದರು. ಈಗಲೂ ನಾನು ಬದ್ದನಾಗಿದ್ದೇನೆ ಕೌಲ್ ಬಜಾರ್ ಪ್ರದೇಶದಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಇದ್ದಾರೆ. ಅದನ್ನು ಪತ್ತೆಹಚ್ಚುವ ಕೆಲಸ ಮಾಡಬೇಕು ಎಂದರು.

ಬಿ.ಎಸ್.ವಿಜಯೇಂದ್ರ ಅವರು ಪ್ರಾಮಾಣಿಕವಾಗಿ ಪಕ್ಷ ಸಂಘಟನೆ ಮಾಡುತ್ತಿದ್ದಾರೆ. ಹೀಗಿರುವಾಗ ನಾನು ಪಕ್ಷದ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ ಎಂದರು. ಸುದ್ದಿಗೋಷ್ಟಿಯಲ್ಲಿ ಪಕ್ಷದ ಮುಖಂಡರುಗಳಾದ ಶ್ರೀನಿವಾಸ್ ಮೋತ್ಕರ್, ಕೆ.ಎಸ್.ಅಶೋಕ್, ಕೆ.ಹನುಮಂತಪ್ಪ, ಪಿ.ಪಾಲಣ್ಣ, ಓಬಳೇಶ, ಎಸ್.ಮಲ್ಲನಗೌಡ, ತಿಮ್ಮಪ್ಪ ಮೊದಲಾದವರು ಇದ್ದರು.




ಮುಂಗಾರು ಬಿರುಸು: ಸೋಮವಾರ ಹುಬ್ಬಳ್ಳಿಯಲ್ಲಿ ಉಣಕಲ್ ಕೆರೆ ತುಂಬಿ ಹರಿಯುತ್ತಿದೆ.

# ರಾತ್ರಿ ಕೈಕೊಟ್ಟ ಹೆಡ್‌ಲೈಟ್: ಮೊಬೈಲ್ ಟಾರ್ಚ್‌ನಲ್ಲಿ 84ಕಿ.ಮೀ. ಓಡಿದ ಸಾರಿಗೆ ಬಸ್..!




**ಕಲಬುರಗಿ, ಜು.6:** ಸಾಮಾನ್ಯವಾಗಿ ಮೊಬೈಲ್ ಟಾರ್ಚ್ ಅನ್ನು ಮನೆಗಳಲ್ಲಿ ರಾತ್ರಿ ವೇಳೆ ಕರೆಂಟ್ ಹೋದಾಗ, ತುರ್ತು ಸಂದರ್ಭಗಳಲ್ಲಿ ಕಳೆದುಹೋದ ವಸ್ತುಗಳನ್ನು ಹುಡುಕಲು, ಫೋಟೋ ಶೂಟ್ ವೇಳೆ ಬೆಳಕಿನ ಕೊರತೆ ನೀಗಿಸಲು ಬಳಸಲಾಗುತ್ತದೆ. ಆದರೆ ಇದೀಗ ಇದನ್ನು ಸಾರಿಗೆ ಬಸ್ ಚಾಲನೆಗಾಗಿ ಬಳಕೆ ಮಾಡಿದ ಘಟನೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಕಲಬುರಗಿ ಜಿಲ್ಲೆಯಲ್ಲಿ ನಡೆದಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗಿದ್ದು, ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಿದೆ.

ಜಿಲ್ಲೆಯ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್‌ವೊಂದರ ದುಃಸ್ಥಿತಿ ಸಾರ್ವಜನಿಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ರಾತ್ರಿ ವೇಳೆಯಲ್ಲಿ ಸಾರಿಗೆ ಸಂಸ್ಥೆಯ ಬಸ್‌ನ ಹೆಡ್‌ಲೈಟ್ ಕೆಲಸ ಮಾಡದ ಕಾರಣ, ಬಸ್ ಚಾಲಕನಿಗೆ ದಾರಿ ಕಾಣಿಸಲು ಕಂಡಕ್ಟರ್ ತನ್ನ ಮೊಬೈಲ್ ಫೋನ್‌ನ ಟಾರ್ಚ್ ಬಳಸಿದ ಘಟನೆ ಬೆಳಕಿಗೆ ಬಂದಿದ್ದು, ಇದರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದೆ.

ಘಟನೆಯ ಹಿನ್ನೆಲೆ : ಮಾಹಿತಿಯ ಪ್ರಕಾರ ಕಲಬುರಗಿ ನಗರದಿಂದ ಸುಮಾರು 84 ಕಿಲೋ ಮೀಟರ್ ದೂರದ ಚಿಂಚೋಳಿ ಪಟ್ಟಣಕ್ಕೆ ತೆರಳುತ್ತಿದ್ದ ಸಾರಿಗೆಯ ಕೊನೆಯ ಬಸ್‌ನಲ್ಲಿ ಈ ಘಟನೆ ನಡೆದಿದೆ. ಸಂಪೂರ್ಣ ಕತ್ತಲಾದ ರಸ್ತೆಯಲ್ಲಿ ಬಸ್‌ನ ಹೆಡ್‌ಲೈಟ್‌ಗಳು ಕಾರ್ಯನಿರ್ವಹಿಸುತ್ತಿರಲಿಲ್ಲ. ಇಂತಹ ಅಪಾಯಕಾರಿ ಪರಿಸ್ಥಿತಿಯಲ್ಲೂ ಪ್ರಯಾಣವನ್ನು ಅರ್ಧಕ್ಕೆ ನಿಲ್ಲಿಸದ ಸಿಬ್ಬಂದಿ, ವಿಭಿನ್ನ ಹಾದಿ ಹಿಡಿದಿದ್ದಾರೆ. ನಿರ್ವಾಹಕನು ಚಾಲಕನ ಪಕ್ಕದಲ್ಲಿ ಕುಳಿತು ಮೊಬೈಲ್‌ನ ಟಾರ್ಚ್ ಆನ್ ಮಾಡಿ ಮುಂಭಾಗದ ರಸ್ತೆಗೆ ಬೆಳಕು ತೋರಿದ್ದಾರೆ. ಈ ಬೆಳಕಿನ ನೆರವಿನಿಂದಲೇ ಚಾಲಕ ಬಸ್ಸನ್ನು ಚಾಲನೆ ಮಾಡಿದ್ದಾರೆ.

ಪ್ರಯಾಣದ ಯಾವ ಹಂತದಲ್ಲಿ ಹೆಡ್‌ಲೈಟ್‌ಗಳು ಕೆಟ್ಟುಹೋದವು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೂ ಬಸ್‌ನಲ್ಲಿದ್ದ ಪ್ರಯಾಣಿಕರು ಜೀವ ಕೈಯಲ್ಲಿಡಿದು ಪ್ರಯಾಣ ಮುಂದುವರಿಸಬೇಕಾಯಿತು. ಬಸ್‌ನಲ್ಲಿದ್ದ ಪ್ರಯಾಣಿಕರೊಬ್ಬರು ಈ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಇದು ಇದೀಗ ಎಲ್ಲೆಡೆ ಭಾರಿ ಚರ್ಚೆಗೆ ಕಾರಣವಾಗಿದೆ.

ದಿನನಿತ್ಯ ಇದೇ ಸಮಸ್ಯೆ: ಕೆಲವು ಸ್ಥಳೀಯ ಮೂಲಗಳ ಪ್ರಕಾರ ಈ ಬಸ್‌ನ ಹೆಡ್‌ಲೈಟ್ ಕೆಟ್ಟು ಹಲವು ದಿನಗಳೇ ಕಳೆದಿವೆ. ಈ ಬಗ್ಗೆ ಡಿಪೋದ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ಇದ್ದರೂ ಸೂಕ್ತ ಕ್ರಮ ಕೈಗೊಂಡಿಲ್ಲ. ಪರಿಣಾಮವಾಗಿ ಪ್ರತಿದಿನ ರಾತ್ರಿ ಇದೇ ರೀತಿ ಮೊಬೈಲ್ ಟಾರ್ಚ್ ಸಹಾಯದಿಂದಲೇ ಈ ಮಾರ್ಗದಲ್ಲಿ ಬಸ್ ಚಲಾಯಿಸಲಾಗುತ್ತಿದೆ ಎಂಬ ಆರೋಪಗಳು ಕೇಳಿಬಂದಿವೆ. ಈ ವಾದ ನಿಜವೇ ಆದಲ್ಲಿ ಇದು ಪ್ರಯಾಣಿಕರ ಪ್ರಾಣದೊಂದಿಗೆ ನಿಗಮವು ಆಟ ಆಡುತ್ತಿದೆ ಎಂದು ಹೇಳಲಾಗುತ್ತದೆ.

ಸಾರ್ವಜನಿಕರ ಆಕ್ರೋಶ: ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದತೆ ನೆಟ್ಟಿಗರು ಮತ್ತು ಸಾರ್ವಜನಿಕರು ಸಾರಿಗೆ ಸಂಸ್ಥೆಯ ನಿರ್ವಹಣೆಯ ಲೋಪಗಳ ವಿರುದ್ಧ ತೀವ್ರ ಆಕ್ರೋಶ ಹೊರಹಾಕಿದ್ದಾರೆ. ರಸ್ತೆಗಳಲ್ಲಿ ಹೆಡ್‌ಲೈಟ್ ಇಲ್ಲದೆ ವಾಹನ ಓಡಿಸುವುದು ದೊಡ್ಡ ಅಪಘಾತಗಳಿಗೆ ಆಹ್ವಾನ ನೀಡಿದಂತೆ ಎಂದು ಸಾರಿಗೆ ಇಲಾಖೆಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಹಲವರು ಚಾಲಕ ಮತ್ತು ನಿರ್ವಾಹಕರ ಈ ಅಪರೂಪದ ಸಹಕಾರಕ್ಕೆ ಪ್ರಶಸ್ತಿ ನೀಡಬೇಕೇ ಅಥವಾ ಶಿಕ್ಷಿಸಬೇಕೇ ಸಾರಿಗೆ ಸಚಿವರೇ?, ಎಂದು ವ್ಯಂಗ್ಯವಾಡಿದ್ದಾರೆ.

ಮತ್ತೊಂದೆಡೆ ಈ ಘಟನೆಯನ್ನು ಮುಂದಿಟ್ಟುಕೊಂಡು ಹಲವರು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಕಲಬುರಗಿಯಿಂದ ಚಿಂಚೋಳಿಗೆ ಸಂಚರಿಸುವ ಬಸ್ಸಿನಲ್ಲಿ ಹೆಡ್‌ಲೈಟ್ ಇಲ್ಲದೆ ಮೊಬೈಲ್ ಟಾರ್ಚ್ ಬೆಳಕಿನಲ್ಲಿ ಪ್ರಯಾಣಿಸುವ ದುಸ್ಥಿತಿ ನಿರ್ಮಾಣ ಆಗಿರುವುದು ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಆಡಳಿತದ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ತಮ್ಮ ಅಧಿಕೃತ ಟ್ವಿಟರ್ ಖಾತೆಯಲ್ಲಿ ಆಕ್ರೋಶ ಹೊರಹಾಕಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಸಾರಿಗೆ ನಿಗಮದ ಉನ್ನತ ಅಧಿಕಾರಿಗಳಿಂದ ಅಧಿಕೃತ ತನಿಖೆ ಹಾಗೂ ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಉತ್ತಮ ಮಳೆ, ಬೆಳೆಗಾಗಿ ಆದಿದೇವತೆ ಕನಕ ದುರ್ಗಮ್ಮನ ಮೊರೆಹೋದ ಗ್ರಾಮೀಣ ಶಾಸಕ ನಾಗೇಂದ್ರ



**ಬಳ್ಳಾರಿ, ಜು.06:** ಮಳೆಗಾಗಿ ಪ್ರಾರ್ಥಿಸಿ ನಗರದ ದುರ್ಗಮ್ಮ ದೇವಸ್ಥಾನದಲ್ಲಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರ ಬೆಂಬಲಿಗರು ವರುಣ ಯಾಗ ನಡೆಸಿದರು.

ವೇಂಯರ್ ಗಾದೆಪ್ಪ, ನಾಗೇಂದ್ರ ಅವರ ಸಹೋದರ ವೆಂಕಟೇಶ ಪ್ರಸಾದ್ ಸೇರಿದಂತೆ ಹಲವರು ಪಾಲ್ಗೊಂಡು

ತುಂಗಭದ್ರಾ ಜಲಾಶಯ ತುಂಬಲಿ ರೈತರ ಬದುಕು ಹಸನಾ ಗಲಿ ಎಂದು 108 ಬಾರಿ ಓಂ ವರು ಣಾಯ ನಮಃ ಎಂದು ಜಪದೊ0 ದಿಗೆ ಪ್ರಾರ್ಥಿಸಿದರು.

ಮುಂಗಾರು ಪ್ರಾರಂಭವಾಗಿ ತಿಂಗಳು ಕಳೆದ್ರೂ ನಿರೀಕ್ಷಿತ ಮಳೆ ಯಾಗಿಲ್ಲ.ತುಂಗಭದ್ರಾ ಜಲಾಶಯಕ್ಕೆ ಅಗತ್ಯ. ನೀರು ಹರಿದು ಬರುತ್ತಿಲ್ಲ. ಹೀಗಾಗಿ ಮಾಜಿ ಸಚಿವ ನಾಗೇಂದ್ರ ಬೆಂಬಲಿಗರು ದೇವರ ಮೊರೆ ಇಟ್ಟರು.

ಶಾಸಕ ನಾಗೇಂದ್ರ ಸೂಚನೆ ಮೇರೆಗೆ ವಿಶೇಷ ಹೋಮ ಹವನ ಮಾಡುವ ಮೂಲಕ ವಿಶೇಷ ಪೂಜೆ ಮಾಡುವ ಮೂಲಕ ಮಳೆ ಗಾಗಿ ಪ್ರಾರ್ಥನೆ ಮಾಡಿದರು.

ಸದಾಕಾಲ ರೈತರ ಬದುಕು ಹಸನಾಗಿರಲಿ ಎಂಬ ಬಳ್ಳಾರಿ ಗ್ರಾಮಾಂ ತರ ಕ್ಷೇತ್ರದ ನೂರಾರು ರೈತರು ಅಭಿಮಾನಿಗಳು ಮಳೆಗಾಗಿ ನಡೆದ ಪೂಜೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರವರ ಆಡಳಿತಕ್ಕೆ ಯಾವುದೇ ಅಡ್ಡಿ ಆತಂಕಗಳು ಬರಬಾರದು ಎನ್ನುವುದು ಸೇರಿ ದಂತೆ ಮತ್ತೊಮ್ಮೆ ಶಾಸಕ ನಾಗೇಂದ್ರ ಮಂತ್ರಿಯಾಗಲಿ ಎಂದು ಸಹ ಹರಕೆ ಹೊತ್ತರು.

ಗಣಪತಿ ಹೋಮ, ನವಗ್ರಹ ಹೋಮದ ಜೊತೆಗೆ ವರುಣ ಯಾಗ ಮಾಡಿ ಮಳೆಯಾಗಿ ಜಲಾ ಶಯ ತುಂಬಲಿ ಎಂಬ ಹರಕೆ ಇವರದ್ದಾಗಿತ್ತು. ದುರ್ಗಮ್ಮ ದೇವಿಗೆ ಅಭಿಷೇಕ, ಕುಂಕುಮಾರ್ಚನೆ ಮಾಡಿ ವಿಶೇಷ ಪೂಜೆ ಮಾಡಲಾಯಿತು. ಈ ವೇಳೆ ಮಾತನಾಡಿದ ಶಾಸಕ ನಾಗೇಂದ್ರನವರ ಸಹೋದರ ವೆಂಕಟೇಶ ಪ್ರಸಾದ್ ಮಳೆ ಕೊರತೆಯಾದಾಗ ಪ್ರತಿ ಬಾರಿಯೂ ಈ ರೀತಿಯಲ್ಲಿ ವರುಣ ಯಾಗ ಮಾಡಿಸುವುದು ವಾಡಿಕೆ. ಯಾಗದ ಭಾಗವಾಗಿ ಪುಷ್ಕರಣಿಯಲ್ಲಿ ನೂರೆಂಟು ಬಾರಿ ವರುಣ ಜಪ ಮಾಡಲಾಯಿತು.ಬೇಡಿದ ವರ ನೀಡುವ ಗ್ರಾಮ ದೇವತೆಯಾದ ಕನಕ ದುರ್ಗಮ್ಮ ಉತ್ತಮ ಮಳೆ, ಬೆಳೆ ನೀಡುವಳು ಎಂದರು. ದುರ್ಗಮ್ಮ ರೈತರಿಗಾಗಿ ಮಳೆ, ನೀಡಲಿದ್ದಾಳೆ ಎಂದರು.

ಈ ಸಂದರ್ಭದಲ್ಲಿ ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗ ರಾಜ್, ವೆಂಕಟೇಶ್ ಹೆಗಡೆ,ತಿಮ್ಮನಗೌಡ, ಮಾಜಿಮೇಯರ್ ರಾಜೇಶ್ವರಿ, ಮುಲ್ಲಂಗಿ ನಂದೀಶ್, ಕನಕ ಮೊದಲಾದವರು ಇದ್ದರು.

# ಚೀನಾ ಜಲಾಂತರ್ಗಾಮಿ ನೌಕೆಯಿಂದ ಪೆಸಿಫಿಕ್‌ಗೆ ಬ್ಯಾಲಿಸ್ಟಿಕ್ ಕ್ಷಿಪಣಿ ಉಡಾವಣೆ

**ನವದೆಹಲಿ, ಜು.6:** ಚೀನಾದ ಸೇನೆಯು ಜುಲೈ 6, ಸೋಮವಾರ ಮಧ್ಯಾಹ್ನ 12:01 ಕ್ಕೆ ದಕ್ಷಿಣ ಪೆಸಿಫಿಕ್‌ನಲ್ಲಿರುವ ತನ್ನ ಪರಮಾಣು ಚಾಲಿತ ಜಲಾಂತರ್ಗಾಮಿ ನೌಕೆಗಳಲ್ಲಿ ಒಂದರಿಂದ ದೀರ್ಘ–ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಪರೀಕ್ಷಿಸಿದೆ. ಕ್ಷಿಪಣಿ ಪೆಸಿಫಿಕ್ ಮಹಾಸಾಗರದ "ನಿಗದಿತ ನೀರಿನಲ್ಲಿ" ಇಳಿಯಿತು. ಪ್ರಧಾನಿ ನರೇಂದ್ರ ಮೋದಿ ಇಂಡೋ–ಪೆಸಿಪಿಕ್‌ನಲ್ಲಿ ಭಾರತದ ಕಾರ್ಯತಂತ್ರದ ಹೆಜ್ಜೆಗುರುತನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ಇಂಡೋನೇಷ್ಯಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ಗೆ ಮೂರು ರಾಷ್ಟ್ರಗಳ ಭೇಟಿಯನ್ನು ಪ್ರಾರಂಭಿಸುತ್ತಿದ್ದಂತೆ, ಪಿಎಲ್‌ಎ ನೌಕಾಪಡೆಯಿಂದ ಬ್ಯಾಲಿಸ್ಟಿಕ್ ಕ್ಷಿಪಣಿಯ ಪರೀಕ್ಷೆಯು ಪ್ರವಾಸಕ್ಕೆ ಹೊಸ ಭೌಗೋಳಿಕ ರಾಜಕೀಯ ಮಹತ್ವವನ್ನು ಸೇರಿಸಿದೆ.

ಚೀನಾದ ಸರ್ಕಾರಿ ಮಾಧ್ಯಮಗಳು ಇದನ್ನು ನಕಲಿ ಸಿಡಿತಲೆಯೊಂದಿಗೆ ನಿಯಮಿತ ಮಿಲಿಟರಿ ವ್ಯಾಯಾಮ ಎಂದು ಬಣ್ಣಿಸಿದರೂ, ಈ ಪರೀಕ್ಷೆಯು ಗಮನ ಸೆಳೆಯಿತು ಏಕೆಂದರೆ ಇದು 1987 ರಲ್ಲಿ ಚೀನಾ ಅಂಗೀಕರಿಸಿದ ರಾರೋಟೊಂಗಾ ಒಪ್ಪಂದದ ಅಡಿಯಲ್ಲಿ ಸ್ಥಾಪಿಸಲಾದ ದಕ್ಷಿಣ ಪೆಸಿಫಿಕ್ ಪರಮಾಣು–ಶಸ್ತ್ರಾಸ್ತ್ರ–ಮುಕ್ತ ವಲಯದಲ್ಲಿ ಸಂಭವಿಸಿದೆ. ಚೀನಾದ ಕ್ಷಿಪಣಿ ಪರೀಕ್ಷೆಗಳು ಸಂಕೀರ್ಣವಾದ ಪ್ರಾದೇಶಿಕ ಚಲನಶೀಲತೆಯನ್ನು ಹೊಂದಿವೆ, ಚೀನಾ ಸ್ವತಃ 1987 ರಲ್ಲಿ ಅಂಗೀಕರಿಸಿದ ಒಪ್ಪಂದ.

ಬೀಜಿಂಗ್ ಔಪಚಾರಿಕವಾಗಿ ಗೌರವಿಸುವುದಾಗಿ ಪ್ರತಿಜ್ಞೆ ಮಾಡಿದ ವಲಯದ ಗಡಿಗಳನ್ನು ಪರೀಕ್ಷಿಸುತ್ತಿದೆ ಎಂಬ ಆರೋಪಗಳಿಗೆ ಇದು ಉತ್ತೇಜನ ನೀಡಿದೆ. ರಾರೋಟೊಂಗಾ ಒಪ್ಪಂದವು ದಕ್ಷಿಣ ಪೆಸಿಪಿಕ್‌ನಲ್ಲಿ ಪರಮಾಣು–ಶಸ್ತ್ರಾಸ್ತ್ರ–



ಮುಕ್ತ ವಲಯವನ್ನು ಸ್ಥಾಪಿಸುತ್ತದೆ. ಇದು ಪರಮಾಣು ಶಸ್ತ್ರಾಸ್ತ್ರಗಳ ಪರೀಕ್ಷೆ, ಸ್ವಾಧೀನ, ನಿಯೋಜನೆ ಮತ್ತು ಶಾಂತಿಯುತ ಪರಮಾಣು ಸ್ಫೋಟಗಳನ್ನು ನಿಷೇಧಿಸುತ್ತದೆ. ಇದು ವಿಕಿರಣಶೀಲ ತ್ಯಾಜ್ಯವನ್ನು ಸುರಿಯುವುದನ್ನು ನಿಷೇಧಿಸುತ್ತದೆ ಮತ್ತು ಪರಮಾಣು ಚಟುವಟಿಕೆಗಳ ಮೇಲೆ ಐಎಇಎ ಸುರಕ್ಷತಾ ಕ್ರಮಗಳನ್ನು ಬಯಸುತ್ತದೆ.

ಆಸ್ಟ್ರೇಲಿಯಾ "ಪೆಸಿಫಿಕ್ ಸಾಗರ" ಫಿಜಿಯೊಂದಿಗೆ ಹೊಸ ರಕ್ಷಣಾ ಒಪ್ಪಂದಕ್ಕೆ ಸಹಿಹಾಕಿದ ಅದೇ ದಿನ ಕ್ಷಿಪಣಿ ಪರೀಕ್ಷೆ ನಡೆಯಿತು. ಹಾರ್ಮುಜ್ ಜಲಸಂಧಿಯ ಸುತ್ತಲಿನ ಇತ್ತೀಚಿನ ಬಿಕ್ಕಟ್ಟಿನ ಪರಿಣಾಮಗಳನ್ನು ಅಂತರರಾಷ್ಟ್ರೀಯ ಸಮುದಾಯ ಇನ್ನೂ ನಿರ್ಣಯಿಸುತ್ತಿರುವಾಗ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಜಪಾನ್ ಉಡಾವಣೆಯನ್ನು ಖಂಡಿಸಿದವು. ಆಸ್ಟ್ರೇಲಿಯಾದ ವಿದೇಶಾಂಗ ಸಚಿವೆ ಪೆನ್ನಿ ವಾಂಗ್ ಇದನ್ನು ಬೀಜಿಂಗ್‌ನ ವಿಶಾಲ ಮಿಲಿಟರಿ ವಿಸ್ತರಣೆಗೆ ಲಿಂಕ್ ಮಾಡಿದ್ದಾರೆ, ಈ ಪರೀಕ್ಷೆಯು ಸಾಕಷ್ಟು ಪಾರದರ್ಶಕತೆಯ ಕೊರತೆಯಿರುವ "ಚೀನಾದ ತ್ವರಿತ ಮಿಲಿಟರಿ ಜಮಾವಣೆ"ಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು. ನ್ಯೂಜಿಲೆಂಡ್ ವಿದೇಶಾಂಗ ಸಚಿವ ವಿನ್ಸ್ಟನ್ ಪೀಟರ್ಸ್ ಈ ಪರೀಕ್ಷೆಯನ್ನು "ಅನುಕೂಲಕರ" ಎಂದು ಕರೆದರು ಮತ್ತು ಇದು "ದಕ್ಷಿಣ ಪೆಸಿಪಿಕ್‌ನಲ್ಲಿ ಪ್ರಾದೇಶಿಕ ಸ್ಥಿರತೆ ಮತ್ತು ಶಾಂತಿಗೆ ಹೊಂದಿಕೆಯಾಗುವುದಿಲ್ಲ" ಎಂದು ಹೇಳಿದರು, ಚೀನಾ ಇದನ್ನು "ವೆಲ್ಲಿಂಗ್ಟನ್‌ಗೆ ಮಾಹಿತಿ ನೀಡಿದ ಕೆಲವೇ ಗಂಟೆಗಳಲ್ಲಿ" ನಡೆಸಿತು ಎಂದು ಹೇಳಿದರು.

ಇಂಡೋ–ಪೆಸಿಫಿಕ್ ಜಾಗತಿಕ ಕಾರ್ಯತಂತ್ರದ ಸ್ಪರ್ಧೆಯ ಕೇಂದ್ರಬಿಂದುವಾಗಿದೆ, ಅಲ್ಲಿ ಇಂಧನ ಭದ್ರತೆ, ಕಡಲ ವ್ಯಾಪಾರ, ಮಿಲಿಟರಿ ಶಕ್ತಿ ಮತ್ತು ರಾಜತಾಂತ್ರಿಕತೆ ಹೆಚ್ಚಾಗಿ ಛೇದಿಸುತ್ತವೆ. ಇಂಡೋ–ಪೆಸಿಫಿಕ್ ವಿಶ್ವದ ಪ್ರಮುಖ ವ್ಯಾಪಾರ ಹೆದ್ದಾರಿಯಾಗಿದೆ. ಇದು ಎಲ್ಲಾ ಜಾಗತಿಕ ಕಡಲ (ಸಮುದ್ರ) ವ್ಯಾಪಾರದ 60 ಪ್ರತಿಶತವನ್ನು ಹೊಂದಿದೆ. ಇದು ಹಿಂದೂ ಮಹಾಸಾಗರವನ್ನು ಪೆಸಿಫಿಕ್ ಮಹಾಸಾಗರಕ್ಕೆ ಸಂಪರ್ಕಿಸುತ್ತದೆ. ಈ ಪ್ರದೇಶವು ವಿಶ್ವದ ಒಟ್ಟು ದೇಶೀಯ ಉತ್ಪನ್ನದ ಶೇಕಡಾ 60 ಕ್ಕಿಂತ ಹೆಚ್ಚು ಮತ್ತು ವಿಶ್ವದ ಸಮುದ್ರಮಾರ್ಗ ಶಕ್ತಿಯ ಸುಮಾರು 70 ಪ್ರತಿಶತವನ್ನು ಹೊಂದಿದೆ. ಇಂಡೋ–ಪೆಸಿಫಿಕ್ ತನ್ನ ಆಕ್ಟ್ ಈಸ್ಟ್ ಚೌಕಟ್ಟಿನಡಿಯಲ್ಲಿ ಭಾರತದ ವಿದೇಶಾಂಗ ನೀತಿಯ ಕೇಂದ್ರಬಿಂದುವಾಗಿದೆ. ಇಂಡೋನೇಷ್ಯಾ ಭಾರತಕ್ಕೆ ಕಾರ್ಯತಂತ್ರದ ಕಡಲ ಪಾಲುದಾರಿಕೆ ಮತ್ತು ಆಸಿಯಾನ್ ಆರ್ಥಿಕ ಬಣಕ್ಕೆ ಪ್ರವೇಶ ದ್ವಾರವನ್ನು ನೀಡುತ್ತದೆ.


ಹಾರ್ಮುಜ್ ಜಲಸಂಧಿಯು ವಿಶ್ವದ ಅತ್ಯಂತ ನಿರ್ಣಾಯಕ ಕಡಲ ಗಡಿಗಳಲ್ಲಿ ಒಂದಾಗಿದ್ದು, ಜಾಗತಿಕ ತೈಲ ಸಾಗಣೆಯ ಸರಿಸುಮಾರು ಐದನೇ ಒಂದು ಭಾಗವನ್ನು ಹೊಂದಿದೆ. ಇರಾನ್ ವಿರುದ್ಧದ ಇತ್ತೀಚಿನ ಇಸ್ರೇಲಿ–ಯುಎಸ್ ಯುದ್ಧದ ಸಮಯದಲ್ಲಿ, ಹಾರ್ಮುಜ್‌ನಲ್ಲಿನ ಅಡಚಣೆಯು ಜಾಗತಿಕ ಇಂಧನ ಪೂರೈಕೆ ಸರಪಳಿಗಳ



ದುರ್ಬಲತೆ ಮತ್ತು ಕಡಲ ಭದ್ರತೆ ಮತ್ತು ಆರ್ಥಿಕ ಸ್ಥಿರತೆಯ ನಡುವಿನ ಆಳವಾದ ಸಂಪರ್ಕವನ್ನು ಎತ್ತಿ ತೋರಿಸಿತು. ತಕ್ಷಣದ ಬಿಕ್ಕಟ್ಟು ಕಡಿಮೆಯಾದರೂ, ಈ ಸಂಚಿಕೆಯು ಶಾಶ್ವತ ಪಾಠವನ್ನು ಬಲಪಡಿಸಿತು: ಕಡಲ ಭದ್ರತೆಯು ಜಾಗತಿಕ ಆರ್ಥಿಕ ಸ್ಥಿರತೆಯಿಂದ ಬೇರ್ಪಡಿಸಲಾಗದು.

## ಉಕ್ರೇನ್ ಮೇಲೆ ರಷ್ಯಾ ಮಾರಕ ದಾಳಿ: 11 ಜನರ ಸಾವು, 60 ಮಂದಿಗೆ ಗಾಯ

**ಕೀವ್/ಮಾಸ್ಕೋ, ಜುಲೈ 6:** ಈ ವರ್ಷದ ಆರಂಭದಲ್ಲಿ ರಷ್ಯಾ ಕೈವ್ ಮೇಲೆ ತನ್ನ ಅತ್ಯಂತ ಮಾರಕ ದಾಳಿಗಳಲ್ಲಿ ಒಂದನ್ನು ನಡೆಸಿದ್ದು, ಬೃಹತ್ ಕ್ಷಿಪಣಿ ಮತ್ತು ಡ್ರೋನ್ ದಾಳಿಯಲ್ಲಿ ಕನಿಷ್ಠ 11 ಜನರು ಸಾವನ್ನಪ್ಪಿದ್ದಾರೆ ಮತ್ತು 60 ಜನರು ಗಾಯಗೊಂಡಿದ್ದಾರೆ ಎಂದು ಉಕ್ರೇನಿಯನ್ ಅಧಿಕಾರಿಗಳು ಹೇಳಿರುವ ಬೃಹತ್ ಕ್ಷಿಪಣಿ ಮತ್ತು ಡ್ರೋನ್ ದಾಳಿಯು ದೇಶದ ವಾಯು ರಕ್ಷಣಾ ಜಾಲದಲ್ಲಿ ಬೆಳೆಯುತ್ತಿರುವ ದೌರ್ಬಲ್ಯಗಳನ್ನು ಬಹಿರಂಗಪಡಿಸಿದೆ. ಉಕ್ರೇನ್ನ ವಾಯುಪಡೆಯ ಪ್ರಕಾರ, ರಷ್ಯಾ ರಾತ್ರಿಯಿಡೀ ನೂರಾರು ಡ್ರೋನ್‌ಗಳು ಮತ್ತು ಡಜನ್‌ಗಟ್ಟಲೆ ಕ್ಷಿಪಣಿಗಳನ್ನು ಹಾರಿಸಿದೆ, ಕೈವ್ ಪ್ರಾಥಮಿಕ ಗುರಿಯಾಗಿತ್ತು. ದಾಳಿಯ ಸಮಯದಲ್ಲಿ ಉಡಾಯಿಸಲಾದ ಎಲ್ಲಾ 29 ಬ್ಯಾಲಿಸ್ಟಿಕ್ ಕ್ಷಿಪಣಿಗಳು ತಮ್ಮ ಗುರಿಗಳನ್ನು ತಲುಪಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ, ಉಕ್ರೇನಿಯನ್ ಅಧಿಕಾರಿಗಳು ಪೇಟ್ರಿಯಾಟ್ ಇಂಟರ್‌ಸೆಪ್ಟರ್ ಕ್ಷಿಪಣಿಗಳ ತೀವ್ರ ಕೊರತೆ ಎಂದು ವಿವರಿಸುತ್ತಾರೆ. ಕೈವ್ನಲ್ಲಿ ಮತ್ತೊಂದು ರಷ್ಯಾದ ದಾಳಿ 31 ಜನರನ್ನು




ಕೊಂದ ಕೆಲವೇ ದಿನಗಳಲ್ಲಿ ಮತ್ತು ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ದೊಡ್ಡ ಪ್ರಮಾಣದ ದಾಳಿ ಸನ್ನಿಹಿತವಾಗಿದೆ ಎಂದು ಎಚ್ಚರಿಸಿದ ಕೆಲವೇ ಗಂಟೆಗಳ ನಂತರ ಈ ದಾಳಿ ನಡೆದಿದೆ. "ಉಕ್ರೇನಿಯನ್ ಪಡೆಗಳು ಡ್ರೋನ್‌ಗಳು ಮತ್ತು ಕ್ರೂಸ್ ಕ್ಷಿಪಣಿಗಳ ವಿರುದ್ಧ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ, ಆದರೆ ಬ್ಯಾಲಿಸ್ಟಿಕ್ ಕ್ಷಿಪಣಿಗಳ ವಿರುದ್ಧ ಅಲ್ಲ" ಎಂದು ಝೆಲೆನ್ಸ್ಕಿ ಹೇಳಿದರು. "ಪೇಟ್ರಿಯಾಟ್ ಕ್ಷಿಪಣಿಗಳು ನಮ್ಮ ಮಿತ್ರರಾಷ್ಟ್ರಗಳ ದಾಸ್ತಾನುಗಳಲ್ಲಿ ಇರುವವರೆಗೆ, ರಷ್ಯಾ ವಸತಿ ಕಟ್ಟಡಗಳನ್ನು 'ವಿಜಯಿಸಲು' ಮಾತ್ರ ಪ್ರೋತ್ಸಾಹಿಸಲಾಗುತ್ತದೆ. ಅಮೆರಿಕ ಮತ್ತು ಯುರೋಪ್ ಈ ಭಯೋತ್ಪಾದನೆಯನ್ನು ನಿಲ್ಲಿಸಲು ಸಾಕಷ್ಟು ಶಕ್ತಿಯನ್ನು ಹೊಂದಿವೆ." ಇತ್ತೀಚಿನ ಉಕ್ರೇನಿಯನ್ ದೀರ್ಘ–ಶ್ರೇಣಿಯ ದಾಳಿಗಳಿಗೆ ಪ್ರತಿಕ್ರಿಯೆಯಾಗಿ ಈ ದಾಳಿಗಳನ್ನು ನಡೆಸಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ. ಡ್ರೋನ್ಗಳು, ಕ್ಷಿಪಣಿಗಳು, ಶಸ್ತ್ರಸಜ್ಜಿತ ವಾಹನಗಳು ಮತ್ತು ವಾಯು–ರಕ್ಷಣಾ ಉಪಕರಣಗಳ ಉತ್ಪಾದನೆಯಲ್ಲಿ ಭಾಗಿಯಾಗಿರುವ ಸ್ಥಳಗಳು ಹಾಗೂ ಇಂಧನ ಮತ್ತು ಇಂಧನ ಮೂಲಸೌಕರ್ಯ ಸೇರಿದಂತೆ ಕೈವ್‌ನಲ್ಲಿರುವ ಮಿಲಿಟರಿ–ಕೈಗಾರಿಕಾ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಮಾಸ್ಕೋ ಹೇಳಿಕೊಂಡಿದೆ. ಆದಾಗ್ಯೂ, ಕೈವ್ ಬ್ಯಾಲಿಸ್ಟಿಕ್ ಕ್ಷಿಪಣಿಗಳ ವಿರುದ್ಧ ರಕ್ಷಣೆಗಾಗಿ ಅಮೆರಿಕದ ಪೇಟ್ರಿಯಾಟ್ ವ್ಯವಸ್ಥೆಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ, ಇಂಟರ್‌ಸೆಪ್ಟರ್‌ಗಳಿಗೆ ಜಾಗತಿಕ ಬೇಡಿಕೆ ಹೆಚ್ಚಾದಂತೆ ಕೊರತೆ ಹೆಚ್ಚು ತೀವ್ರವಾಗುತ್ತಿದೆ, ಆದರೆ ವಾಷಿಂಗ್ಟನ್ ಸ್ವತಃ ದೇಶೀಯ ಕೊರತೆಯನ್ನು ಎದುರಿಸಲು ಪ್ರಾರಂಭಿಸಿದೆ, ಜಾಗತಿಕ ಮತ್ತು ದೇಶೀಯ ಆದೇಶಗಳು ಉತ್ಪಾದನಾ ಸಾಮರ್ಥ್ಯವನ್ನು ಮೀರಿಸಿದೆ. ಇತ್ತೀಚಿನ ದಾಳಿಯು ಮತ್ತೊಮ್ಮೆ ನಾಗರಿಕ ಪ್ರದೇಶಗಳನ್ನು ಹೊಡೆದಿದೆ. ಯುಎನ್ ಅಂದಾಜಿನ ಪ್ರಕಾರ, ರಷ್ಯಾ–ಉಕ್ರೇನ್ ಯುದ್ಧದ ಆರಂಭದಿಂದಲೂ ಈಗ ನಾಲ್ಕನೇ ವರ್ಷದಲ್ಲಿರುವಾಗ 16,000ಕ್ಕೂ ಹೆಚ್ಚು ಉಕ್ರೇನಿಯನ್ ನಾಗರಿಕರು ಸಾವನ್ನಪ್ಪಿದ್ದಾರೆ.



ಇಂಡೋನೇಷ್ಯಾ ಭೇಟಿಗೆ ಜಕಾರ್ತಾಗೆ ಬಂದಿಳಿದ ಪ್ರಧಾನಿ ನರೇಂದ್ರ ಮೋದಿಗೆ ಭವ್ಯ ಸ್ವಾಗತ ನೀಡಲಾಯಿತು.

## ಖಮೇನಿ ಅಂತ್ಯಕ್ರಿಯೆಯಲ್ಲಿ ಭಾಗಿ ಭಾರತಕ್ಕೆ ಕೃತಜ್ಞತೆ ಸಲ್ಲಿಸಿದ ಇರಾನ್



**ನವದೆಹಲಿ, ಜು.6:** ಇರಾನ್‌ನ ಪರಮೋಚ್ಚ ನಾಯಕ ಆಯತ್‌ಉಲ್ಲಾ ಸಯ್ಯದ್ ಅಲಿ ಖಮೇನಿ ಅವರ ಅಂತ್ಯಕ್ರಿಯೆಯ ಸಂದರ್ಭದಲ್ಲಿ, ಭಾರತ ಸರ್ಕಾರ ಮತ್ತು ಭಾರತದ ಜನತೆ ತೋರಿದ ಬೆಂಬಲ ಹಾಗೂ ಭಾಗಿಯಾಗಿದ್ದಕ್ಕೆ ಭಾರತದಲ್ಲಿರುವ ಇರಾನ್ ರಾಯಭಾರ ಕಚೇರಿಯು ಧನ್ಯವಾದಗಳನ್ನು ಅರ್ಪಿಸಿದೆ.

ಭಾರತದ ರಾಜಕೀಯ ನಾಯಕರು, ಸಂಸದರು, ವಿದ್ವಾಂಸರು, ಬುದ್ಧಿಜೀವಿಗಳು ಮತ್ತು ವಿವಿಧ ಧರ್ಮಗಳ ಪ್ರತಿನಿಧಿಗಳು ಈ ಶೋಕಾಚರಣೆಯ ಅಂತ್ಯಕ್ರಿಯೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದು ಉಭಯ ದೇಶಗಳ ನಡುವಿನ ಆಳವಾದ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಮಾನವೀಯ ಸಂಬಂಧಗಳನ್ನು ಪ್ರತಿಬಿಂಬಿಸುತ್ತದೆ ಎಂದು ಇರಾನ್ ರಾಯಭಾರ ಕಚೇರಿಯು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದೆ. ಭಾರತ ತೋರಿದ ಈ ಸ್ನೇಹ, ಸಹಾನುಭೂತಿ ಮತ್ತು ಹೃತ್ಪೂರ್ವಕ ಗೌರವದ ನಡೆಯನ್ನು ಇರಾನ್ ಜನತೆ ಎಂದಿಗೂ ಮರೆಯುವುದಿಲ್ಲ. ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಮತ್ತು ಭಾರತ ನಡುವಿನ ಶಾಶ್ವತ ಬಾಂಧವ್ಯಕ್ಕೆ ಇದು ಅಮೂಲ್ಯ ಸಾಕ್ಷಿಯಾಗಿದೆ ಎಂದು ಕೃತಜ್ಞತೆ ಸಲ್ಲಿಸಿದೆ.ಭಾರತದ ಪರವಾಗಿ ಕೇಂದ್ರ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಪಬಿತ್ರಾ ಮಾರ್ಗರಿಟಾ ಮತ್ತು ಬಿಹಾರದ ರಾಜ್ಯಪಾಲ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸಯ್ಯದ್ ಅತಾ ಹಸ್ನೈನ್ ಅವರು ತೆಹ್ರಾನ್ನಲ್ಲಿ ನಡೆದ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಭಾರತವನ್ನು ಪ್ರತಿನಿಧಿಸಿದ್ದರು. ಇವರೊಂದಿಗೆ ಹಿರಿಯ ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಮತ್ತು ಜೆಕೆಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಕೂಡ ತೆಹ್ರಾನ್‌ಗೆ ಭೇಟಿ ನೀಡಿ ಇರಾನ್ ದೇಶಕ್ಕೆ ಸಾಂತ್ವನ ಹೇಳಿದ್ದರು.

## ಮಾರಕ ಬಿಸಿಗಾಳಿ:ಅಮೆರಿಕದಲ್ಲಿ 24 ಜನರ ಸಾವು

**ವಾಷಿಂಗ್ಟನ್, ಜು.6:** ಅಮೆರಿಕದ ದೊಡ್ಡ ಭಾಗಗಳಲ್ಲಿ ಬೀಸುತ್ತಿರುವ ದೀರ್ಘಕಾಲದ ಶಾಖದ ಅಲೆಯಲ್ಲಿ ಕನಿಷ್ಠ 24 ಜನರು ಸಾವನ್ನಪ್ಪಿದ್ದಾರೆ, ದೇಶಾದ್ಯಂತ ಆರೋಗ್ಯದ ಅಪಾಯಗಳು ಮುಂದುವರಿಯುವ ಬಗ್ಗೆ ಮುನ್ಸೂಚಕರು ಎಚ್ಚರಿಸಿರುವುದರಿಂದ ಸುಮಾರು 40 ದಶಲಕ್ಷ ಜನರು ಶಾಖದ ಎಚ್ಚರಿಕೆಯಲ್ಲಿದ್ದಾರೆ ಎಂದು ಆಕ್ಸಿಯಾಸ್ ವರದಿ ಮಾಡಿದೆ. ತೀವ್ರ ಶಾಖವು ದೇಶದ ಅತ್ಯಂತ ಮಾರಕ ಹವಾಮಾನ ಅಪಾಯವಾಗಿದೆ ಮತ್ತು ಹೆಚ್ಚುತ್ತಿರುವ ಸಾವಿನ ಸಂಖ್ಯೆಯು ದೀರ್ಘಕಾಲದ ಶಾಖ ಎಷ್ಟು ಅಪಾಯಕಾರಿ ಎಂಬುದನ್ನು ಒತ್ತಿಹೇಳುತ್ತದೆ. ಮಧ್ಯಪಶ್ಚಿಮದಿಂದ ಪೂರ್ವ ಕರಾವಳಿಯವರೆಗೆ ವ್ಯಾಪಿಸಿರುವ ಪ್ರಬಲವಾದ ಶಾಖದ ಗುಮ್ಮಟವು ಹತ್ತಾರು ಮಿಲಿಯನ್ ಅಮೆರಿಕನ್ನರನ್ನು ಅಸಾಧಾರಣವಾದ ಹೆಚ್ಚಿನ ತಾಪಮಾನದ ದಿನಗಳ ಒಳಗಾಗಿಸಿದೆ, ಇದು ವಾರಪೂರ್ತಿ ನಡೆದ ಶಾಖದ ಅಲೆಯನ್ನು ಬೇಸಿಗೆಯ ಇದುವರೆಗಿನ ಅತ್ಯಂತ ಮಾರಕ ಹವಾಮಾನ ಘಟನೆಗಳಲ್ಲಿ ಒಂದಾಗಿದೆ. ನ್ಯೂಜೆರ್ಸಿಯಲ್ಲಿ ಅತಿ ಹೆಚ್ಚು ಸಾವುನೋವುಗಳು ದಾಖಲಾಗಿವೆ, ವಾರಾಂತ್ಯದಲ್ಲಿ ರಾಜ್ಯ ಅಧಿಕಾರಿಗಳು 22 ಶಾಖ–ಸಂಬಂಧಿತ ಸಾವುಗಳನ್ನು ಘೋಷಿಸಿದ್ದಾರೆ. ಸ್ಥಳೀಯ ಅಧಿಕಾರಿಗಳ ಪ್ರಕಾರ, ತೀವ್ರ ತಾಪಮಾನಕ್ಕೆ ಸಂಬಂಧಿಸಿದ ಹೆಚ್ಚುವರಿ ಸಾವುಗಳು ಇಲಿನಾಯ್ಸ್ನ ಕುಕ್ ಕೌಂಟಿ ಮತ್ತು ಮಿಸಿಸಿಪ್ಪಿಯ ಹಿಂಡ್ಸ್ ಕೌಂಟಿಯಲ್ಲಿ ವರದಿಯಾಗಿವೆ.



ಅತ್ಯಂತ ಗಮನಾರ್ಹ ದಾಖಲೆಗಳಲ್ಲಿ ಅಮೆರಿಕ ರಾಜಧಾನಿಯ ರೊನಾಲ್ಡ್ ರೇಗನ್ ವಾಷಿಂಗ್ಟನ್ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ಥಾಪಿಸಲಾದವುಗಳು ಸೇರಿವೆ. ಜುಲೈ 3 ರಂದು ತಾಪಮಾನವು 102°F (38.9°C) ತಲುಪಿತು, ಇದು ಹಿಂದಿನ ದಾಖಲೆಯನ್ನು ಸರಿಗಟ್ಟಿತ್ತು, ನಂತರ ಜುಲೈ 4 ರಂದು ದಾಖಲೆಯ 103°F (39.4°C) ಗೆ ಏರಿತು. ಪೂರ್ವ ಅಮೆರಿಕದ ಹೆಚ್ಚಿನ ಭಾಗಗಳಲ್ಲಿ ಬಿಸಿ ಗಾಳಿಯನ್ನು ಹಿಡಿದಿಟ್ಟುಕೊಂಡ ನಿರಂತರ ಅಧಿಕ ಒತ್ತಡದ ವ್ಯವಸ್ಥೆಯಿಂದ ಶಾಖದ ಅಲೆ ತೀವ್ರಗೊಂಡಿತು, ಇದು ಅಪಾಯಕಾರಿ ಹಗಲಿನ ತಾಪಮಾನ ಮತ್ತು ಅಸಾಮಾನ್ಯವಾಗಿ ಬೆಚ್ಚಗಿನ ರಾತ್ರಿಗಳಿಗೆ ಕಾರಣವಾಯಿತು ಎಂದು ಹವಾಮಾನಶಾಸ್ತ್ರಜ್ಞರು ಹೇಳಿದ್ದಾರೆ.

ಇತ್ತೀಚಿನ ಅಧ್ಯಯನಗಳು ಹೆಚ್ಚುತ್ತಿರುವ ಜಾಗತಿಕ ತಾಪಮಾನವು ಉತ್ತರ ಅಮೆರಿಕಾ, ಯುರೋಪ್ ಮತ್ತು ಇತರ ಪ್ರದೇಶಗಳಲ್ಲಿ ಹೆಚ್ಚು ತೀವ್ರವಾದ ಶಾಖದ ಘಟನೆಗಳಿಗೆ ಸಂಬಂಧಿಸಿದೆ. ಜಾಗತಿಕವಾಗಿ ತೀವ್ರತರವಾದ ತಾಪಮಾನದ ವ್ಯಾಪಕ ಅವಧಿಯ ನಡುವೆ ಶಾಖದ ಅಲೆ ಬರುತ್ತದೆ. ತಂಪಾದ ಗಾಳಿ ಮತ್ತು ವ್ಯಾಪಕ ಮಳೆಯು ಮಧ್ಯ–ಅಟ್ಲಾಂಟಿಕ್ ಮತ್ತು ಈಶಾನ್ಯದ ಭಾಗಗಳಿಗೆ ಚಲಿಸುವಾಗ ವಾರದ ಆರಂಭದಲ್ಲಿ ದೇಶದ ಕೆಲವು ಭಾಗಗಳಲ್ಲಿನ ಪರಿಸ್ಥಿತಿಗಳು ಕ್ರಮೇಣ ಸುಧಾರಿಸುವ ನಿರೀಕ್ಷೆಯಿದೆ ಎಂದು ಮುನ್ಸೂಚಕರು ಹೇಳುತ್ತಾರೆ. ಆದಾಗ್ಯೂ, ಆಗ್ನೇಯದಾದ್ಯಂತ ಸರಾಸರಿಗಿಂತ ಹೆಚ್ಚಿನ ತಾಪಮಾನವು ಮುಂದುವರಿಯುವ ನಿರೀಕ್ಷೆಯಿದೆ, ಕೆರೊಲಿನಾಸ್ ಮತ್ತು ಉತ್ತರ ಫ್ಲೋರಿಡಾದಲ್ಲಿ 90 ರ ದಶಕದ ಫ್ಯಾರನ್‌ಹೀಟ್‌ವರೆಗೆ ಗರಿಷ್ಠ ತಾಪಮಾನವು ಉಳಿಯುತ್ತದೆ. 70 ರ ದಶಕದಲ್ಲಿ ಮತ್ತು 80°F ಬಳಿ ಉಳಿದಿರುವ ಹೆಚ್ಚಿನ ಆರ್ದ್ರತೆ ಮತ್ತು ರಾತ್ರಿಯ ತಾಪಮಾನವು ಅಪಾಯಕಾರಿ ಪರಿಸ್ಥಿತಿಗಳನ್ನು ಸೃಷ್ಟಿಸುವುದನ್ನು ಮುಂದುವರಿಸುತ್ತದೆ ಎಂದು ರಾಷ್ಟ್ರೀಯ ಹವಾಮಾನ ಸೇವೆ ಎಚ್ಚರಿಸಿದೆ. "70 ರಿಂದ 80 ಡಿಗ್ರಿಗಳವರೆಗೆ ಹೆಚ್ಚಿನ ಆರ್ದ್ರತೆ ಮತ್ತು ರಾತ್ರಿಯ ಬೆಚ್ಚಗಿನ ಕನಿಷ್ಠ ತಾಪಮಾನದೊಂದಿಗೆ ಸೇರಿ, ಈ ಪರಿಸ್ಥಿತಿಗಳು ಶಾಖ–ಸಂಬಂಧಿತ ಅನಾರೋಗ್ಯದ ಅಪಾಯವನ್ನು ಹೆಚ್ಚಿಸುತ್ತಲೇ ಇರುತ್ತವೆ, ವಿಶೇಷವಾಗಿ ಸಾಕಷ್ಟು ತಂಪಾಗಿಸುವಿಕೆ ಅಥವಾ ಜಲಸಂಚಯನವಿಲ್ಲದವರಿಗೆ" ಎಂದು ಸಂಸ್ಥೆ ಹೇಳಿದೆ.

## ಇರಾನ್ ವಿರುದ್ಧ ಡೊನಾಲ್ಡ್ ಟ್ರಂಪ್ ಮಿಲಿಟರಿ ಬೆದರಿಕೆ

**ವಾಷಿಂಗ್ಟನ್, ಜು.6:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಇರಾನ್ ವಿರುದ್ಧ ಮಿಲಿಟರಿ ಕ್ರಮದ ಬೆದರಿಕೆಯನ್ನು ನವೀಕರಿಸಿದ್ದಾರೆ, ವಾಷಿಂಗ್ಟನ್ ಟೆಹ್ರಾನ್ ಜೊತೆ ಒಪ್ಪಂದಕ್ಕೆ ಬರಲಿದೆ ಅಥವಾ "ಕೆಲಸವನ್ನು ಮುಗಿಸಲಿದೆ" ಎಂದು ಹೇಳಿದ್ದಾರೆ. ಓವಲ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಯುಎಸ್ ಮಿಲಿಟರಿ ಕಾರ್ಯಾಚರಣೆಯ ಎಚ್ಚರಿಕೆಯಲ್ಲಿದೆ ಮತ್ತು ಮಾತುಕತೆಗಳು ವಿಫಲವಾದರೆ ಕಾರ್ಯಾಚರಣೆಯನ್ನು ಮುಂದುವರಿಸಲು ಸಿದ್ಧವಾಗಿದೆ ಎಂದು ಹೇಳಿದರು. "ನಾವು ಒಪ್ಪಂದ ಮಾಡಿಕೊಳ್ಳಲಿದ್ದೇವೆ ಅಥವಾ ನಾವು ಕೆಲಸವನ್ನು ಮುಗಿಸಲಿದ್ದೇವೆ." ಮತ್ತು ಕೆಲಸವನ್ನು ಮುಗಿಸುವುದು ಕಷ್ಟಕರವಲ್ಲ. ನಾನು ಒಪ್ಪಂದ ಮಾಡಿಕೊಳ್ಳಲು ಬಯಸುತ್ತೇನೆ, ಏಕೆಂದರೆ ನಾನು 91 ದಶಲಕ್ಷ ಜನರ ಮೇಲೆ ಪರಿಣಾಮ ಬೀರಲು ಬಯಸುವುದಿಲ್ಲ" ಎಂದು ಟ್ರಂಪ್ ಹೇಳಿದರು.

"ನಾವು ಅವರ ಸೇತುವೆಗಳನ್ನು ಒಂದು ಗಂಟೆಯಲ್ಲಿ ಕೆಡವಬಹುದು, ನಾವು ಅವರ



ಇಂಧನ ಪೂರೈಕೆಯನ್ನು ನಿಲ್ಲಿಸಬಹುದು. ಅವರ ಬಳಿ ಈಗ ಹಣವಿಲ್ಲ. "ನಾವು ಅವರಿಗೆ ಯಾವುದೇ ಹಣವನ್ನು ನೀಡಿಲ್ಲ." ಪರೋಕ್ಷ ಯುಎಸ್–ಇರಾನ್ ಮಾತುಕತೆಗಳು ಸಾರ್ವಜನಿಕವಾಗಿ ಘೋಷಿಸಲಾದ ಯಾವುದೇ ಪ್ರಗತಿಯಿಲ್ಲದೆ ಮುಕ್ತಾಯಗೊಂಡ ಕೆಲವು ದಿನಗಳ ನಂತರ ಈ ಹೇಳಿಕೆಗಳು ಬಂದವು. ಈ ವರ್ಷದ ಆರಂಭದಲ್ಲಿ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲಿ ದಾಳಿಗಳಿಂದ ಉಂಟಾದ ಸಂಘರ್ಷದ ನಂತರ ಒಪ್ಪಿಕೊಂಡ 60 ದಿನಗಳ ಕದನ ವಿರಾಮವನ್ನು ನಿರ್ಮಿಸುವ ಉದ್ದೇಶವನ್ನು ಮಾತುಕತೆಗಳು ಹೊಂದಿದ್ದವು. ಮಾತುಕತೆಯ ಸಮಯದಲ್ಲಿ ಇರಾನ್ ಈಗಾಗಲೇ ರಿಯಾಯಿತಿಗಳನ್ನು ನೀಡಿದೆ ಎಂದು ಟ್ರಂಪ್ ಹೇಳಿಕೊಂಡರು, ಆದರೂ ಅಂತಿಮ ಒಪ್ಪಂದವನ್ನು ಇನ್ನೂ ತಲುಪಲಾಗಿಲ್ಲ ಎಂದು ಅವರು ಒಪ್ಪಿಕೊಂಡರು. "ನಮಗೆ ರಿಯಾಯಿತಿಗಳು ಸಿಕ್ಕಿವೆ, ಈಗ ಅವರು ಆ ರಿಯಾಯಿತಿಗಳನ್ನು ಹಿಡಿದಿಟ್ಟುಕೊಳ್ಳಬೇಕು" ಎಂದು ಅವರು ಹೇಳಿದರು. ಭವಿಷ್ಯದ ಯಾವುದೇ ಪರಮಾಣು ಒಪ್ಪಂದವು ವಾಷಿಂಗ್ಟನ್‌ಗೆ ಇರಾನ್‌ನ ಹೆಚ್ಚು ಸಮೃದ್ಧ ಯುರೇನಿಯಂನ ದಾಸ್ತಾನು ತೆಗೆದುಹಾಕಲು ಅನುವು ಮಾಡಿಕೊಡುತ್ತದೆ ಎಂಬ ತಮ್ಮ ಹೇಳಿಕೆಯನ್ನು ಅವರು ಪುನರುಚ್ಚರಿಸಿದರು, ಆದರೂ ಇರಾನ್ ಅಧಿಕಾರಿಗಳು ಆ ಪ್ರಸ್ತಾಪವನ್ನು ಪದೇ ಪದೇ ತಿರಸ್ಕರಿಸಿದ್ದಾರೆ, ಇದು ನಡೆಯುತ್ತಿರುವ ಮಾತುಕತೆಗಳ ಅತ್ಯಂತ ಸೂಕ್ಷ್ಮ ಮತ್ತು ಮುಳ್ಳಿನ ಭಾಗಗಳಲ್ಲಿ ಒಂದಾಗಿದೆ. "ನಾವು ಬಹುಶಃ ಒಪ್ಪಂದ ಮಾಡಿಕೊಳ್ಳುವ ಹತ್ತಿರದಲ್ಲಿದ್ದೇವೆ, ನನಗೆ ಗೊತ್ತಿಲ್ಲ. ನಾವು ಒಂದಲ್ಲ ಒಂದು ರೀತಿಯಲ್ಲಿ ಗೆಲ್ಲುತ್ತೇವೆ" ಎಂದು ಟ್ರಂಪ್ ಹೇಳಿದರು. ಟ್ರಂಪ್ ಅವರ ಆಶಾವಾದಿ ಸ್ವರದ ಹೊರತಾಗಿಯೂ, ಮಾತುಕತೆಗಳು ಪ್ರಸ್ತುತ ಸ್ಥಗಿತಗೊಂಡಿವೆ, ಏಕೆಂದರೆ ಇರಾನ್ನ ದಿವಂಗತ ಸರ್ವೋಚ್ಚ ನಾಯಕ ಆಯತ್‌ಉಲ್ಲಾ ಅಲಿ ಖಮೇನಿ ಅವರ ಅಂತ್ಯಕ್ರಿಯೆ ಸಮಾರಂಭಗಳು ಪ್ರಸ್ತುತ ನಡೆಯುತ್ತಿರುವುದರಿಂದ ಎರಡೂ ಕಡೆಯವರು ಚರ್ಚೆಗಳನ್ನು ನಿಲ್ಲಿಸಲು ಒಪ್ಪಿಕೊಂಡಿದ್ದಾರೆ, ನಂತರ ಪರೋಕ್ಷ ಮಾತುಕತೆಗಳು ಪುನರಾರಂಭಗೊಳ್ಳುವ ನಿರೀಕ್ಷೆಯಿದೆ.

## ಅಂಡರ್–23 ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ ವಿಶ್ವನಾಥ್, ಗಂಗಾ, ಹಿತೇಶ್ ಪ್ರಬಲ ಗೆಲುವು

**ಜಕಾರ್ತಾ, ಜು.6:** ಏಷ್ಯನ್ ಚಾಂಪಿಯನ್ ವಿಶ್ವನಾಥ್ ಸುರೇಶ್ (50 ಕೆಜಿ) ಭಾರತದ ಅಂಡರ್–23 ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನ 2ನೇ ದಿನದಂದು ಭಾರತದ ಪ್ರಬಲ ಪ್ರದರ್ಶನಕ್ಕೆ ಕಾರಣರಾದರು, ಸೋಮವಾರ ಇಲ್ಲಿ ಉಜ್ಬೇಕಿಸ್ತಾನದ ಅಮಿರ್ಬೆಕ್ ಇಸ್ಮೊಯಿಲೋವ್ ವಿರುದ್ಧ 5:0 ಅಂತರದ ಜಯ ಸಾಧಿಸಿದರು. ಪುರುಷರ ವಿಭಾಗದಲ್ಲಿ ಭಾರತದ ಅದ್ಭುತ ಓಟವನ್ನು ಮುಂದುವರೆಸಿದ ಗಂಗಾ (55 ಕೆಜಿ) ಮಂಗೋಲಿಯಾದ ಅಮ್ಗಲನ್ಬಾತರ್ ಬಲ್ಗಂಖು ಅವರನ್ನು ಸರ್ವಾನುಮತದಿಂದ 5:0 ಅಂತರದ ನಿರ್ಣಯದಿಂದ ಸೋಲಿಸುವ ಮೂಲಕ ಕ್ಲಿನಿಕಲ್ ಪ್ರದರ್ಶನ ನೀಡಿದರು. ಹಿತೇಶ್ (70 ಕೆಜಿ) ಚೈನೀಸ್ ತೈಪೆಯ ಜುನ್–ಜಾಂಗ್ಲಿನ್ ವಿರುದ್ಧ 5:0 ಅಂತರದ ಗೆಲುವಿನೊಂದಿಗೆ ಭಾರತದ ಆವೇಗವನ್ನು ಹೆಚ್ಚಿಸಿದರು, ತೂಕ ವಿಭಾಗಗಳಲ್ಲಿ ಭಾರತದ ಆಳವನ್ನು ಒತ್ತಿ ಹೇಳಿದರು. 60 ಕೆಜಿ ಸ್ಪರ್ಧೆಯಲ್ಲಿ, ಸಾಗರ್ ಜಖರ್ ಹಿನ್ನಡೆಯನ್ನು ಎದುರಿಸಿದರು, ಜಪಾನ್‌ನ ಕೊಯಿಚಿ ನಕಯಾಮಾ ವಿರುದ್ಧ ಅನರ್ಹತೆಯಿಂದ ಸೋತರು. ಮಹಿಳಾ ವಿಭಾಗದಲ್ಲಿ, ತನು (51 ಕೆಜಿ) ಕೊರಿಯಾದ ಯೊಂಗ್ಯೆಯಾನ್ ಕಿಮ್ ವಿರುದ್ಧ 5:0 ಅಂತರದ ಆತ್ಮವಿಶ್ವಾಸದ ಜಯ ಸಾಧಿಸುವ ಮೂಲಕ ಭಾರತದ ಗೆಲುವಿನ



ಓಟವನ್ನು ವಿಸ್ತರಿಸಿದರು, ಪಂದ್ಯದ ಉದ್ದಕ್ಕೂ ನಿಯಂತ್ರಣ ಮತ್ತು ನಿಖರತೆಯನ್ನು ಪ್ರದರ್ಶಿಸಿದರು. ಸ್ಪರ್ಧೆಯ ಆರಂಭದಲ್ಲಿ ಭಾರತದ ಬಲವಾದ ಪ್ರದರ್ಶನವು ಜುಲೈ 5 ರಿಂದ ಜುಲೈ 16 ರವರೆಗೆ ಜಕಾರ್ತದಲ್ಲಿ ನಡೆಯಲಿರುವ ಕಾಂಟಿನೆಂಟಲ್ ಈವೆಂಟ್‌ನಲ್ಲಿ ತಂಡದ ಘನ ತಯಾರಿ ಮತ್ತು ಉನ್ನತ ಗೌರವಗಳಿಗಾಗಿ ಸವಾಲು ಹಾಕುವ ಉದ್ದೇಶವನ್ನು ಪ್ರತಿಬಿಂಬಿಸುತ್ತದೆ. ಅನೇಕ ಬಾಕ್ಸರ್ಗಳು ತಮ್ಮ ವಿಭಾಗಗಳಲ್ಲಿ ಮುನ್ನಡೆಯುತ್ತಿರುವುದರಿಂದ, ಚಾಂಪಿಯನ್‌ಶಿಪ್ ಮುಂಬರುವ ದಿನಗಳಲ್ಲಿ ಭಾರತ ಈ ಆವೇಗವನ್ನು ಹೆಚ್ಚಿಸಲು ನೋಡುತ್ತದೆ.